

# ಅಖಿಲ ಭಾರತ ಪತ್ರಿಕೆ

ಏಪ್ರಿಲ್ 2018

## ಭವಿಷ್ಯತ್ತಿನ ಬೀಜಗಳನ್ನು ಬಿತ್ತುವುದು

ಬೆಲೆ : 15/–



*There is no greater victory than*
*8that of controlling oneself.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು :**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್.ಡಿ.
ಶಿವಗಿರಿ, ಧಾರವಾಡ – 580007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ.**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಆಫ್‌ಸೆಟ್ ಮುದ್ರಣ :**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### “ಭವಿಷ್ಯತ್ತಿನ ಬೀಜಗಳನ್ನು ಬಿತ್ತುವುದು”

**ಅನು : ಡಾ. ಕೆ.ಎಸ್. ಆಮೂರ**
ಹೊಸ ಶಿಕ್ಷಣ ಪದ್ಧತಿಯ ಬೀಜಗಳು 4
ಹೊಸ ಮಾರ್ಗ 27

**ಅನು : ಡಾ. ಬಿ.ಆರ್. ಭೀಡ**
ಆತ್ಮ–ಆಧಾರಿತ ಶಿಕ್ಷಣ 51

**ಅನು : ಶ್ರೀ ಪುರುಷೋತ್ತಮ ಗಲಗಲಿ**
ಶಿಕ್ಷಣ ಕುರಿತು ಸೂತ್ರಗಳು 60

**ಸಂಪಾದಕೀಯ:** ಶ್ರೀ ಅರೋಬಿಂದೋ ಇಂಟರ್‌ನ್ಯಾಶನಲ್ ಸೆಂಟರ್ ಆಫ್ ಎಜ್ಯುಕೇಶನ್ (Sri Aurobindo International Centre of Education) ಅದರ ಎಪ್ಪತ್ತೈದನೆಯ ವಾರ್ಷಿಕ ಸಮಾರಂಭವನ್ನು 2018ರಲ್ಲಿ ಆಚರಿಸುತ್ತದೆ. ಈ ಸಂಚಿಕೆಯಲ್ಲಿ ಶ್ರೀಮಾತೆಯವರು ಶಿಕ್ಷಣ ಕುರಿತು ಪ್ರಕಾಶ ಬೀರಿದುದರೊಂದಿಗೆ ಪಾಲುಗೊಳ್ಳುತ್ತೇವೆ, ಆ ಶಿಕ್ಷಣ ಇಂದಿನ ಮನುಕುಲವನ್ನು ನಾಳಿನ ಅತಿಮನುಕುಲವನ್ನಾಗಿ ನಿರ್ಮಾಣ ಮಾಡಬಲ್ಲದು. ಶ್ರೀ ಅರೋಬಿಂದೋ ಇಂಟರ್‌ನ್ಯಾಶನಲ್ ಸೆಂಟರ್ ಆಫ್ ಎಜ್ಯುಕೇಶನದ ಸಂಕ್ಷಿಪ್ತ ಐತಿಹಾಸಿಕ ಹಿನ್ನೆಲೆ ಹೀಗಿದೆ.

**ಶ್ರೀ ಅರೋಬಿಂದೋ ಇಂಟರ್‌ನ್ಯಾಶನಲ್ ಸೆಂಟರ್ ಆಫ್ ಎಜ್ಯುಕೇಶನ್**

ಡಿಸೆಂಬರ 2, 1943ರಂದು ಶ್ರೀಮಾತೆಯವರು ಇಪ್ಪತ್ತು ಮಕ್ಕಳಿಗಾಗಿ ಒಂದು ಶಾಲೆಯನ್ನು ಔಪಚಾರಿಕವಾಗಿ (formally) ಪ್ರಾರಂಭಿಸಿದರು, ಅವರೇ ಸ್ವತಃ ಶಿಕ್ಷಕಿಯರಲ್ಲಿ ಒಬ್ಬರಾಗಿದ್ದರು. ಮುಂದಿನ ಏಳು ವರ್ಷಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕ್ರಮೇಣ ಹೆಚ್ಚುತ್ತ ಹೋಯಿತು.

ಎಪ್ರಿಲ್ 24, 1951ರಂದು ಶ್ರೀಮಾತೆಯವರು ಸಮ್ಮೇಳನವೊಂದರ ಅಧ್ಯಕ್ಷತೆ ವಹಿಸಿದ್ದರು ಅಲ್ಲಿ 'ಶ್ರೀ ಅರೊಬಿಂದೋ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯ ಕೇಂದ್ರ'ವನ್ನು ಸ್ಥಾಪಿಸಬೇಕೆಂಬ ನಿರ್ಧಾರವನ್ನು ಕೈಕೊಳ್ಳಲಾಯಿತು. ಜನವರಿ 6, 1952ರಂದು ಅವರು "ಶ್ರೀ ಅರೋಬಿಂದೋ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯ ಕೇಂದ್ರ"ವನ್ನು ಆರಂಭಿಸಿದರು. 1959ರಲ್ಲಿ ಆ ಹೆಸರನ್ನು "ಶ್ರೀ ಅರೋಬಿಂದೋ ಅಂತಾರಾಷ್ಟ್ರೀಯ ಶಿಕ್ಷಣ ಕೇಂದ್ರ" (Sri Aurobindo International Centre of Education) ಎಂದು ಬದಲು ಮಾಡಲಾಯಿತು.

ಶಿಕ್ಷಣ ಕೇಂದ್ರ ಡಿಗ್ರಿ ಇಲ್ಲವೆ ಡಿಪ್ಲೋಮಾ ಪದವಿಗಳನ್ನು ದಾನ ಮಾಡುವುದಿಲ್ಲ. ಏಕೆಂದರೆ ಹಾಗೆ ದಾನಮಾಡಿದರೆ ಅದು ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಲ್ಲಿ ನಮ್ಮ ಉದ್ದೇಶಗಳಿಂದ ಸ್ವತಂತ್ರವಾದ ಶಿಕ್ಷಣ ಪಡೆಯುವ ಸಂತೋಷ ಹಾಗೂ ಪ್ರಗತಿಗಾಗಿ ಅಭೀಪ್ಸೆ ಇವು ಎಚ್ಚರಗೊಳ್ಳುವಂತೆ ಮಾಡುತ್ತದೆ.

**CWM, 12/110** **– ಶ್ರೀಮಾತೆ**

*



ನಾನು ಚಿಕ್ಕವಳಾಗಿದ್ದಾಗ ನನ್ನ ತಾಯಿಯ ಬಳಿ ಹೋಗಿ ಆಹಾರ ಮತ್ತು ಇನ್ನಿತರ ಚಿಕ್ಕ ವಿಷಯಗಳನ್ನು ಕುರಿತು ಗೊಣಗುತ್ತಿದ್ದೆ. ಆಗ ಅವಳು ನನಗೆ "ಹೋಗು, ನಿನ್ನ ಕಾರ್ಯಮಾಡು ಇಲ್ಲವೆ ನಿನ್ನ ಅಭ್ಯಾಸವನ್ನು ಮುಂದುವರಿಸಿ-ಕೊಂಡು ಹೋಗು, ಇಂತಹ ನಿರರ್ಥಕ ವಿಷಯಗಳನ್ನು ಕುರಿತು ತಲೆಕೆಡಿಸಿ-ಕೊಳ್ಳಬೇಡ" ಎಂದು ಹೇಳುತ್ತಿದ್ದಳು. ನಾನು ಸ್ವ-ಸಂತೃಪ್ತಿಯುಳ್ಳ ಸುಖ-ಸೌಲಭ್ಯಕ್ಕಾಗಿ ಜನ್ಮ ತಾಳಿರುವೆನೆಂಬ ವಿಚಾರ ನನ್ನಲ್ಲಿದೆಯೇ ಎಂದು ಅವಳು ಕೇಳುತ್ತಿದ್ದಳು. "ನೀನು ಅತ್ಯುಚ್ಚ ಆದರ್ಶವನ್ನು ಸಿದ್ಧಿಸಿಕೊಳ್ಳಲು ಜನ್ಮ ತಾಳಿರುವಿ" ಎಂದು ಹೇಳುತ್ತಿದ್ದಳು ಮತ್ತು ತಿರುಗಿ ಹೋಗಲು ಕಳಿಸಿಕೊಡುತ್ತಿದ್ದಳು. ಅವಳು ಬಹಳ ಸರಿಯಾಗಿಯೇ ಹೇಳುತ್ತಿದ್ದಳು, ಆದಾಗ್ಯೂ, ಸ್ವಾಭಾವಿಕವಾಗಿ, ಅವಳ ಆದರ್ಶ ನಮ್ಮ ಮಾನದಂಡಗಳ ಮುಂದೆ ಹೆಚ್ಚಾಗಿ ಬಡವಾಗಿರುತ್ತಿದ್ದವು.

**CWM, 3/131** **– ಶ್ರೀಮಾತೆ**

*

# ಹೊಸ ಶಿಕ್ಷಣ ಪದ್ಧತಿಯ ಬೀಜಗಳು

ಶ್ರೇಷ್ಠ ಬೌದ್ಧಿಕ ಅತ್ಯುಚ್ಚ ರಚನೆಯನ್ನು ನಿರ್ಮಾಣ ಮಾಡುವುದಕ್ಕೆ ಮೊದಲ ಆವಶ್ಯಕತೆ ಅದನ್ನು ತಾಳಿಕೊಳ್ಳಲು ಸಾಕಷ್ಟು ಬಲಿಷ್ಠ ತಳಹದಿಯನ್ನು ಒದಗಿಸುವುದಾಗಿದೆ. ಮನುಷ್ಯನ ಸಾಕಷ್ಟಾಗಿರದ ಜ್ಞಾನದಿಂದ ಪ್ರಾರಂಭಗೊಳ್ಳುವ ಆ ಪದ್ಧತಿಗಳು ತೃಪ್ತಿದಾಯಕ ತಳಹದಿಯನ್ನು ಒದಗಿಸಿದ್ದೇವೆ ಎಂದು ಯೋಚಿಸುತ್ತವೆ. ಆಗ ಅವು ವಿದ್ಯಾರ್ಥಿಗೆ ಅನೇಕ ವಿಷಯಗಳನ್ನು ಕುರಿತು ವಿಸ್ತಾರವಾದ ಇಲ್ಲವೆ ಯೋಗ್ಯ ರೀತಿಯಲ್ಲಿ ಆಯ್ದುಕೊಂಡ ಮಾಹಿತಿಯ ಮೊತ್ತವನ್ನು ಒದಗಿಸಿರುತ್ತವೆ, ಆ ವಿಷಯಗಳು ಆ ಸಮಯದಲ್ಲಿ ಲಭ್ಯವಿರುವ ಮಾನವ ಸಂಸ್ಕೃತಿಯ ಅತ್ಯಂತ ಒಳ್ಳೆಯ ಭಾಗವನ್ನು ಒಳಗೊಂಡಿರುತ್ತವೆ. ಶಾಲೆಗಳು ವಸ್ತು–ವಿಷಯಗಳ ಮಾಹಿತಿಗಳನ್ನು ಕೊಡುತ್ತವೆ, ವಿದ್ಯಾರ್ಥಿ ಅದನ್ನು ಉಪಯೋಗಿಸಬೇಕು.– ಇದೇ ಸೂತ್ರ, ಆದರೆ ಇಲ್ಲಿ ದೋಷ ಮೂಲಭೂತ–ವಾಗಿರುತ್ತದೆ.

ಮಾಹಿತಿ ಬುದ್ಧಿಮತ್ತೆಯ ತಳಹದಿಯಾಗಲಾರದು, ಅದು ಕೇವಲ ತಿಳಿದುಕೊಂಡವನಿಂದ ಜ್ಞಾನವನ್ನು, ಪ್ರಾರಂಭಬಿಂದುವನ್ನು, ಹೊಸ ಶೋಧದ ಹಾಗೂ ವಿಸ್ತಾರಗೊಳಿಸಿದ ಸೃಷ್ಟಿಯ ನಾಭಿ (nucleus)ಯನ್ನು ನಿರ್ಮಿಸಲು ವಸ್ತು–ವಿಷಯಗಳ ಮಾಹಿತಿಯ ಒಂದು ಭಾಗವಾಗಬಹುದು. ಜ್ಞಾನವನ್ನು ಕೊಡುವುದಕ್ಕೆ ಮಾತ್ರ ಸೀಮಿತಗೊಂಡ ಶಿಕ್ಷಣ, ಶಿಕ್ಷಣವಲ್ಲವೇ ಅಲ್ಲ. ತಿಳಿದು–ಕೊಂಡವನು ಯೋಚನೆಯ ಹಾಗೂ ಜ್ಞಾನದ ಭವನವನ್ನು ನಿರ್ಮಿಸಲು ನೆನಪಿನ, ತೀರ್ಮಾನದ, ಗ್ರಹಿಕೆಯ, ತರ್ಕಮಾಡುವಿಕೆಯ ಅನೇಕ ಕಾರ್ಯನಿರ್ವಾಹಕ ಶಕ್ತಿಗಳು, ಯೋಗ್ಯ ಹಾಗೂ ಸಾಕಷ್ಟಾದ ಸಲಕರಣೆಗಳೊಂದಿಗೆ ಸಜ್ಜಾಗಬೇಕು, ಆದರೆ ನವೀನ ವಸ್ತು–ವಿಷಯಗಳನ್ನು ತರಲು ತರಬೇತು ಪಡೆಯಬೇಕು ಮತ್ತು ವಶದಲ್ಲಿ ಇದ್ದವುಗಳನ್ನು ಕೌಶಲ್ಯದಿಂದ ಉಪಯೋಗಿಸಬೇಕು. ಅವರು ನಿರ್ಮಾಣ ಮಾಡಬೇಕಾದ ಕಟ್ಟಡದ ರಚನೆಯ ತಳಹದಿ ಶಕ್ತಿಯ ಸಂಗ್ರಹದ ಹಾಗೂ ಸತತ ಬೆಳೆಯುತ್ತಿರುವ ನೆನಪಿನ, ತೀರ್ಮಾನದ ಹಾಗೂ ಸೃಷ್ಟ್ಯಾತ್ಮಕ ಸಾಮರ್ಥ್ಯದ ಹಾಗೂ ಚೈತನ್ಯದ ಚಟುವಟಿಕೆಯ ಒತ್ತಾಯದ ಬೇಡಿಕೆಯನ್ನು ಸಹಿಸಿಕೊಳ್ಳಲು ಸಾಕಷ್ಟು ಚೈತನ್ಯದ ಸರಬರಾಜು ಮಾತ್ರವಾಗಬಹುದು.

**CWSA, 1/369–370** **– ಶ್ರೀ ಅರವಿಂದರು**

*

## ಮನುಷ್ಯ ವಿಶ್ವದಿಂದ ಪ್ರತ್ಯೇಕವಾಗಿರುವುದಿಲ್ಲ

ಪ್ರಾಚೀನ ಕಾಲದ ಆರ್ಯನ್‌ರು ಮನುಷ್ಯ ವಿಶ್ವದಿಂದ ಪ್ರತ್ಯೇಕವಾಗಿ–ರುವುದಿಲ್ಲ ಎಂಬುದನ್ನು ತಿಳಿದುಕೊಂಡಿದ್ದರು, ಆದರೆ ಅವನು ಸಾಮರಸ್ಯದಿಂದ ಕೂಡಿದ ಅದರ ಭಾಗ, ತರಂಗ ಸಮುದ್ರದ ಒಂದು ಭಾಗವಿದ್ದ ಹಾಗಿರುತ್ತಾನೆ. ಪ್ರಕೃತಿ, ಮಾಯೆ ಇಲ್ಲವೆ ಶಕ್ತಿಗಳಿರುವ ಅನಂತ ಚೈತನ್ಯ ಜಗತ್ತನ್ನು ವ್ಯಾಪಿಸಿಕೊಂಡಿದೆ, ಪ್ರತಿಯೊಂದು ನಾಮ ಹಾಗೂ ರೂಪದಲ್ಲಿ ಅದು ತನ್ನನ್ನು ಸುರಿಸುತ್ತದೆ, ಮಣ್ಣು ಹೆಂಟೆ, ಸಸ್ಯ, ಕ್ರಿಮಿ, ಪಶು, ಮನುಷ್ಯ ಇವರೆಲ್ಲ ಗೋಚರ ಅಸ್ತಿತ್ವದಲ್ಲಿ ಕೇವಲ ಹೆಚ್ಚು ಕಡಿಮೆ ಈ ಚೈತನ್ಯದ ಪರಿಣಾಮಕಾರಿ ಆಧಾರಗಳಾಗಿರುತ್ತಾರೆ. ನಮ್ಮಲ್ಲಿ ಪ್ರತಿಯೊಬ್ಬರು ಒಂದು ಡೈನಮೋ ಆಗಿರುತ್ತೇವೆ, ಅದರಲ್ಲಿ ಆ ಚೈತನ್ಯದ ತರಂಗಗಳನ್ನು ಸೃಷ್ಟಿಸಲಾಗಿರುತ್ತದೆ ಹಾಗೂ ಸಂಗ್ರಹಿಸಲಾಗಿರುತ್ತದೆ ಮತ್ತು ನಿರಂತರ ಸಂರಕ್ಷಿಸಲಾಗಿರುತ್ತದೆ, ಉಪಯೋಗ ಮಾಡಲಾಗಿರುತ್ತದೆ, ಮತ್ತೆ ತುಂಬಲಾಗಿರುತ್ತದೆ. ನಕ್ಷತ್ರಗಳಲ್ಲಿ, ಗ್ರಹಗಳಲ್ಲಿ ಚಲಿಸುವ ಅದೇ ಶಕ್ತಿ ನಮ್ಮಲ್ಲಿ ಚಲಿಸುತ್ತಿರುತ್ತದೆ, ನಮ್ಮ ಎಲ್ಲ ಯೋಚನೆ ಹಾಗೂ ಕ್ರಿಯೆ ಇವು ಕೇವಲ ಅದರ ಲೀಲೆ ಮತ್ತು ಅದರ ಕಾರ್ಯವಿಧಾನಗಳ ಸಂಕೀರ್ಣತೆಯಿಂದ ಜನಿಸಿ ಬಂದಿರುತ್ತವೆ. ಮನುಷ್ಯ ತನ್ನ ಕ್ಷಮತೆಯನ್ನು ಆಧಾರವೊಂದೆಂದು ಹೆಚ್ಚಿಸಲು ಅಲ್ಲಿ ವಿಧಾನಗಳಿವೆ. ಅಲ್ಲಿ ಇನ್ನಿತರ ವಿಧಾನಗಳಿವೆ, ಅವುಗಳ ಮೂಲಕ ಅವನ ಹಾಗೂ ವಿಶ್ವವ್ಯಾಪಿ ಚೈತನ್ಯ ಇವುಗಳ ನಡುವೆ ಸಂಪರ್ಕ ತಂದುಕೊಡುವ ಕಾಲುವೆಯನ್ನು ಸ್ವಚ್ಛಗೊಳಿಸಬಹುದು ಮತ್ತು ಅದರ ಹೆಚ್ಚು ಶ್ರೇಷ್ಠತರವಾದ ವಿಶ್ವಂಭರ ಚೈತನ್ಯದ ಸಂಗ್ರಹ ತನ್ನ ಆತ್ಮದಲ್ಲಿ, ಮಿದುಳಿನಲ್ಲಿ ಹಾಗೂ ದೇಹದಲ್ಲಿ ಸುರಿಯುವಂತೆ ಮಾಡಬಹುದು. ಈ ಆಧಾರದ ಸತತ ಸುಧಾರಣೆ ಮತ್ತು ಮೊತ್ತದಲ್ಲಿ ಹಾಗೂ ಮಾಹಿತಿ ನೀಡುವ ಚೈತನ್ಯದ ಸಂಕೀರ್ಣತೆಯಲ್ಲಿ ಹೆಚ್ಚಾಗುವಿಕೆ ಉತ್ಕ್ರಾಂತಿಯ ಇಡೀ ಗುರಿಯಾಗಿರುತ್ತದೆ. ಆ ಚೈತನ್ಯ ಅದರ ಬಗೆಯಲ್ಲಿ ಅತ್ಯುಚ್ಚವಾದದ್ದಾದಾಗ, ಮಾನವನ ಆಧಾರದ ಕ್ಷಮತೆಗನುಗುಣವಾಗಿ ಮೊತ್ತದಲ್ಲಿ ಪೂರ್ತಿ ತುಂಬಿಕೊಂಡಾಗ ಮತ್ತು ಆಧಾರವೇ ಸ್ವತಃ ಆ ಚೈತನ್ಯದ ಒಳಹರಿಯುವಿಕೆ ಹಾಗೂ ಲೀಲೆಯನ್ನು ಕಟ್ಟಕಡೆಯ ಮಟ್ಟದಲ್ಲಿ ಸಹಿಸುವಂತಾಗಲು ತರಬೇತು ಪಡೆದಾಗ ಮನುಷ್ಯ ಸಿದ್ಧನಾಗಿರುತ್ತಾನೆ, ನೆರವೇರಿಕೆ ಕಂಡುಕೊಂಡ ಇಲ್ಲವೆ ಪರಿಪೂರ್ಣ ಮನುಷ್ಯನಾಗಿರುತ್ತಾನೆ, ಅವನ ಉತ್ಕ್ರಾಂತಿ ಕೊನೆಗೊಂಡಿರುತ್ತದೆ.

ಅವನು ತನ್ನ ವ್ಯಕ್ತಿಗತ ಅತಿ ಹೆಚ್ಚಿನ ಅಭಿವೃದ್ಧಿ ಸಂಪೂರ್ಣವಾಗುವಂತೆ ಮಾಡಿರುತ್ತಾನೆ, ಆ ಅಭಿವೃದ್ಧಿಗಾಗಿ ಯುಗಗಳಾದ್ಯಂತ ಮನುಕುಲದ ಮೊತ್ತ ಶ್ರಮಿಸುತ್ತ ಬಂದಿದೆ. ಈ ಸಿದ್ಧಾಂತ ಸರಿಯಾಗಿದ್ದರೆ ಬುದ್ಧಿಮತ್ತೆಯ ಕಾರ್ಯಾಚರಣೆಯ ಆಧಾರದಲ್ಲಿರುವ ಚೈತನ್ಯ ನಮ್ಮಲ್ಲಿಯೆ ಇರಬೇಕು, ಅದು ವ್ಯಾವಹಾರಿಕವಾಗಿ ಮಿತಿರಹಿತವಾದದ್ದು ಎನ್ನುವಷ್ಟರ ಮಟ್ಟಿಗೆ ಶ್ರೇಷ್ಠತರ ವಿಸ್ತಾರ ಹಾಗೂ ಸಮೃದ್ಧ ಉಪಯೋಗ ಇವುಗಳಿಗಾಗಿ ಕ್ಷಮತೆ ಹೊಂದಿರಬೇಕು. ಇದು ಕೂಡ ದೃಢವಾದ ತತ್ವವಾಗಿರಬೇಕು; ಆ ಚೈತನ್ಯವನ್ನು ಹೆಚ್ಚಿಸಲು ಹಾಗೂ ಸಮೃದ್ಧಗೊಳಿಸಲು ಶಕ್ತರಾದ ಹಾಗೆ ನಮ್ಮ ಮನಸ್ಸಿನ ಕಾರ್ಯವಿಧಾನಗಳ ಸಂಭಾವ್ಯತೆಯ ವ್ಯಾಪ್ತಿ, ಸಾಮರ್ಥ್ಯ ಹಾಗೂ ಚಟುವಟಿಕೆ ಇವೂ ಕೂಡ ಶ್ರೇಷ್ಠತರವಾಗುತ್ತವೆ, ಪರಿಣಾಮವಾಗಿ ನಮ್ಮ ಬುದ್ಧಿಮತ್ತೆಯ ಚೇತನಶಕ್ತಿ (vigour) ಮತ್ತು ನಮ್ಮ ಸಿದ್ಧಿಯ ಶ್ರೇಷ್ಠತೆ ಹೆಚ್ಚಾಗುತ್ತವೆ. ಇದು ಪ್ರಾಚೀನ ಕಾಲದ ಆರ್ಯನ್‌ರ ಶಿಕ್ಷಣ ಪದ್ಧತಿಯ ಮೊದಲ ತತ್ವವಾಗಿತ್ತು ಮತ್ತು ಚೈತನ್ಯದ ಹೆಚ್ಚಿಸಿದ ಸಂಗ್ರಹಕ್ಕಾಗಿ ಅವರು ಉಪಯೋಗಿಸಿದ ವಿಧಾನಗಳಲ್ಲಿ ಮುಖ್ಯವಾದದ್ದು ಬ್ರಹ್ಮಚರ್ಯದ ಆಚರಣೆಯಾಗಿತ್ತು.

**CWSA, 1/370–71** **– ಶ್ರೀ ಅರವಿಂದರು**

*

**ಶಿಕ್ಷಣ ಪದ್ಧತಿಯ ಮೂರು ತತ್ವಗಳು**

ನಿಜವಾದ ರೀತಿಯಲ್ಲಿ ಕಲಿಸುವುದಕ್ಕೆ ಮೊದಲ ತತ್ವವೆಂದರೆ ಏನನ್ನೂ ಕಲಿಸಿಕೊಡಲಾಗುವುದಿಲ್ಲ ಎಂಬುದು. ಶಿಕ್ಷಕ ಬೋಧಕನಲ್ಲ, ಕೆಲಸ ತೆಗೆದು–ಕೊಳ್ಳುವವನಲ್ಲ (task Master) ಅವನು ಸಹಾಯಕ ಹಾಗೂ ಮಾರ್ಗದರ್ಶಕ, ಅವನ ವ್ಯವಹಾರ ಸೂಚಿಸುವುದಾಗಿರುತ್ತದೆ, ಹೇರುವುದಲ್ಲ. ಅವನು ವಾಸ್ತವದಲ್ಲಿ ವಿದ್ಯಾರ್ಥಿಯ ಮನಸ್ಸಿಗೆ ತರಬೇತು ನೀಡುವುದಿಲ್ಲ, ವಿದ್ಯಾರ್ಥಿ ತನ್ನ ಜ್ಞಾನದ ಉಪಕರಣಗಳನ್ನು ಹೇಗೆ ಪರಿಪೂರ್ಣಗೊಳಿಸಬೇಕು ಎಂಬುದನ್ನು ತೋರಿಸಿ–ಕೊಡುತ್ತಾನೆ ಮತ್ತು ಆ ವಿಧಾನದಲ್ಲಿ ಸಹಾಯ ಹಾಗೂ ಉತ್ತೇಜನ ನೀಡುತ್ತಾನೆ. ಶಿಕ್ಷಕ ವಿದ್ಯಾರ್ಥಿಗೆ ಜ್ಞಾನ ಕೊಡುವುದಿಲ್ಲ, ಅವನು ತನಗಾಗಿಯೇ ಜ್ಞಾನ ಹೇಗೆ ದೊರಕಿಸಬೇಕು ಎಂಬುದನ್ನು ತೋರಿಸಿಕೊಡುತ್ತಾನೆ, ಅಂತರಂಗದಲ್ಲಿರುವ ಜ್ಞಾನ ಮುಂದೆ ಬರಲೆಂದು ಕರೆಕೊಡುವುದಿಲ್ಲ, ಅದೆಲ್ಲಿದೆ ಎಂಬುದನ್ನು ಮತ್ತು ಅದು

ಮೇಲ್ಮೈಗೆ ಬರಲು ಹೇಗೆ ರೂಢಿಸಿಕೊಳ್ಳಬೇಕು ಎಂಬುದನ್ನು ಮಾತ್ರ ತೋರಿಸಿ–ಕೊಡುತ್ತಾನೆ.

ವಿದ್ಯಾರ್ಥಿ ತನ್ನ ಬೆಳವಣಿಗೆಗಾಗಿ ತನ್ನ ಮನಸ್ಸಿನ ಸಲಹೆ ಕೇಳಬೇಕೆಂಬುದು ಎರಡನೆ ತತ್ವ. ಪಾಲಕ ಇಲ್ಲವೆ ಶಿಕ್ಷಕ ತಾನು ಬಯಸಿದ ರೀತಿಯಲ್ಲಿ ಮಗು ಆಕಾರ ತಳೆಯಲೆಂದು ಅದರ ಮೇಲೆ ಪ್ರಹಾರ ಮಾಡುವುದು ಕಾಡು ರೀತಿಯ ಹಾಗೂ ಅಜ್ಞಾನದ ಮೂಢನಂಬಿಕೆ. ಪಾಲಕ ತನ್ನ ಮಗ ವಿಶಿಷ್ಟ ಗುಣಗಳನ್ನು, ಕ್ಷಮತೆಗಳನ್ನು, ವಿಚಾರಗಳನ್ನು, ಸದ್ಗುಣವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು ಇಲ್ಲವೆ ಮೊದಲೇ ವ್ಯವಸ್ಥೆಗೊಳಪಡಿಸಿದ ವೃತ್ತಿಗಾಗಿ ತಯಾರಾಗಬೇಕು ಎಂದು ಮೊದಲೇ ವ್ಯವಸ್ಥೆ ಮಾಡುವುದಕ್ಕಿಂತ ಹೆಚ್ಚಿನ ಮಟ್ಟದ ದೋಷ ಬೇರೆ ಯಾವುದೂ ಇರುವುದಿಲ್ಲ. ಸ್ವಭಾವ ತನ್ನ ಧರ್ಮವನ್ನು ಬಿಟ್ಟುಕೊಡಲೆಂದು ಒತ್ತಾಯಪಡಿಸುವುದು ಅದಕ್ಕೆ ಶಾಶ್ವತ ಹಾನಿಯನ್ನುಂಟು ಮಾಡಿದ ಹಾಗೆ, ಅದರ ಬೆಳವಣಿಗೆಯನ್ನು ಊನಗೊಳಿಸಿದ ಹಾಗೆ, ಪರಿಪೂರ್ಣತೆಯನ್ನು ವಿಮುಖಗೊಳಿಸಿದ ಹಾಗೆ. ಅದು ಮಾನವ ಆತ್ಮದ ಮೇಲೆ ಸ್ವಾರ್ಥದಿಂದ ಕೂಡಿದ ದಬ್ಬಾಳಿಕೆ ಮತ್ತು ದೇಶಕ್ಕೆ ಒಂದು ಗಾಯ, ಮನುಷ್ಯನೊಬ್ಬ ದೇಶಕ್ಕೆ ಕೊಡಬಹುದಾದ ಅತ್ಯಂತ ಒಳ್ಳೆಯದಾದುದನ್ನು ಅದು ಕಳೆದುಕೊಳ್ಳುತ್ತದೆ. ಬದಲಾಗಿ ಅಪರಿಪೂರ್ಣವಾದ, ಎರಡನೆ ದರ್ಜೆಯ, ಕಾಟಾಚಾರದ ಹಾಗೂ ಸಾಮಾನ್ಯ ರೂಪದ ಏನೋ ಒಂದನ್ನು ಒಪ್ಪಿಕೊಳ್ಳುವುದಕ್ಕೆ ಬಲವಂತಪಡಿಸಿದ ಹಾಗಿರುತ್ತದೆ. ಕಾರ್ಯವಿಧಾನ ಅದನ್ನು ಕಂಡುಕೊಳ್ಳುವುದಿರುತ್ತದೆ, ಅಭಿವೃದ್ಧಿ–ಪಡಿಸುವುದಿರುತ್ತದೆ ಹಾಗೂ ಉಪಯೋಗಿಸುವುದಿರುತ್ತದೆ. ಶಿಕ್ಷಣ ಪದ್ಧತಿಯ ಮುಖ್ಯ ಗುರಿ ಬೆಳೆಯುತ್ತಿರುವ ಆತ್ಮ ಅತ್ಯಂತ ಒಳ್ಳೆಯದನ್ನು ತನ್ನಲ್ಲಿ ಎಳೆದುಕೊಳ್ಳಲು ಅದಕ್ಕೆ ಸಹಾಯ ಮಾಡುವುದಿರುತ್ತದೆ ಮತ್ತು ಅದನ್ನು ಉದಾರವಾದ ಉಪಯೋಗಕ್ಕಾಗಿ ಪರಿಪೂರ್ಣಗೊಳಿಸುವುದಿರುತ್ತದೆ.

ಶಿಕ್ಷಣ ಪದ್ಧತಿಯ ಮೂರನೆಯ ತತ್ವ ಹತ್ತಿರವಿದ್ದುದರಿಂದ ದೂರವಿರು–ವುದರತ್ತ, ಇದ್ದುದರಿಂದ ಮುಂದೆ ಆಗಲಿರುವುದರತ್ತ ಕಾರ್ಯಕೈಕೊಳ್ಳುವು–ದಾಗಿರುತ್ತದೆ. ಮನುಷ್ಯನ ಸ್ವಭಾವದ ಆಧಾರ ಬಹುಮಟ್ಟಿಗೆ, ಯಾವಾಗಲೂ, ಅವನ ಗತಕಾಲಕ್ಕೆ ಅಧಿಕವಾಗಿ, ಅವನ ವಂಶ, ಅವನ ಪರಿಸರ, ಅವನ ರಾಷ್ಟ್ರೀಯತೆ, ಅವನ ದೇಶ, ಅವನು ಪೋಷಣೆ ಎಳೆದುಕೊಳ್ಳುವ ಮಣ್ಣಿನ ಗುಣ, ಅವನು ಉಸಿರಾಡಿಸುವ ಗಾಳಿ, ಅವನಿಗೆ ಒಗ್ಗಿದ ನೋಟಗಳು, ಶಬ್ದಗಳು

ಹಾಗೂ ರೂಢಿಗಳು ಇವೆಲ್ಲವುಗಳ ಪ್ರಭಾವಕ್ಕೊಳಗಾಗಿರುತ್ತದೆ. ಅವುಗಳ ಪ್ರಭಾವ ಗೋಚರವಾಗದ ರೀತಿಯಲ್ಲಿರುತ್ತದೆ, ಆದರೆ ಕಡಿಮೆ ಸಾಮರ್ಥ್ಯಪೂರ್ಣ–ವಾಗಿರುವುದಿಲ್ಲ. ಹಾಗಾಗಿ ಅಲ್ಲಿಂದ ನಾವು ಪ್ರಾರಂಭಿಸಬೇಕು. ಸ್ವಭಾವವನ್ನು ಅದು ಬೆಳೆಯಲೇಬೇಕಾದ ಪೃಥ್ವಿಯ ಬೇರುಗಳಿಂದ ಕೈಗೆತ್ತಿಕೊಳ್ಳಬಾರದು ಇಲ್ಲವೆ ಮನಸ್ಸನ್ನು ಜೀವನದ ಪ್ರತೀಕಗಳಿಂದ, ವಿಚಾರಗಳಿಂದ ಅದು ಭೌತಿಕವಾಗಿ ಚಲಿಸುತ್ತಿರುವುದಕ್ಕೆ ಪರಕೀಯವಾದ ಜೀವನದಿಂದ ಸುತ್ತುವರಿಯುವಂತೆ ಮಾಡಬಾರದು. ಬಾಹ್ಯದಿಂದ ಒಳಗೆ ಏನನ್ನಾದರೂ ತರಬೇಕಾದಾಗ ಅದನ್ನು ನೀಡಲಾಗಿರಬೇಕು, ಮನಸ್ಸಿನ ಮೇಲೆ ಒತ್ತಾಯ ಮಾಡಿ ತರಬಾರದು. ಮುಕ್ತ ಹಾಗೂ ಸ್ವಾಭಾವಿಕ ಬೆಳವಣಿಗೆ ಯಾಥಾರ್ಥ ಅಭಿವೃದ್ಧಿಗೆ ಷರತ್ತಾಗಿರುತ್ತದೆ.

**CWSA, 1/384–85** **– ಶ್ರೀ ಅರವಿಂದರು**

*

ಕೆಲವು ಆತ್ಮಗಳಿರುತ್ತವೆ, ಅವು ಸ್ವಾಭಾವಿಕವಾಗಿ ತಮ್ಮ ಪರಿಸರಗಳಿಂದ ಬಂಡಾಯವೇಳುತ್ತವೆ ಮತ್ತು ಮತ್ತೊಂದು ಯುಗಕ್ಕೆ ಹಾಗೂ ಹವಾಗುಣಕ್ಕೆ ಸೇರಿದವುಗಳ ಹಾಗೆ ತೋರಿಬರುತ್ತವೆ. ಅವು ತಮ್ಮ ಒಲವನ್ನು ಅನುಸರಿಸಲು ಮುಕ್ತವಾಗಿರಲಿ. ಆದರೆ ಪರಕೀಯ ರೂಪದಲ್ಲಿ ಕೃತ್ರಿಮವಾಗಿ ಎರಕಕ್ಕೊಳಗಾದಾಗ ಬಹಳಷ್ಟು ಜನರು ನಿರ್ವೀರ್ಯರಾಗುತ್ತಾರೆ, ಬರಿದಾದವರಾಗುತ್ತಾರೆ, ಕೃತ್ರಿಮವಾದ ಹಾಗಾಗುತ್ತಾರೆ. ಅವರು ಒಂದು ವಿಶಿಷ್ಟ ದೇಶಕ್ಕೆ, ಯುಗಕ್ಕೆ, ಸಮಾಜಕ್ಕೆ ಸೇರಿದವರಾಗಿರಬೇಕು, ಅವರು ಗತಕಾಲದ ಮಕ್ಕಳಾಗಿರಬೇಕು, ಸದ್ಯದ ಕಾಲವನ್ನು ವಶದಲ್ಲಿಟ್ಟುಕೊಂಡಿರಬೇಕು, ಹಾಗೂ ಭವಿಷ್ಯತ್ಕಾಲವನ್ನು ಸೃಷ್ಟಿಸುವವ–ರಾಗಿರಬೇಕು ಎಂಬುದು ದೇವ ಮನುಕುಲಕ್ಕಾಗಿ ಮಾಡಿದ ವ್ಯವಸ್ಥೆ. ಗತಕಾಲ ನಮ್ಮ ತಳಹದಿ, ಸದ್ಯದ ಕಾಲ ನಮ್ಮ ವಸ್ತು–ವಿಷಯ, ಭವಿಷ್ಯತ್ಕಾಲ ನಮ್ಮ ಗುರಿ ಹಾಗೂ ಶಿಖರ. ರಾಷ್ಟ್ರೀಯ ಶಿಕ್ಷಣ ಪದ್ಧತಿಯಲ್ಲಿ ಪ್ರತಿಯೊಂದಕ್ಕೂ ಅದಕ್ಕೆ ಸಲ್ಲಬೇಕಾದುದು ಹಾಗೂ ಸ್ವಾಭಾವಿಕವಾದುದು ಇರಬೇಕು.

**CWSA, 1/384–85** **– ಶ್ರೀ ಅರವಿಂದರು**

*

ಶಿಕ್ಷಣ ಸಂಪೂರ್ಣವಾಗಬೇಕಾದರೆ ಅದಕ್ಕೆ ಐದು ಪ್ರಧಾನ ಮುಖಗಳಿರಬೇಕು, ಅವು ಮಾನವ ಸತ್ತೆಯ ಐದು ಪ್ರಧಾನ ಚಟುವಟಿಕೆಗಳಿಗೆ

ಅನುಗುಣವಾಗಿರುತ್ತವೆ, ಆ ಚಟುವಟಿಕೆಗಳು ಭೌತಿಕ, ಪ್ರಾಣಿಕ, ಮಾನಸಿಕ, ಚೈತ್ಯಾತ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಿಗೆ ಸೇರಿರುತ್ತವೆ. ಶಿಕ್ಷಣದ ಈ ಹಂತಗಳು ವ್ಯಕ್ತಿಯ ಬೆಳವಣಿಗೆಯನ್ನು ಕಾಲಗಣನೆಗೆ ತಕ್ಕಂತೆ ಅನುಸರಿಸಿಕೊಂಡು ಹೋಗಬೇಕು. ಹಾಗಿದ್ದರೂ ಇದರರ್ಥ ಒಂದು ಇನ್ನೊಂದರ ಸ್ಥಾನದಲ್ಲಿ ಬರಬೇಕೆಂದಲ್ಲ, ಆದರೆ ಎಲ್ಲವೂ ಒಂದು ಇನ್ನೊಂದನ್ನು ಪೂರ್ತಿಗೊಳಿಸುತ್ತ ಅವನ ಜೀವನದ ಕೊನೆಯವರೆಗೂ ಮುಂದುವರಿದುಕೊಂಡು ಹೋಗಬೇಕು.

**CWM, 12/9** **– ಶ್ರೀಮಾತೆ**

*



## ಶ್ರೀ ಅರವಿಂದರ ಸ್ಮಾರಕ ಸಮ್ಮೇಳನದಲ್ಲಿ ಶ್ರೀಮಾತೆಯವರು ಉದ್ಘಾಟನಾ ಸಮಯದಲ್ಲಿ ನೀಡಿದ ಸಂದೇಶ

ಶ್ರೀ ಅರವಿಂದರು ನಮ್ಮ ಮಧ್ಯೆ ಉಪಸ್ಥಿತರಿದ್ದಾರೆ ಮತ್ತು ಅವರ ಎಲ್ಲ ಸೃಷ್ಟ್ಯಾತ್ಮಕ ಅಸಾಧಾರಣ ಬೌದ್ಧಿಕ ಶಕ್ತಿಯೊಂದಿಗೆ ವಿಶ್ವವಿದ್ಯಾಲಯ ಕೇಂದ್ರದ ರೂಪತಾಳುವಿಕೆಯ ಮೇಲೆ ಅಧ್ಯಕ್ಷತೆ ವಹಿಸುತ್ತಿದ್ದಾರೆ. ಎಷ್ಟೊಂದು ವರ್ಷಗಳ ಕಾಲದಿಂದ ಅವರು ಆ ಕೇಂದ್ರ ಅತಿಮಾನಸ ಪ್ರಕಾಶವನ್ನು ಸ್ವೀಕರಿಸಲು

ಭವಿಷ್ಯತ್ಕಾಲದ ಮನುಕುಲವನ್ನು ತಯಾರು ಮಾಡುವುದಕ್ಕೆ ಒಳ್ಳೆಯ ಸಾಧನ ಎಂದು ಪರಿಗಣಿಸಿದ್ದರು; ಆ ಪ್ರಕಾಶ ಇಂದಿನ ಜನರ ಉತ್ಕೃಷ್ಟ ಭಾಗವನ್ನು ಪೃಥ್ವಿಯ ಮೇಲೆ ಜೀವನದ ಹೊಸ ಪ್ರಕಾಶ ಹಾಗೂ ಶಕ್ತಿಗಳನ್ನು ಪ್ರಕಟಿಸಲು ಪರಿವರ್ತನೆಗೊಳಪಡಿಸುವುದು. ಅವರು ಹೆಚ್ಚಿನ ರೀತಿಯಲ್ಲಿ ಪೋಷಿಸಿಕೊಂಡು ಬಂದಿದ್ದ ಆದರ್ಶಗಳಲ್ಲಿ ಒಂದಾದ ಈ ಕೇಂದ್ರದ ಸ್ಥಾಪನೆ ಆ ಆದರ್ಶವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿದೆ, ಇಂದು ಅವರ ಹೆಸರಿನಲ್ಲಿ ಈ ಸಮ್ಮೇಳನದ ಸಭೆಯನ್ನು ಉದ್ಘಾಟಿಸುತ್ತಿದ್ದೇನೆ.

**ಏಪ್ರಿಲ್ 24, 1951** **– ಶ್ರೀಮಾತೆ**

*

**ಮಗುವಿಗೆ ಶಿಕ್ಷಣ ಕೊಡಲು ಮನುಷ್ಯ ತಾನೇ ಶಿಕ್ಷಣ ಪಡೆಯುವಂತಾಗಬೇಕು**

ಬಹಳಷ್ಟು ಪಾಲಕರು, ನಾನಾ ಕಾರಣಗಳಿಂದಾಗಿ, ತಮ್ಮ ಮಕ್ಕಳಿಗೆ ಕೊಡಬೇಕಾದ ನಿಜವಾದ ಶಿಕ್ಷಣದ ಬಗ್ಗೆ ಅತಿ ಕಡಿಮೆ ಕಾಳಜಿ ವಹಿಸುತ್ತಾರೆ. ಮಗುವಿಗೆ ಜನ್ಮ ಕೊಟ್ಟು ಅದನ್ನು ಜಗತ್ತಿನ ಮೇಲೆ ತಂದ ನಂತರ ಅದಕ್ಕೆ ಆಹಾರ, ಹಾಗೂ ಇತರ ಭೌತಿಕ ಆವಶ್ಯಕತೆಗಳನ್ನು ಒದಗಿಸಿ, ಅದರ ಆರೋಗ್ಯವನ್ನು ಹೆಚ್ಚು ಕಡಿಮೆ ಒಳ್ಳೆಯ ರೀತಿಯಲ್ಲಿ ನೋಡಿಕೊಂಡಾಗ ತಮ್ಮ ಕರ್ತವ್ಯವನ್ನು ಪೂರ್ತಿಯಾಗಿ ನಿರ್ವಹಿಸಿದ್ದೇವೆ ಎಂದು ಭಾವಿಸುತ್ತಾರೆ. ನಂತರ ಮಗುವನ್ನು ಶಾಲೆಗೆ ಕಳುಹಿಸಿ ಅದರ ಶಿಕ್ಷಣದ ಜವಾಬ್ದಾರಿಯನ್ನು ಶಿಕ್ಷಕರಿಗೆ ಒಪ್ಪಿಸಿಬಿಡುತ್ತಾರೆ.

ಇನ್ನು ಕೆಲವು ಪಾಲಕರು ತಮ್ಮ ಮಕ್ಕಳು ಸುಶಿಕ್ಷಿತರಾಗಬೇಕೆಂಬ ಅರಿವಿನಿಂದ ತಮಗೆ ಸಾಧ್ಯವಿದ್ದಷ್ಟನ್ನು ಮಾಡಲು ಪ್ರಯತ್ನಿಸುತ್ತಾರೆ. ಆದರೆ ಅತ್ಯಂತ ಗಂಭೀರ ಹಾಗೂ ನಿಷ್ಕಪಟ ಪಾಲಕರೂ ಕೂಡ ತಮ್ಮ ಮಗುವಿಗೆ ಶಿಕ್ಷಣ ಕೊಡಲು ಯೋಗ್ಯರಾಗಬೇಕಾದರೆ ತಾವೇ ಮೊದಲು ಸುಶಿಕ್ಷಿತರಾಗಬೇಕು, ತಮ್ಮ ಮಗುವಿಗೆ ಕೆಟ್ಟ ನಿದರ್ಶನವಾಗುವುದಲ್ಲ ಎಂಬುದನ್ನು ತಿಳಿದುಕೊಂಡವರು ಅತಿ ಕಡಿಮೆ ಜನರಿರುತ್ತಾರೆ. ಏಕೆಂದರೆ ಎಲ್ಲಕ್ಕೂ ಮಿಗಿಲಾಗಿ ಉದಾಹರಣೆ ಒದಗಿಸುವುದರ ಮೂಲಕ ಶಿಕ್ಷಣ ಪರಿಣಾಮಕಾರಿಯಾಗುತ್ತದೆ. ನಾವು ಕಲಿಸಿಕೊಡುವುದಕ್ಕೆ ನಾವೇ ಉದಾಹರಣೆಯಾಗದಿದ್ದರೆ ಮಗುವಿಗೆ ಒಳ್ಳೆಯ ಮಾತುಗಳನ್ನು ಹೇಳುವುದರಿಂದ, ಒಳ್ಳೆಯ ಉಪದೇಶ ಕೊಡುವುದರಿಂದ ಹೆಚ್ಚಿನ ಪರಿಣಾಮ ಉಂಟಾಗುವುದಿಲ್ಲ.

ನಿಷ್ಕಾಪಟ್ಯ, ಪ್ರಾಮಾಣಿಕತನ, ಸರಳತೆ, ಧೈರ್ಯ, ಅನಾಸಕ್ತಿ, ಸ್ವಾರ್ಥರಹಿತತೆ, ತಾಳ್ಮೆ, ಪಟ್ಟುಹಿಡಿಯುವಿಕೆ, ಶಾಂತಿ, ಸ್ಥಿರತೆ, ಸ್ವ–ನಿಯಂತ್ರಣ ಇವೆಲ್ಲ ಗುಣಗಳನ್ನು ಸುಂದರ ಭಾಷಣಗಳ ಮೂಲಕ ಕಲಿಸಿಕೊಡುವುದಕ್ಕಿಂತ ಅನಂತಪಟ್ಟು ಹೆಚ್ಚಿನ ರೀತಿಯಲ್ಲಿ ಉದಾಹರಣೆಯ ಮೂಲಕ ಕಲಿಸಿಕೊಡಬಹುದು. ಪಾಲಕರೆ, ಉಚ್ಚ ಆದರ್ಶ ನಿಮ್ಮದಾಗಲಿ, ಮತ್ತು ಯಾವಾಗಲೂ ಅದಕ್ಕೆ ತಕ್ಕಂತೆ ನಡೆದುಕೊಳ್ಳಿರಿ. ನಿಮ್ಮ ಮಗು ಸ್ವಲ್ಪ ಸ್ವಲ್ಪವಾಗಿ ಅದನ್ನು ತನ್ನಲ್ಲಿ ಪ್ರತಿಬಿಂಬಿಸುವುದನ್ನು ಕಾಣುವಿರಿ ಹಾಗೂ ಅವನ ಸ್ವಭಾವದಲ್ಲಿ ನೀವು ಕಾಣಬಯಸುವ ಗುಣಗಳು ಸಹಜವಾಗಿ ಪ್ರಕಟವಾಗುವುದನ್ನು ನೋಡುವಿರಿ. ಬಹಳ ಸಹಜವಾಗಿ ಮಗು ತನ್ನ ತಂದೆ–ತಾಯಿಗಳ ಬಗೆಗೆ ಮೆಚ್ಚುಗೆ, ಆದರ ಹೊಂದಿರುತ್ತದೆ. ಅವರು ಅಯೋಗ್ಯರಾಗಿರದೆ ಇದ್ದಾಗ ಪಾಲಕರು ಮಗುವಿಗೆ ಅರ್ಧದೇವತೆಗಳಿರುವ ಹಾಗೆ ಕಾಣುವರು ಮತ್ತು ಮಗು ತನಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಅವರನ್ನು ಅನುಕರಿಸಲು ಪ್ರಯತ್ನ ಮಾಡುತ್ತದೆ.

**CWM, 12/9–10** **– ಶ್ರೀಮಾತೆ**

*

**ಉದಾಹರಣೆ ಅತ್ಯಂತ ಒಳ್ಳೆಯ ಶಿಕ್ಷಕ**

ಉದಾಹರಣೆ ಅತ್ಯಂತ ಸಾಮರ್ಥ್ಯಪೂರ್ಣ ಬೋಧಕ. ನೀವೇ ಕೈಕೊಳ್ಳ–ದಿರುವ ಶಿಸ್ತುಪಾಲನೆಯ ಒಂದು ಪ್ರಯತ್ನವನ್ನು ಒತ್ತಾಯಪೂರ್ವಕವಾಗಿ ಮಗುವಿನಿಂದ ಬೇಡುವುದು ಬೇಡ. ಸ್ಥಿರತೆ, ಸಮತೆ, ಕ್ರಮಬದ್ಧತೆ, ನಿರುಪಯುಕ್ತ ಶಬ್ದಗಳಿಲ್ಲದೆ ಇರುವುದು ಇವೆಲ್ಲವನ್ನು ವಿದ್ಯಾರ್ಥಿಗಳಲ್ಲಿ ಸ್ಥಾಪಿಸಲು ಬಯಸುವ ಶಿಕ್ಷಕ ಸತತ ಅವುಗಳನ್ನು ಆಚರಣೆಯಲ್ಲಿ ತರುತ್ತಿರಬೇಕು.

ಶಿಕ್ಷಕ, ಯಾವಾಗಲೂ ಗೊತ್ತಾದ ಹೊತ್ತನ್ನು ತಪ್ಪದೇ ಅನುಸರಿಸಬೇಕು (punctual), ವರ್ಗ ಪ್ರಾರಂಭವಾಗುವುದಕ್ಕಿಂತ ಕೆಲವು ನಿಮಿಷಗಳ ಮೊದಲು ಬರಬೇಕು, ಯಾವಾಗಲೂ ಸರಿಯಾಗಿ ವಸ್ತ್ರ ಧರಿಸಿರಬೇಕು. ಎಲ್ಲದಕ್ಕಿಂತಲೂ ಹೆಚ್ಚಾಗಿ ತನ್ನ ವಿದ್ಯಾರ್ಥಿಗಳು ಎಂದಿಗೂ ಸುಳ್ಳು ಹೇಳಬಾರದು ಎಂಬುದಕ್ಕಾಗಿ ಶಿಕ್ಷಕನೇ ಸ್ವತಃ ಸುಳ್ಳು ಹೇಳಬಾರದು. ವಿದ್ಯಾರ್ಥಿಗಳು ಎಂದಿಗೂ ಕೋಪದ ಪ್ರವೃತ್ತಿ ಹೊಂದಿರಬಾರದು ಎಂಬುದಕ್ಕಾಗಿ ಅವನು ಅವರೊಡನೆ ಎಂದಿಗೂ ಕೋಪದಿಂದ ವರ್ತಿಸಬಾರದು ಮತ್ತು “ಒರಟು ವರ್ತನೆ ಬಹಳಷ್ಟು ಸಲ

ಕಣ್ಣೀರಿನಲ್ಲಿ ಕೊನೆಗೊಳ್ಳುತ್ತದೆ" ಎಂದು ಹೇಳುವ ಹಕ್ಕು ಅವನಿಗಿರಬೇಕು, ಅವನು ಯಾರದೇ ವಿರುದ್ಧ (ಹೊಡೆಯಲು) ಕೈ ಮೇಲಕ್ಕೆತ್ತಬಾರದು.

ಇವು ಮೂಲ ಸ್ವರೂಪದ ಹಾಗೂ ಪ್ರಾಥಮಿಕ ವಿಷಯಗಳು, ಇವುಗಳನ್ನು ಎಲ್ಲ ಶಾಲೆಗಳಲ್ಲಿ ಆಚರಣೆಯಲ್ಲಿ ತರಬೇಕು.

**CWM, 12/10** **– ಶ್ರೀಮಾತೆ**

*

**ಮಾನವ ಅಧಿಕಾರ ಸಾಂಕೇತಿಕ ವಿಷಯ**

ಕುಟುಂಬದಲ್ಲಿ ತಂದೆಯ ಅಧಿಕಾರ, ಶಿಕ್ಷಕನ ಅಧಿಕಾರ, ದೇಶದ ಮುಖ್ಯಸ್ಥನ ಅಧಿಕಾರ ಇವುಗಳಂತಹ ವ್ಯಕ್ತಿಗತ ಮಾನವ ಅಧಿಕಾರ ಸಾಂಕೇತಿಕ ವಿಷಯವಾಗಿರುತ್ತದೆ. ಅವರಿಗೆ ನಿಜವಾದ ಅಧಿಕಾರವಿರುವುದಿಲ್ಲ, ಆದರೆ ಅವರಿಗೆ ಅಧಿಕಾರವನ್ನು ಕೊಡಲಾಗಿರುತ್ತದೆ, ಅವರು ಈಗಿದ್ದ ಹಾಗಿರುವ ಸಾಮಾಜಿಕ ಜೀವನದಲ್ಲಿ ತಮ್ಮ ಪಾತ್ರವನ್ನು ವಹಿಸಲು ಆ ಅಧಿಕಾರ ಅವರನ್ನು ಶಕ್ತರನ್ನಾಗಿ ಮಾಡುತ್ತದೆ, ಆ ಸಾಮಾಜಿಕ ಜೀವನವನ್ನು ಮಿಥ್ಯೆಯಿಂದ ಸ್ಥಾಪಿಸಲಾಗಿರುತ್ತದೆ, ಸತ್ಯದಿಂದ ಅಲ್ಲವೇ ಅಲ್ಲ, ಏಕೆಂದರೆ ಸತ್ಯವೆಂದರೆ ಏಕತೆ, ಮತ್ತು ಸಮಾಜವನ್ನು ವಿಭಜನೆಯಿಂದ ಸ್ಥಾಪಿಸಲಾಗಿರುತ್ತದೆ. ತಮ್ಮ ಪಾತ್ರವನ್ನು, ಕಾರ್ಯ ವಿಧಾನವನ್ನು ಹಾಗೂ ಸಂಕೇತವನ್ನು ಹೆಚ್ಚುಕಡಿಮೆ ಸರಿಯಾಗಿ ಕಾರ್ಯಗತಗೊಳಿಸುವ ಜನರಿರುತ್ತಾರೆ– ತಪ್ಪಿಲ್ಲದಿರುವಿಕೆ ಯಾರಲ್ಲೂ ಇರುವುದಿಲ್ಲ, ಈ ಜಗತ್ತಿನಲ್ಲಿ ಎಲ್ಲವೂ ಮಿಶ್ರಣಕ್ಕೊಳಗಾಗಿದೆ. ತನ್ನ ಪಾತ್ರವನ್ನು ಗಂಭೀರವಾಗಿ ವಹಿಸುವ, ಅದನ್ನು ಸಾಧ್ಯವಿದ್ದಷ್ಟು ಪ್ರಾಮಾಣಿಕವಾಗಿ ತುಂಬುವ ಮನುಷ್ಯ ಸ್ಫೂರ್ತಿಗಳನ್ನು ಸ್ವೀಕರಿಸಬಹುದು, ಅವನು ತನ್ನ ಪಾತ್ರವನ್ನು ಸಾಮಾನ್ಯ ಮನುಷ್ಯನಿಗಿಂತ ಹೆಚ್ಚು ನಿಜವಾಗಿ ವಹಿಸಲು ಅವು ಅವನನ್ನು ಶಕ್ತನನ್ನಾಗಿ ಮಾಡುತ್ತವೆ. ಸಂಖ್ಯಾತ್ಮಕ ಸಂದೇಶಗಳನ್ನು (Marks) ಕೊಡುವ ಶಿಕ್ಷಕ ತಾನು ದೈವೀ ಸತ್ಯದ ಪ್ರತಿನಿಧಿ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದರೆ, ಅವನಿಗೆ ಸಾಧ್ಯವಿದ್ದಷ್ಟು ದೈವೀ ಸಂಕಲ್ಪದೊಡನೆ ಶ್ರುತಿಗೂಡಿಸಲು ಸಾಕಷ್ಟು ತೊಂದರೆ ತೆಗೆದುಕೊಂಡರೆ, ಸರಿ, ಅದು ಬಹಳ ಉಪಯುಕ್ತವಾಗುತ್ತದೆ, ಏಕೆಂದರೆ ಸಾಮಾನ್ಯ ಶಿಕ್ಷಕ ತನ್ನ ವೈಯಕ್ತಿಕ ಆದ್ಯತೆಗಳೊಂದಿಗೆ ಕಾರ್ಯಕೈಕೊಳ್ಳುತ್ತಾನೆ– ತನಗೇನು ಇಷ್ಟವಾದದ್ದು, ಏನು ಇಷ್ಟವಾಗಿರದದ್ದು ಇತ್ಯಾದಿ– ಹಾಗೂ ಸರ್ವಸಾಧಾರಣ ಮಿಥ್ಯೆಗೆ ಅವನು

ಸೇರಿರುತ್ತಾನೆ, ಆದರೆ ಸಂಖ್ಯಾತ್ಮಕ ಸಂಕೇತಗಳನ್ನು ಕೊಡುವ ಸಮಯದಲ್ಲಿ ಶಿಕ್ಷಕ ನಿಷ್ಕಪಟನಾಗಿ ತನ್ನ ಸಂಕುಚಿತ ಪ್ರಜ್ಞೆಗಿಂತ ಆಳಾತಿಆಳದಲ್ಲಿರುವ ಸತ್ಯದೊಡನೆ ತನ್ನನ್ನು ಸಾಮರಸ್ಯದಲ್ಲಿರಿಸಿದರೆ ಅವನು ಈ ಸತ್ಯಕ್ಕೆ ಮಧ್ಯಸ್ಥನೆಂದು ಸೇವೆ ಸಲ್ಲಿಸಬಹುದು ಮತ್ತು ಹಾಗಾಗಿ ವಿದ್ಯಾರ್ಥಿಗಳು ತಮ್ಮಂತರಂಗದಲ್ಲಿರುವ ಈ ಸತ್ಯದ ಬಗ್ಗೆ ಪ್ರಜ್ಞೆಯುಳ್ಳವರಾಗಬಹುದು.

**CWM, 4/92–93** **– ಶ್ರೀಮಾತೆ**

*

**ಶಿಕ್ಷಣ ಒಂದು ಪೌರೋಹಿತ್ಯ**

ನಾನು ನಿಮಗೆ ಹೇಳಬೇಕೆಂದು ಬಯಸಿದ ವಿಷಯಗಳಲ್ಲಿ ಇದು ಒಂದಾಗಿತ್ತು. ಶಿಕ್ಷಣ ಪೌರೋಹಿತ್ಯ, ಶಿಕ್ಷಣ ನೀಡುವುದು ಪೌರೋಹಿತ್ಯ ಮತ್ತು ದೇಶವೊಂದರ ಮುಖ್ಯಸ್ಥನಾಗುವುದು ಪೌರೋಹಿತ್ಯ. ಆಗ ಆ ಪಾತ್ರವನ್ನು ನೆರವೇರಿಸಿಕೊಡುವವನು ಅದನ್ನು ಅತ್ಯುಚ್ಚ ಹಾಗೂ ಅತ್ಯಂತ ಸತ್ಯವಾದ ರೀತಿಯಲ್ಲಿ ನೆರವೇರಿಸಿಕೊಡಲು ಅಭೀಪ್ಸೆಪಟ್ಟರೆ ಜಗತ್ತಿನ ಸರ್ವಸಾಧಾರಣ ಸ್ಥಿತಿ ಹೆಚ್ಚು ಒಳ್ಳೆಯದಾಗುವುದು. ದುರ್ದೈವವಶಾತ್ ಬಹಳಷ್ಟು ಜನರು ಅದರ ಬಗ್ಗೆ ಯೋಚಿಸುವುದೇ ಇಲ್ಲ, ಅವರು ತಮ್ಮ ಪಾತ್ರವನ್ನು ಹೇಗೋ ತುಂಬುತ್ತಾರೆ– ಕೇವಲ ಹಣ ಗಳಿಸುವುದಕ್ಕಾಗಿ ಕಾರ್ಯಮಾಡುವ ಅಸಂಖ್ಯಾತ ಜನರ ಬಗ್ಗೆ ಮಾತನಾಡುವುದು ಬೇಡ, ಆದರೆ ಈ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಅವರ ಚಟುವಟಿಕೆ ಒಟ್ಟಿನಲ್ಲಿ ಕೊಳಕಾಗಿರುತ್ತದೆ. ಆಶ್ರಮವನ್ನು ರೂಪಿಸುವುದರಲ್ಲಿ ಅದು ನನ್ನ ಮೊಟ್ಟಮೊದಲ ಆಧಾರವಾಗಿತ್ತು: ಇಲ್ಲಿ ಕೈಕೊಂಡ ಕಾರ್ಯ ಭಗವಂತನಿಗೆ ಅರ್ಪಿಸಿದ ರೂಪದಲ್ಲಿರಬೇಕು. ಮನುಷ್ಯ ತನ್ನ ಸ್ವಭಾವದ, ಮನೋಧರ್ಮದ ಪ್ರವಾಹದಲ್ಲಿ ತನ್ನನ್ನು ಬಿಟ್ಟುಕೊಡಲು ಅನುವು ಮಾಡಿಕೊಡುವುದರ ಬದಲಾಗಿ ಅವನು ಸತತ ತನ್ನ ಮನಸ್ಸಿನಲ್ಲಿ ಪರಮೋಚ್ಚ ಜ್ಞಾನದ, ಪರಮೋಚ್ಚ ಸತ್ಯದ ಹಾಗೂ ಪರಮೋಚ್ಚ ಶಾಸನದ ಪ್ರತಿನಿಧಿ ಎಂಬ ಭಾವನೆಯನ್ನು ಮನಸ್ಸಿನಲ್ಲಿ ಕಾಪಾಡಿಕೊಂಡು ಬರಬೇಕು ಮತ್ತು ಅದನ್ನು ಸಾಧ್ಯವಿದ್ದಷ್ಟು ಅತ್ಯಂತ ಪ್ರಾಮಾಣಿಕವಾದ, ನಿಷ್ಕಪಟ ರೀತಿಯಲ್ಲಿ ಅನ್ವಯಿಸಬೇಕು; ಆಗ ಮನುಷ್ಯ ತಾನೇ ಸ್ವತಃ ಶ್ರೇಷ್ಠ ಪ್ರಗತಿ ಮಾಡುತ್ತಾನೆ ಹಾಗೂ ಇತರರು ಕೂಡ ಪ್ರಗತಿ ಹೊಂದುವಂತೆ ಮಾಡುತ್ತಾನೆ ಮತ್ತು ಅವನನ್ನು (ಶಿಕ್ಷಕನನ್ನು) ಗೌರವಿಸಲಾಗುತ್ತದೆ, ವರ್ಗದಲ್ಲಿ ಇನ್ನು ಮುಂದೆ

ಅಶಿಸ್ತು ಇರುವುದಿಲ್ಲ, ಏಕೆಂದರೆ ಪ್ರತಿಯೊಬ್ಬ ಮಾನವ ಸತ್ತೆಯಲ್ಲಿ ನಿಜವಾದ ಶ್ರೇಷ್ಠತೆಯನ್ನು ಗುರುತಿಸುವ ಹಾಗೂ ಅದರ ಎದುರು ಬಾಗುವ ಏನೋ ಒಂದಿರುತ್ತದೆ; ಅತ್ಯಂತ ಕೆಟ್ಟ ಅಪರಾಧಿಗಳು ಕೂಡ ಒಂದು ಉದಾರವಾದ, ನಿರಾಸಕ್ತ ಕಾರ್ಯವನ್ನು ಹೊಗಳಲು ಸಮರ್ಥರಾಗಿರುತ್ತಾರೆ. ಹಾಗಾಗಿ ಶಾಲಾ ಶಿಕ್ಷಕನಲ್ಲಿ ಮಕ್ಕಳು ಸತ್ಯಕ್ಕನುಗುಣವಾಗಿ ಕಾರ್ಯಕೈಕೊಳ್ಳುವ ಈ ಆಳವಾದ ಅಭೀಪ್ಸೆಯ ಭಾವನೆ ತಂದುಕೊಂಡಾಗ ಅವರು ನಿಮಗೆ ವಿಧೇಯರಾಗಿ ಕಿವಿಗೊಡುತ್ತಾರೆ, ಅಂತಹದನ್ನು ನೀವು ಒಂದು ದಿನ ಒಳ್ಳೆಯ ಭಾವನೆಯಿಂದಿದ್ದು ಮರುದಿನ ಆ ಭಾವನೆಯಲ್ಲಿ ಇರದೇ ಹೋದರೆ ಅಂತಹ ವಿಧೇಯತೆಯನ್ನು ತೋರಿಸುವುದಿಲ್ಲ, ಅದು ಎಲ್ಲರಿಗೂ ಅನರ್ಥಕಾರಕವಾಗುತ್ತದೆ.

*

**ಒಂದು ಹೊಸ ಯೋಚನೆಗಾಗಿ ಶಿಕ್ಷಣ ಪದ್ಧತಿಯ ಒಂದು ಹೊಸಕೇಂದ್ರ**

ಯೋಚನೆಯ ಒಂದು ಹೊಸ ಕೇಂದ್ರ, ಶಿಕ್ಷಣ ಪದ್ಧತಿಯ ಒಂದು ಹೊಸ ಕೇಂದ್ರವನ್ನು ಸೂಚಿಸುತ್ತದೆ.

ನಮ್ಮ ವಿಶ್ವವಿದ್ಯಾಲಯಗಳಲ್ಲಿ ಸದ್ಯ ಹೆಚ್ಚು ಬಳಕೆಯಲ್ಲಿರುವ ಪದ್ಧತಿ ಮನುಷ್ಯನ ಮನೋವೈಜ್ಞಾನಿಕತೆಯನ್ನು ನಿರ್ಲಕ್ಷಿಸುವಂತಹದಾಗಿರುತ್ತದೆ, ಮನಸ್ಸಿನ ಮೇಲೆ ಶ್ರಮದಿಂದ ಮಾಹಿತಿಯ ಅನೇಕ ಚಿಕ್ಕ ಪೊಟ್ಟಣಗಳನ್ನು ಹೇರುತ್ತದೆ, ಅವುಗಳನ್ನು ವಿಧಾನ ವಿಳಂಬ (red tape)ದೊಂದಿಗೆ ಕಾಳಜಿಪೂರ್ವಕವಾಗಿ ಕಟ್ಟಲಾಗಿರುತ್ತದೆ ಮತ್ತು ಹೇರುವ ಈ ವಿಧಾನಗಳ ಮೂಲಕ ಮನುಷ್ಯ ಜೀರ್ಣಿಸಿಕೊಳ್ಳುವ, ಸೃಷ್ಟಿಸುವ ಹಾಗೂ ಬುದ್ಧಿಮತ್ತೆಯಲ್ಲಿ, ಮನುಷ್ಯತ್ವದಲ್ಲಿ ಹಾಗೂ ಚೈತನ್ಯದಲ್ಲಿ ಉಪಯೋಗವಾಗುವ ಕಾರ್ಯ ವಿಧಾನಗಳು ಮತ್ತು ಉಪಕರಣಗಳು ಹಾಳಾಗುತ್ತವೆ ಇಲ್ಲವೆ ಕ್ಷೀಣವಾಗುವಂತೆ ಮಾಡುತ್ತವೆ.

**CWSA, 1/368** – ಶ್ರೀ ಅರವಿಂದರು

*

ಈ ದೇಶದಲ್ಲಿ ಶಿಕ್ಷಣ ಕೇವಲ ಒಂದು ಪ್ರಸಂಗ ಎಂದು ಪರಿಗಣಿಸುವ ಅತಿ ಹೆಚ್ಚಿನ ಪ್ರವೃತ್ತಿ ಇದೆ, ಪದವಿಯನ್ನು ದೊರಕಿಸಿದ ನಂತರ ಅದು ಮುಗಿದು ಹೋಗುತ್ತದೆ. ಆದರೆ ವಿಶ್ವವಿದ್ಯಾಲಯ ಮನುಷ್ಯನ ಶಿಕ್ಷಣ ಪೂರ್ತಿಯಾಯಿತೆಂದು

ನಟನೆ ಮಾಡಲಾರದು, ಮಾಡುವುದಿಲ್ಲ, ಅದು ಕೇವಲ ಅವನ ಕೈಯಲ್ಲಿ ಕೆಲವು ವಸ್ತು–ವಿಷಯಗಳನ್ನಿರಿಸುತ್ತದೆ, ಅವನು ಹೆಜ್ಜೆ ಇರಿಸಬೇಕಾದ ಮಾರ್ಗಗಳತ್ತ ಬೊಟ್ಟುಮಾಡಿ ತೋರಿಸುತ್ತದೆ ಮತ್ತು ಅದು ಅವನಿಗೆ ಹೇಳುತ್ತದೆ.– "ನಿನ್ನ ಕೈಯಲ್ಲಿರಿಸಿದ ವಸ್ತು–ವಿಷಯಗಳು ಇಲ್ಲಿವೆ, ಅವುಗಳಿಂದ ನಿನಗೆ ಸಾಧ್ಯವಿದ್ದಷ್ಟನ್ನು ಕೈಕೊಳ್ಳುವುದನ್ನು ನಿನಗೆ ಬಿಟ್ಟುಕೊಡಲಾಗಿದೆ"– ಇಲ್ಲವೆ ನೀನು ಪ್ರಯಾಣ ಮಾಡಲು ನಾನು ಒದಗಿಸಿದ ಮಾರ್ಗಗಳಲ್ಲಿ ಹೆಜ್ಜೆಗಳನ್ನು ಕೊನೆಯವರೆಗೆ ಇರಿಸುವುದು ನಿನ್ನ ಕಾರ್ಯ, ಅವುಗಳಲ್ಲಿ ಯಶಸ್ಸು ಗಳಿಸಿ ಜಗತ್ತಿನ ಮುಂದೆ ನನಗೆ ಸಮರ್ಥನೆ ಒದಗಿಸು.

ಆದ್ದರಿಂದ ನಿನ್ನ ಭವಿಷ್ಯತ್ತಿನ ಜೀವನದಲ್ಲಿ ಈ ವಿಷಯಗಳನ್ನು ನೆನಪಿನಲ್ಲಿ ಇಟ್ಟುಕೋ ಎಂದು ನಾನು ನಿನಗೆ ಹೇಳುತ್ತಿದ್ದೇನೆ, ಇನ್ನು ಮುಂದೆ ಅವಶ್ಯವಾಗಿ–ರುವುದಿಲ್ಲ ಎಂದು ಮಹಾವಿದ್ಯಾಲಯದ ನಿಮ್ಮ ತರಬೇತಿಯ ಪರಿಣಾಮಗಳನ್ನು ಕಳಚಿಕೊಳ್ಳುವುದು ಬೇಡ, ಆದರೆ ನಿಮ್ಮದೇ ಮಾರ್ಗಗಳಲ್ಲಿ ಉನ್ನತಿಗಾಗಿ ಹಾಗೂ ಶ್ರೇಷ್ಠತೆಗಾಗಿ ಹೆಣಗಬೇಕು ಮತ್ತು ಹೆಸರುಗಳ ಉಜ್ವಲತೆಯ ಮೂಲಕ ನಿಮ್ಮ ಕ್ಷಮತೆಗಳನ್ನು ಪೋಷಿಸಿಕೊಂಡು ಬಂದ ಮೊದಲ ಮನೆಗೆ ಪ್ರಭೆಯನ್ನು ಅಧಿಕವಾಗಿಸಬೇಕು, ನಿಮ್ಮ ಬುದ್ಧಿಮತ್ತೆಗಳನ್ನು ಸಜ್ಜುಗೊಳಿಸಿದ, ಮನುಷ್ಯರಾಗಲು ತರಬೇತು ನೀಡಿದ, ಜಗತ್ತಿಗೆ ಯೋಗ್ಯರಾಗುವಂತಹ ಸಾಮಾಜಿಕ ಜೀವನವನ್ನು ಕೊಡಲು ಹೆಣಗಿದ ಆ ಮನೆಯ ನೆನಪನ್ನು ಮನಸ್ಸಿನಲ್ಲಿಟ್ಟುಕೊಂಡಿರಬೇಕು. ಕೊನೆಗೆ ನಾನು ನಿಮಗೆ ಹೇಳುವುದು ಹೀಗಿದೆ. ದಿನಗಳು ಕಳೆದುಹೋದ ಮೇಲೆ ನಿಮ್ಮನ್ನು ಅದರಿಂದ ಕಡಿದುಕೊಳ್ಳುವುದು ಬೇಡ, ಆದರೆ ನೀವು ಅದರಿಂದ ದೂರವಿದ್ದರೆ ನಿಮ್ಮ ಸಹಪಾಠಿಗಳನ್ನು ಭೇಟಿ ಮಾಡಿದಾಗ ಅವರನ್ನು ಸಹೋದರರೆಂಬ ಭಾವನೆಯಿಂದ ಸ್ವಾಗತಿಸಬೇಕು, ನೀವು ಅದರ ಹತ್ತಿರವಿದ್ದರೆ ಸಂಪರ್ಕವನ್ನು ಕಾಪಾಡಿಕೊಂಡು ಬರಬೇಕು, ನಿಮ್ಮ ಹಾಗೂ ಭವಿಷ್ಯತ್ತಿನ ವಿದ್ಯಾರ್ಥಿಗಳ ನಡುವೆ ವಯಸ್ಸಿನ ಭಿನ್ನತೆಯನ್ನು ಪರಿಗಣಿಸಬಾರದು, ಆದರೆ ಅವರೊಡನೆ ಸಹಕರಿಸಬೇಕು, ಈ ಸಾಮಾಜಿಕ ಒಟ್ಟುಗೂಡುವಿಕೆಯಂತಹ ಸಂದರ್ಭಗಳಲ್ಲಿ ಉಪಸ್ಥಿತರಿರಬೇಕು ಮತ್ತು ಅದು ಗತಕಾಲದಲ್ಲಿ ನಿಮಗಾಗಿ ಮಾಡಿದ ಎಲ್ಲದಕ್ಕಾಗಿ ನಿಮ್ಮ ಕ್ರಿಯೆಗಳ ಮೂಲಕ ನಿಮ್ಮ ಕೃತಜ್ಞತೆಯನ್ನು ಪ್ರದರ್ಶಿಸಬೇಕು.

**CWSA, 1/355–56** **– ಶ್ರೀ ಅರವಿಂದರು**

*

## Symbol of Sri Aurobindo International Centre of education

### ಕೇಂದ್ರದ ಸಂಕೇತ
### ಏಕತೆಯಲ್ಲಿರುವ ಈಶ್ವರ ಹಾಗೂ
### ಈಶ್ವರಿ ಇವರ ಪರಿಣಾಮಕಾರಿ ಪ್ರಕಟಣೆ

## ಶ್ರೀ ಅರವಿಂದರ ಅಂತಾರಾಷ್ಟ್ರೀಯ ಶಿಕ್ಷಣ ಕೇಂದ್ರ [Sri Aurobindo International Centre of Education (SAICE)]ದ ಸಂಕೇತದ ಪ್ರಾಮುಖ್ಯತೆ

ಇತ್ತೀಚೆಗಿನ ರೂಪಗಳ ಅಡಿಯಲ್ಲಿ ಶ್ರೀ ಅರವಿಂದರು ಕಲ್ಪನೆ ಮಾಡಿಕೊಂಡಿದ್ದು ಜಗತ್ತಿನ ಎಲ್ಲ ವಿದ್ಯಾರ್ಥಿಗಳಿಗೆ ತೆರೆದುಕೊಂಡಿರುವ ಒಂದು ಅಂತಾರಾಷ್ಟ್ರೀಯ ಶಿಕ್ಷಣ ಕೇಂದ್ರವನ್ನು ಪಾಂಡಿಚೇರಿಯಲ್ಲಿ ಸ್ಥಾಪಿಸುವುದಾಗಿತ್ತು.

*

ಇಲ್ಲಿ ಸ್ಥಾಪಿಸಲಾಗುತ್ತಿರುವ ಈ ವಿಶ್ವವಿದ್ಯಾಲಯ ಪೃಥ್ವಿಯ ಮೇಲೆ ಅತ್ಯಂತ ಶ್ರೇಷ್ಠ ಜ್ಞಾನದ ಪೀಠವಾಗಲಿದೆ ಎಂಬುದರ ಬಗ್ಗೆ ನಾನು ಪರಿಪೂರ್ಣ ನಿಶ್ಚಿತತೆ ಹೊಂದಿದ್ದೇನೆ, ಅದರ ಬಗ್ಗೆ ಗಾಢನಂಬಿಕೆ ಇದೆ, ನನ್ನ ಮನಸ್ಸಿನಲ್ಲಿ ಕಿಂಚಿತ್ತೂ ಸಂಶಯವಿಲ್ಲ. ಅದಕ್ಕೆ ಐವತ್ತು ವರ್ಷಗಳು ಬೇಕಾಗಬಹುದು ನೂರು ವರ್ಷಗಳು ಬೇಕಾಗಬಹುದು. ನಾನಿಲ್ಲಿ ಇರುವುದರ ಬಗ್ಗೆ ನಿಮಗೆ ಸಂಶಯವಿರಬಹುದು, ನಾನಲ್ಲಿ ಇರಲಿ, ಇರದಿರಲಿ, ಆದರೆ ನನ್ನ ಈ ಮಕ್ಕಳು ನನ್ನ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಲು ಅಲ್ಲಿರುತ್ತಾರೆ. ಇಂದು ಈ ದೈವೀ ಕಾರ್ಯದಲ್ಲಿ ಸಹಯೋಗ ನೀಡುವವರು ಇಂತಹ ಅಸಾಧಾರಣ ಸಿದ್ಧಿಯನ್ನು ಪಡೆಯುವುದರಲ್ಲಿ ಭಾಗವಹಿಸಿದುದರ ಬಗ್ಗೆ ಸಂತೋಷಪಡುವರು ಹಾಗೂ ಅಭಿಮಾನ ಹೊಂದಿರುವರು.

**CWM, 12/111–12** **– ಶ್ರೀಮಾತೆ**

*

1. ಸಂಪೂರ್ಣ ಸ್ವ–ನಿಯಂತ್ರಣವೆಂದರೆ ಕೇವಲ ಸಿಡುಕನ್ನು ಯಾವುದೇ ರೀತಿಯಲ್ಲಿ ತೋರಿಸದಿರುವುದು ಅಷ್ಟೇ ಅಲ್ಲ, ಆದರೆ ಎಲ್ಲ ಪರಿಸ್ಥಿತಿಗಳಡಿಯಲ್ಲಿ ಪರಿಪೂರ್ಣವಾಗಿ ಸ್ಥಿರತೆಯಲ್ಲಿದ್ದುಕೊಳ್ಳುವುದಾಗಿದೆ ಹಾಗೂ ಕ್ಷೋಭೆಗೀಡಾಗದೆ ಇರುವುದಾಗಿದೆ.

2. ಸ್ವ–ಗಾಢನಂಬಿಕೆಯ ವಿಚಾರದಲ್ಲಿ (ಶಿಕ್ಷಕ) ತನ್ನ ಮಹತ್ವ ಕುರಿತು ಸಾಪೇಕ್ಷತೆಯ ಭಾವವನ್ನು ಹೊಂದಿರಬೇಕು.

   ಎಲ್ಲದಕ್ಕಿಂತಲೂ ಹೆಚ್ಚಾಗಿ ವಿದ್ಯಾರ್ಥಿಗಳು ಪ್ರಗತಿ ಸಾಧಿಸಲಿ ಎಂದು ಶಿಕ್ಷಕ ಬಯಸಿದರೆ ತಾನೇ ಸ್ವತಃ ತಾನೇನಿರುವನೋ ಅದರಿಂದ ಹಾಗೂ ತಾನು ತಿಳಿದುಕೊಂಡುದುದರಿಂದ ತೃಪ್ತಿಯಿಂದಿರಬಾರದು.

3. ತನ್ನ ವಿದ್ಯಾರ್ಥಿಗಳ ಮೇಲೆ, ಯಾವುದೇ ಅರ್ಥದಲ್ಲಿ, ಸಾರಭೂತ ಔನ್ನತ್ಯದ ಭಾವವಿರಬಾರದು ಮತ್ತು ಒಬ್ಬ ಇಲ್ಲವೆ ಇನ್ನೊಬ್ಬ ವಿದ್ಯಾರ್ಥಿಗಾಗಿ ಯಾವುದೇ ಬಗೆಯ ಆದ್ಯತೆ ಇಲ್ಲವೆ ಅಂಟಿಕೊಳ್ಳುವಿಕೆ ಇರಬಾರದು.

4. ಆಧ್ಯಾತ್ಮಿಕ ದೃಷ್ಟಿಕೋನದಿಂದ ಎಲ್ಲರೂ ಸರಿಸಮಾನರಾಗಿರುತ್ತಾರೆ ಎಂಬುದನ್ನು ಶಿಕ್ಷಕ ತಿಳಿದುಕೊಂಡಿರಬೇಕು, ಕೇವಲ ಸಹನೆಯ ಭಾವವನ್ನು ಇಟ್ಟುಕೊಂಡಿರುವುದರ ಬದಲಾಗಿ ವಿಶ್ವವ್ಯಾಪಕ ಗ್ರಹಣಶಕ್ತಿಯನ್ನು ಇಲ್ಲವೆ ತಿಳಿವಳಿಕೆಯನ್ನು ಹೊಂದಿರಬೇಕು.

5. "ಪಾಲಕ ಹಾಗೂ ಶಿಕ್ಷಕ ಇವರಿಬ್ಬರ ಕರ್ತವ್ಯವೆಂದರೆ ಮಗು ತನ್ನದೇ ಬೌದ್ಧಿಕ, ನೈತಿಕ, ಸೌಂದರ್ಯಾಭಿರುಚಿಯ ಹಾಗೂ ವ್ಯಾವಹಾರಿಕ ಸಾಮರ್ಥ್ಯಗಳನ್ನು ಅಭಿವೃದ್ಧಿಗೊಳಿಸಿಕೊಳ್ಳುವುದಕ್ಕೆ ತಾನೇ ಶಿಕ್ಷಣ ಪಡೆಯಲು ಶಕ್ತನನ್ನಾಗಿ ಮಾಡುವುದಾಗಿರುತ್ತದೆ ಮತ್ತು ಅದಕ್ಕಾಗಿ ಸಹಾಯ ಮಾಡುವುದಿರುತ್ತದೆ. ಮಗು ಮುಕ್ತವಾಗಿ ದೈಹಿಕ ಸತ್ತೆಯಾಗುವಂತೆ ಮಾಡುವುದಿರುತ್ತದೆ, ಜಡ ಇಲ್ಲವೆ ಪ್ಲಾಸ್ಟಿಕ್ ವಸ್ತುವನ್ನು ನಾದಿದ ಹಾಗೆ ಇಲ್ಲವೆ ಒತ್ತಡಕ್ಕೊಳಗಾಗುವ ಹಾಗೆ ಮಾಡುವುದಿರುವುದಿಲ್ಲ." ಶ್ರೀ ಅರವಿಂದರು, The Human Cycle.

**CWM, 12/167** **– ಶ್ರೀಮಾತೆ**

*

## ಹೊಸ ದೈವೀ ಪ್ರಜ್ಞೆಗಾಗಿ ಒಂದು ಹೊಸ ಶಿಕ್ಷಣ ಪದ್ಧತಿ, ನಿಜವಾದ ಉದ್ದೇಶ ಹಾಗೂ ಗುರಿ

**ಪ್ರಶ್ನೆ:** *ನಮ್ಮ ಶಿಕ್ಷಣ ಕೇಂದ್ರದ ಗುರಿ ಹಾಗೂ ಉದ್ದೇಶವೇನು? ಅದು ಶ್ರೀ ಅರವಿಂದರ ಕೃತಿಗಳಲ್ಲಿರುವುದನ್ನು ಕಲಿಸಿಕೊಡುವುದಕ್ಕಾಗಿರುತ್ತದೆಯೆ? ಅವುಗಳನ್ನು ಮಾತ್ರ! ಎಲ್ಲವನ್ನೂ ಇಲ್ಲವೆ ಕೆಲವನ್ನು ಮಾತ್ರ? ಇಲ್ಲವೆ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ಕೃತಿಗಳಲ್ಲಿದ್ದುದನ್ನು ಓದಲು ವಿದ್ಯಾರ್ಥಿಗಳನ್ನು ತಯಾರು ಮಾಡುವುದಿದೆಯೆ? ಅದನ್ನು ಆಶ್ರಮದ ಜೀವನಕ್ಕಾಗಿ ಇಲ್ಲವೆ ಇತರ ಬಾಹ್ಯ ವೃತ್ತಿಗಾಗಿ ಮಾಡುವುದಿದೆಯೆ?*

**ಶ್ರೀಮಾತೆ:** ಇರುವ ಪ್ರಶ್ನೆ ಈ ಕೃತಿಗಳನ್ನು, ಆ ಕೃತಿಗಳನ್ನು ಓದಲು ತಯಾರು ಮಾಡುವುದಾಗಿರುವುದಿಲ್ಲ, ಹಾಗೆ ಮಾಡಲು ಸಮರ್ಥರಾದವರನ್ನು ಸರ್ವಸಾಧಾರಣ ನಿತ್ಯಗಟ್ಟಲೆಯ ಯೋಚನೆ, ಭಾವನೆ ಹಾಗೂ ಕ್ರಿಯೆಗಳಿಂದ ಹೊರಗೆಳೆದು ತರುವುದಾಗಿರುತ್ತದೆ. ಅದು ಇಲ್ಲಿರುವವರೆಲ್ಲರಿಗೂ ತಮ್ಮಿಂದ ಮಾನವ ರೀತಿಯ ಯೋಚನೆ ಹಾಗೂ ಕೈಕೊಳ್ಳುವಿಕೆಯ ಗುಲಾಮಗಿರಿಯನ್ನು ಎಸೆದು ಬಿಡುವುದಕ್ಕೆ ಅವಕಾಶಗಳನ್ನು ಕೊಡುವುದಾಗಿದೆ, ಕೇಳಲು ಬಯಸುವ ಎಲ್ಲರಿಗೆ ಅಲ್ಲಿ ಇನ್ನೊಂದು ಹಾಗೂ ಹೆಚ್ಚು ನಿಜವಾದ ಜೀವನದ ರೀತಿಯಿದೆ ಎಂಬುದನ್ನು ಕಲಿಸಿಕೊಡುವುದಿದೆ, ಹೇಗೆ ಜೀವಿಸಬೇಕು ಮತ್ತು ಹೇಗೆ ನಿಜವಾದ ಸತ್ತೆಯಾಗಬೇಕು ಎಂಬ ಆ ರೀತಿಯನ್ನು ಶ್ರೀ ಅರವಿಂದರು ನಮಗೆ ಕಲಿಸಿಕೊಟ್ಟಿದ್ದಾರೆ– ಮತ್ತು ಇಲ್ಲಿ ಶಿಕ್ಷಣದ ಗುರಿ ಆ ಬಗೆಯ ಜೀವನಕ್ಕೆ ಅಂತಹ ಜೀವನಕ್ಕೆ ಮಕ್ಕಳನ್ನು ತಯಾರು ಮಾಡುವುದಿದೆ, ಯೋಗ್ಯರನ್ನಾಗಿ ಮಾಡುವುದಿದೆ.

ಮಾನವ ರೀತಿಯ ಯೋಚನೆ ಹಾಗೂ ಜೀವನ ಇವುಗಳಿಗಾಗಿ ಉಳಿದವರಿಗೆಲ್ಲ ಜಗತ್ತು ವಿಶಾಲವಾಗಿದೆ, ಅಲ್ಲಿ ಪ್ರತಿಯೊಬ್ಬರಿಗೂ ಸ್ಥಾನವಿರುತ್ತದೆ. ನಮಗೆ ಹೆಚ್ಚಿನ ಸಂಖ್ಯೆಯಲ್ಲಿರುವ ಜನರು ಬೇಕಾಗಿಲ್ಲ– ಅದು ಆಯ್ಕೆ, ನಾವು ಬಯಸುವುದು ಪ್ರತಿಭಾವಂತ ವಿದ್ಯಾರ್ಥಿಗಳನ್ನಲ್ಲ, ಜೀವಿಸುತ್ತಿರುವ ಆತ್ಮಗಳನ್ನು ಬಯಸುತ್ತೇವೆ.

**CWM, 12/117–18** **– ಶ್ರೀಮಾತೆ**

*

## ಶಿಕ್ಷಣದ ಆದರ್ಶ

**ಪ್ರಶ್ನೆ:** *ನಮ್ಮ ಶಾಲೆಯ ಹಾಗೂ ವಿಶ್ವವಿದ್ಯಾಲಯದ ಕೇಂದ್ರದಲ್ಲಿ ಶಿಕ್ಷಣವನ್ನು ಶ್ರೀ ಅರವಿಂದರ ಆದರ್ಶಗಳ ಪ್ರಕಾರ ಕೊಡುವುದನ್ನು ಪ್ರಸ್ತಾಪಿಸಲಾಗಿತ್ತು. ಆದರೆ ಇಲ್ಲಿಯವರೆಗೆ ಕೊಡಲಾಗುತ್ತಿರುವ ಶಿಕ್ಷಣ ಇನ್ನಿತರ ಶಾಲೆಗಳಲ್ಲಿ ಇದ್ದ ಹಾಗೇ ಇದೆ, ಮನುಷ್ಯ ಅಂತಹದೇ ವಿಷಯಕ್ರಮವನ್ನು ಅನುಸರಿಸುತ್ತಿದ್ದಾನೆ.*

**ಶ್ರೀಮಾತೆ:** ಹೌದು ನನ್ನ ಮಗು, ವರ್ಷಗಳ ಕಾಲ ಅದು ಬೇರೆ ರೀತಿಯದಾಗಲಿ ಎಂದು ಹೋರಾಡುತ್ತ ಬಂದಿದ್ದೇನೆ. ಇಲ್ಲಿ ಮಕ್ಕಳಾದ ನೀವು ಸಾಕಷ್ಟು ವಯಸ್ಸಿನವರಾದಾಗ, ಹಾಗೂ ಶಿಕ್ಷಕರಾಗಲು ತಯಾರಾದಾಗ ಹೊಸದಾಗಿ ಬರುವವರಿಗೆ ಸರಿಯಾದ ವಿಷಯವನ್ನು ಕಲಿಸಿಕೊಡುವುದನ್ನು ನಿಮಗೆ ವಹಿಸಲಾಗುವುದು. ಸದ್ಯ ವಾಸ್ತವದಲ್ಲಿ ಅದು ವಿದ್ಯಾರ್ಥಿಗಳಿಗಾಗಿ ಇರುವ ಶಾಲೆಗಿಂತ ಹೆಚ್ಚಾಗಿ ಶಿಕ್ಷಕರಿಗಾಗಿ ಇರುವ ಶಾಲೆಯಾಗಿದೆ! ಬಯಸಿದ್ದೇನೆಂದರೆ ಪ್ರತಿಯೊಬ್ಬನಿಗೂ ತಿಳಿದಿರುವುದನ್ನು ಕಲಿತುಕೊಳ್ಳುವುದರ ಮೂಲಕ ನೀವು ನಿಮ್ಮನ್ನು ತಯಾರು ಮಾಡಿಕೊಳ್ಳಬೇಕು– ಏಕೆಂದರೆ ಅಲ್ಲಿ ಅತ್ಯಗತ್ಯದ್ದಾದ ಆಧಾರವಿದೆ, ಅದು ಬಹಳಷ್ಟಾದ ಏನೋ ಅಲ್ಲ, ವಿವರಗಳನ್ನೊಳಗೊಂಡ ಇಲ್ಲವೆ ಆಳವಾಗಿ ಸ್ಥಾಪಿಸಿದ ಆಧಾರ ಹೊಂದಿದ ವಿಷಯವಲ್ಲ, ಆದಾಗ್ಯೂ ಅಲ್ಲಿ ಅವಶ್ಯವಾದ ಸರ್ವಸಾಧಾರಣ ಮಾನವ ಜ್ಞಾನದ ಆಧಾರವಿದೆ. ಆದರೆ ಒಮ್ಮೆ ನೀವು ಆ ಆಧಾರ ಹೊಂದಿದಾಗ ಮತ್ತು ಅದೇ ಕಾಲಕ್ಕೆ ಇಲ್ಲಿರುವ ಪ್ರಭಾವದ ಪ್ರಯೋಜನ ಪಡೆದಾಗ ಮತ್ತು ಆ ಕೋನದಿಂದ ನೋಡಲು ಶಕ್ತರಾಗುವುದಕ್ಕಾಗಿ ನೀವು ಓದಿ ಸಾಕಷ್ಟು ತಿಳಿದುಕೊಂಡು ನಿಜವಾದ ಜೀವನದ ಕೋನ– ಸರಿ ಅದೆಲ್ಲವನ್ನೂ ನೀವು ಅರಿತಾಗ, ನೀವು ಕಲಿತದ್ದನ್ನು ಹೊರಗಿನಿಂದ ಬರುವ ಮಕ್ಕಳಿಗೆ ಕಲಿಸಿಕೊಡಲು ನಿಮ್ಮನ್ನೇ ಕೇಳಲಾಗುತ್ತದೆ. ಅದು ಕಾರ್ಯದ ಒಂದು ಭಾಗ. ಕೆಲವು ಅಪರೂಪವಾದವುಗಳನ್ನು ಹೊರತುಪಡಿಸಿ ಬೋಧನೆಯನ್ನು ಅತ್ಯಂತ ಸಾಧಾರಣ ತತ್ವಗಳ ಪ್ರಕಾರ ಕೊಡಲಾಗುತ್ತಿದೆ ಎಂಬುದು ಸತ್ಯವಾದದ್ದು, ಅದು ನನಗೆ ತಿಳಿದಿದೆ. ಆದರೆ ಉದಾಹರಣೆಗೆ, ಅದು ಹಾಗಿರದಂತಾಗಿರಲಿ ಎಂಬುದಾದರೆ ಉಪಯೋಗಿಸಲಾಗುತ್ತಿರುವ ಪುಸ್ತಕಗಳನ್ನು, ಇಲ್ಲಿ ಎತ್ತಿ ಹಿಡಿದು ಆಯ್ದುಕೊಂಡ ಭಾಗಗಳೊಂದಿಗೆ ತಯಾರಿಸಬೇಕು, ಅದು ಇಲ್ಲಿ ಕಾರ್ಯಗತ–ಗೊಳಿಸಿದ ಬೋಧನೆಯ ವಿಧಾನದೊಂದಿಗೆಯೂ ಕೂಡ ಇರಬಹುದು.

**CWM, 12/414** **– ಶ್ರೀಮಾತೆ**

*

## ಪ್ರಯೋಜನ ತತ್ವ ಎಂಬ ಕಾಯಿಲೆ

**ಪ್ರಶ್ನೆ:** *ಇಲ್ಲಿ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಗೆ ಡಿಪ್ಲೋಮಾಗಳನ್ನು ಹಾಗೂ ಪ್ರಮಾಣಪತ್ರ (certificate)ಗಳನ್ನು ಏಕೆ ಕೊಡಲಾಗುತ್ತಿಲ್ಲ?*

**ಶ್ರೀಮಾತೆ:** ಸುಮಾರು ಕಳೆದ ನೂರು ವರ್ಷಗಳ ಕಾಲದಲ್ಲಿ ಮನುಕುಲ ಕಾಯಿಲೆಯೊಂದರಿಂದ ವೇದನೆಗೊಳಗಾಗಿದೆ. ಅದು ಹೆಚ್ಚು ಹೆಚ್ಚಾಗಿ ಪ್ರಸರಿಸುತ್ತಿರುವ ಹಾಗೆ ತೋರಿಬರುತ್ತದೆ, ನಮ್ಮ ಕಾಲಗಳಲ್ಲಿ ಅದು ಪರಾಕಾಷ್ಠೆ ತಲುಪಿದೆ, ಅದನ್ನು ನಾವು "ಪ್ರಯೋಜನ ತತ್ವ" ಎಂದು ಕರೆಯಬಹುದು. ಪ್ರತ್ಯೇಕವಾಗಿ ಈ ದೃಷ್ಟಿಕೋನದಿಂದ ಜನರನ್ನು ಹಾಗೂ ವಿಷಯಗಳನ್ನು, ಪರಿಸ್ಥಿತಿಗಳನ್ನು ಹಾಗೂ ಚಟುವಟಿಕೆಗಳನ್ನು ನೋಡಲಾಗುತ್ತಿದೆ ಹಾಗೂ ಬೆಲೆ ಕಟ್ಟಲಾಗುತ್ತಿದೆ ಎಂದು ತೋರಿಬರುತ್ತದೆ. ಉಪಯೋಗಕ್ಕೆ ಬಾರದ ಯಾವ ವಸ್ತುವಿಗೂ ಮೌಲ್ಯವಿರುವುದಿಲ್ಲ. ನಿಶ್ಚಿತವಾಗಿ ಉಪಯೋಗಕ್ಕೆ ಬರುವ ಏನೋ ಒಂದು, ಉಪಯೋಗಕ್ಕೆ ಬಾರದೆ ಇರುವುದಕ್ಕಿಂತ ಹೆಚ್ಚು ಒಳ್ಳೆಯದು. ಆದರೆ ಮೊದಲು ನಾವು ಯಾವುದು ಯಾರಿಗೆ, ಯಾವುದಕ್ಕೆ, ಯಾವುದರ ಸಲುವಾಗಿ ಉಪಯುಕ್ತವಾದುದು ಎಂಬುದನ್ನು ಒಪ್ಪಿಕೊಳ್ಳಬೇಕು.

ಏಕೆಂದರೆ ತಮ್ಮನ್ನು ಸುಸಂಸ್ಕೃತರು ಎಂದು ಪರಿಗಣಿಸುವ ಜನರು ಯಾವುದು ಹಣವನ್ನು ಆಕರ್ಷಿಸುತ್ತದೆಯೋ, ಸಂಪಾದಿಸುತ್ತದೆಯೋ ಇಲ್ಲವೆ ಉತ್ಪಾದಿಸುತ್ತದೆಯೋ ಅಂತಹದನ್ನು ಉಪಯುಕ್ತ ಎಂದು ವರ್ಣಿಸುತ್ತಾರೆ. ಪ್ರತಿಯೊಂದನ್ನು ಆರ್ಥಿಕ ದೃಷ್ಟಿಕೋನದಿಂದ ತೀರ್ಮಾನಿಸಲಾಗುತ್ತದೆ, ಅದಕ್ಕೆ ಬೆಲೆ ಕಟ್ಟಲಾಗುತ್ತದೆ. ಅದನ್ನೇ ನಾನು 'ಪ್ರಯೋಜನ ತತ್ವ' ಎಂದು ಕರೆಯುತ್ತೇನೆ. ಈ ಕಾಯಿಲೆ ಬಹಳ ಸಾಸಂರ್ಗಿಕವಾದದ್ದು, ಏಕೆಂದರೆ ಮಕ್ಕಳೂ ಕೂಡ ಅದರಿಂದ ಪ್ರತಿರಕ್ಷಿತರಾಗಿರುವುದಿಲ್ಲ, ಸೌಂದರ್ಯ, ಶ್ರೇಷ್ಠತೆ ಹಾಗೂ ಪರಿಪೂರ್ಣತೆ ಕುರಿತು ಕನಸು ಕಾಣಬೇಕಾದ ವಯಸ್ಸಿನಲ್ಲಿ ಮಕ್ಕಳಿಗೆ ಆ ಕನಸುಗಳು ಸಾಧಾರಣ ವ್ಯವಹಾರ ಜ್ಞಾನಕ್ಕೆ ಬಹಳ ಭವ್ಯವಾದವುಗಳು ಎನಿಸಬಹುದು, ಆದರೆ ಈ ಮಬ್ಬು ಮಕ್ಕಳಿಗೆ ಒಳ್ಳೆಯ ಭಾವನೆಗಿಂತ ಹೆಚ್ಚು ಶ್ರೇಷ್ಠವಾಗಿರುತ್ತದೆ, ಮಕ್ಕಳು ಈಗ ಹಣವನ್ನು ಕುರಿತು ಕನಸು ಕಾಣುತ್ತಾರೆ, ಅದನ್ನು ಹೇಗೆ ಗಳಿಸಬೇಕೆಂದು ಚಿಂತೆಗೊಳಗಾಗಿರುತ್ತಾರೆ.

ಹಾಗಾಗಿ ತಮ್ಮ ಅಭ್ಯಾಸ ಕುರಿತು ಯೋಚಿಸತೊಡಗಿದಾಗ, ಎಲ್ಲದಕ್ಕಿಂತಲೂ ತಮಗೆ ಯಾವುದು ಹೆಚ್ಚು ಉಪಯುಕ್ತವಾಗಬಹುದು, ಅದರಿಂದಾಗಿ ನಂತರದ ದಿನಗಳಲ್ಲಿ, ಅವರು ಬೆಳೆದು ದೊಡ್ಡವರಾದಾಗ ಬಹಳಷ್ಟು ಹಣವನ್ನು ಹೇಗೆ ಗಳಿಸಬಹುದು ಎಂಬುದನ್ನು ಕುರಿತು ಯೋಚಿಸುತ್ತಾರೆ. ಅವರಿಗೆ ಪರೀಕ್ಷೆಗಳನ್ನು ಯಶಸ್ವಿಯಾದ ರೀತಿಯಲ್ಲಿ ಪಾಸಾಗುವುದಕ್ಕೆ ತಯಾರಿ ಮಾಡಿಕೊಳ್ಳುವುದು ಅತ್ಯಂತ ಮಹತ್ವದ ವಿಷಯವಾಗಿರುತ್ತದೆ, ಅದರಿಂದಾಗಿ ದೊರೆತ ಡಿಪ್ಲೋಮಾ, ಪ್ರಮಾಣಪತ್ರ ಹಾಗೂ ಪದವಿ ಸೂಚಕಗಳೊಂದಿಗೆ ಒಳ್ಳೆಯ ಸ್ಥಾನಮಾನಗಳನ್ನು ಕಂಡುಕೊಳ್ಳಬಹುದು, ಬಹಳಷ್ಟು ಹಣ ಗಳಿಸಬಹುದು.

ಅಭ್ಯಾಸ ಕುರಿತು ಅವರಿಗೆ ಬೇರೆ ಯಾವ ಉದ್ದೇಶವೂ ಇರುವುದಿಲ್ಲ, ಆಸಕ್ತಿಯೂ ಇರುವುದಿಲ್ಲ.

**CWM, 12/351** **– ಶ್ರೀಮಾತೆ**

*

ಜ್ಞಾನ ದೊರಕಿಸುವುದಕ್ಕಾಗಿ ಕಲಿಯುವುದು, ಪ್ರಕೃತಿಯ ಹಾಗೂ ಜೀವನದ ರಹಸ್ಯಗಳನ್ನು ತಿಳಿದುಕೊಳ್ಳಲು ಅಭ್ಯಾಸ ಮಾಡುವುದು, ಪ್ರಜ್ಞೆಯಲ್ಲಿ ಬೆಳೆಯಲು ಮನುಷ್ಯ ತನಗೇ ಶಿಕ್ಷಣಕೊಡುವುದು, ತನ್ನ ಯಜಮಾನನಾಗುವುದಕ್ಕೆ ತನ್ನನ್ನು ಶಿಸ್ತಿಗೊಳಪಡಿಸುವುದು, ತನ್ನ ದೌರ್ಬಲ್ಯ, ಅಸಮರ್ಥತೆಗಳು ಹಾಗೂ ಅಜ್ಞಾನ ಇವುಗಳ ಮೇಲೆ ಜಯಸಾಧಿಸುವುದು, ಹೆಚ್ಚು ಗೌರವಾನ್ವಿತವಾದ ಹಾಗೂ ವಿಶಾಲವಾದ, ಹೆಚ್ಚು ಉದಾರವಾದ ಹಾಗೂ ಹೆಚ್ಚು ಸತ್ಯವಾದ ಗುರಿಯತ್ತ ಜೀವನದಲ್ಲಿ ಮುಂದುವರಿಯಲು ತನ್ನನ್ನು ತಯಾರು ಮಾಡಿಕೊಳ್ಳುವುದು– ಇವೆಲ್ಲವುಗಳಿಗೆ ಅವರು ಕ್ವಚಿತ್ತಾಗಿ ಯೋಚನೆಗೆ ಅನುವು ಮಾಡಿಕೊಡುತ್ತಾರೆ ಮತ್ತು ಅದನ್ನೆಲ್ಲ ಬಹಳ ಆದರ್ಶ ಸ್ಥಿತಿ (utopian)ಯದು ಎಂದು ಪರಿಗಣಿಸುತ್ತಾರೆ.

ಈ ರೋಗದ ಸೊಂಕಿಗೊಳಗಾದ ಮಕ್ಕಳಿಗೆ ಆಶ್ರಮದ ಶಿಕ್ಷಣ ಕೇಂದ್ರದಲ್ಲಿ ಪ್ರವೇಶ ದೊರಕಲಾರದು. ಅದು ಅವರಿಗೆ ಸ್ಪಷ್ಟವಾಗುವಂತೆ ಮಾಡುವುದಕ್ಕಾಗಿ ನಾವು ಅವರನ್ನು ಯಾವುದೇ ಪರೀಕ್ಷೆಗಾಗಿ ಇಲ್ಲವೆ ಸ್ಪರ್ಧೆಗಾಗಿ ತಯಾರು ಮಾಡುವುದಿಲ್ಲ, ಬಾಹ್ಯ ಜಗತ್ತಿನಲ್ಲಿ ಉಪಯುಕ್ತವಾಗಬಲ್ಲ ಯಾವುದೇ ಡಿಪ್ಲೋಮಾ ಇಲ್ಲವೆ ಪದವಿ ಸೂಚಕಗಳನ್ನು ಕೊಡುವುದಿಲ್ಲ!

ಉಚ್ಚತರ ಹಾಗೂ ಹೆಚ್ಚು ಒಳ್ಳೆಯ ಜೀವನಕ್ಕಾಗಿ ಅಭೀಪ್ಸೆಯುಳ್ಳವರು, ಜ್ಞಾನ ಹಾಗೂ ಪರಿಪೂರ್ಣತೆಗಾಗಿ ದಾಹವುಳ್ಳವರು, ಹೆಚ್ಚು ಇಡಿಯಾಗಿ ನಿಜವಾದ ಭವಿಷ್ಯತ್ತಿನತ್ತ ಆತುರದಿಂದ ಮುಂದೆ ನೋಡುವವರು ಇಂತಹ ಮಕ್ಕಳು ಮಾತ್ರ ಇಲ್ಲಿರಲೆಂದು ನಾವು ಬಯಸುತ್ತೇವೆ.

ಉಳಿದೆಲ್ಲರಿಗೆ ಜಗತ್ತಿನಲ್ಲಿ ಬೇಕಾದಷ್ಟು ಸ್ಥಾನವಿದೆ.

**CWM, 12/351–52** **– ಶ್ರೀಮಾತೆ**

*

**ಶಿಕ್ಷಣ ಆಧಾರ ಕಟ್ಟನ್ನು ಒದಗಿಸುತ್ತದೆ**

ನೀನು ವ್ಯಾಯಾಮ ಮಾಡಲೆಂದು ಶಾಲೆಗೆ ಕಳಿಸಲಾಗುತ್ತಿದೆ, ಅದರಿಂದಾಗಿ ರೇಗುವ ನಿನ್ನನ್ನು ನೋಡಿ ಸಂತೋಷವಾಗುತ್ತದೆ ಎಂದು ಯೋಚಿಸುವೆಯಾ? ಓಹ್; ಇಲ್ಲ! ಏಕೆಂದರೆ ನೀನು ಒಂದು ಆಧಾರ ಕಟ್ಟನ್ನು ಹೊಂದುವುದಕ್ಕೆ ಅದು ಅತ್ಯಗತ್ಯದ್ದಾಗಿರುತ್ತದೆ, ಅದರಲ್ಲಿ ನಿನ್ನನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬುದನ್ನು ಕಲಿಯಬಲ್ಲೆ. ಒಂದು ಮೂಲೆಯಲ್ಲಿ ವ್ಯಕ್ತೀಕರಣಗೊಳಿಸಿಕೊಳ್ಳುವ, ಇಡಿಯಾದ ರೂಪ ತಾಳುವಿಕೆಯ ನಿನ್ನ ಕಾರ್ಯವನ್ನು ನೀನೇ ಸ್ವತಃ ಕೈಕೊಂಡಿದ್ದರೆ ನಿನ್ನಿಂದ ಬೇರೆ ಏನನ್ನೂ ಕೇಳಲಾಗುವುದಿಲ್ಲ. ಆದರೆ ನೀನು ಅದನ್ನು ಮಾಡುತ್ತಿಲ್ಲ, ಮಾಡುವುದಿಲ್ಲ, ಅದನ್ನು ಮಾಡುವ ಒಂದೂ ಮಗುವಿರುವುದಿಲ್ಲ, ಅದನ್ನು ಹೇಗೆ ಮಾಡಬೇಕು, ಎಲ್ಲಿಂದ ಪ್ರಾರಂಭಿಸಬೇಕು ಎಂಬುದನ್ನು ಕೂಡ ತಿಳಿದು–ಕೊಂಡಿರುವುದಿಲ್ಲ, ಹೇಗೆ ಜೀವಿಸಬೇಕು ಎಂದು ಮಗುವಿಗೆ ಕಲಿಸಿಕೊಡದಿದ್ದರೆ ಅದು ಜೀವಿಸುವುದಿಲ್ಲ. ಏನನ್ನಾದರೂ ಹೇಗೆ ಕೈಕೊಳ್ಳಬೇಕು ಎಂಬುದನ್ನು ತಿಳಿದುಕೊಂಡಿರುವುದಿಲ್ಲ. ಜುಗುಪ್ಸೆ ತರಿಸುವ ವಿವರಗಳನ್ನು ಕುರಿತು ನಾನು ಮಾತನಾಡಲು ಬಯಸುವುದಿಲ್ಲ, ಆದರೆ ಅತ್ಯಂತ ಪ್ರಾಥಮಿಕ ಕಾರ್ಯಗಳನ್ನೂ ಕೂಡ, ಅವನಿಗೆ ಅವುಗಳನ್ನು ಕಲಿಸಿಕೊಡದಿದ್ದರೆ ಅವನು ಅವುಗಳನ್ನು ಸರಿಯಾಗಿ ಮಾಡುವುದಿಲ್ಲ. ಹಾಗಾಗಿ ಹೆಜ್ಜೆಯ ನಂತರ ಹೆಜ್ಜೆಯನ್ನು ಇರಿಸುತ್ತ ಹೋಗಬೇಕು. ಹೇಳುತ್ತಿರುವುದು ಏನೆಂದರೆ ವ್ಯಕ್ತೀಕರಣವನ್ನು ರೂಪಿಸುವುದಕ್ಕೆ ಅವಶ್ಯವಾದ ಇಡೀ ಅನುಭವದ ಮೂಲಕ ಪ್ರತಿಯೊಬ್ಬನೂ ಸಾಗಿ ಹೋಗಬೇಕಾಗಿದ್ದರೆ, ಅವನು ಜೀವಿಸುವುದನ್ನು ಪ್ರಾರಂಭಿಸುವ ಮೊದಲೇ

ಮರಣ ಹೊಂದುತ್ತಿದ್ದ. ಶತಮಾನಗಳಾದ್ಯಂತ ಸಂಗ್ರಹವಾದ ಅನುಭವ ಪಡೆದವರ ಕೊಡುಗೆ ಹೀಗಿದೆ; ಅವರು ಹೇಳುತ್ತಾರೆ: "ಸರಿ, ನೀನು ತೀವ್ರಗತಿಯಿಂದ ಸಾಗಿ ಹೋಗಲು ಬಯಸುತ್ತಿದ್ದರೆ, ಕೆಲವೇ ವರ್ಷಗಳಲ್ಲಿ ಶತಮಾನಗಳಾದ್ಯಂತ ಕಲಿತುಕೊಂಡದ್ದನ್ನು ತಿಳಿದುಕೊಳ್ಳಲು ಇದನ್ನು ಮಾಡು" ಓದಿಕೋ, ತಿಳಿದುಕೋ, ಅಭ್ಯಾಸ ಮಾಡು ಮತ್ತು ನಂತರ ಪ್ರಾಪಂಚಿಕ ಜೀವನದಲ್ಲಿ ಇದನ್ನು ಈ ರೀತಿಯಲ್ಲಿ ಮಾಡಲು, ಅದನ್ನು ಆ ರೀತಿಯಲ್ಲಿ ಮಾಡಲು ಮತ್ತೆ ಇದನ್ನು ಈ ರೀತಿಯಲ್ಲಿ ಮಾಡಲು (ಸಂಜ್ಞೆ) ನಿನಗೆ ಕಲಿಸಿಕೊಡಲಾಗುವುದು. ಒಮ್ಮೆ ನೀನು ಸ್ವಲ್ಪ ಕಲಿತುಕೊಂಡರೆ, ನಿನ್ನಲ್ಲಿ ಪ್ರತಿಭೆ ಇದ್ದರೆ, ನಿನ್ನದೇ ವಿಧಾನವನ್ನು ಕಂಡುಕೊಳ್ಳುವಿ. ಆದರೆ ಮೊದಲು ಮನುಷ್ಯ ತನ್ನದೇ ಕಾಲುಗಳ ಮೇಲೆ ನಿಂತುಕೊಳ್ಳಬೇಕು ಮತ್ತು ಹೇಗೆ ನಡೆಯ–ಬೇಕೆಂಬುದನ್ನು ತಿಳಿದುಕೊಳ್ಳಬೇಕು. ಅದನ್ನು ಏಕಾಕಿಯಾಗಿ ಕಲಿತುಕೊಳ್ಳುವುದು ಬಹಳ ಕಠಿಣವಾದದ್ದು. ಅದು ಪ್ರತಿಯೊಬ್ಬನಿಗೆ ಹಾಗಿರುತ್ತದೆ. ಮನುಷ್ಯ ತನ್ನನ್ನೇ ರೂಪಿಸಿಕೊಳ್ಳಬೇಕು. ಹಾಗಾಗಿ ಮನುಷ್ಯನಿಗೆ ಶಿಕ್ಷಣ ಅವಶ್ಯವಾಗಿರುತ್ತದೆ.

**CWM, 6/201** **– ಶ್ರೀಮಾತೆ**

*

**ಶತಮಾನಗಳ ಕಾಲದ ಅಭೀಪ್ಸೆ ನಮ್ಮನ್ನು ಇಲ್ಲಿಗೆ ತಂದಿದೆ**

**ಪ್ರಶ್ನೆ:** *ನಮ್ಮಲ್ಲಿರುವ ಏನು ನಾವು ಇಲ್ಲಿಗೆ ಬರುವಂತೆ ಮಾಡಿತು?*

**ಶ್ರೀಮಾತೆ:** ಅದಕ್ಕೆ ಉತ್ತರ ಅಂತರಂಗದಲ್ಲಿದೆ, ನೀವು ಸಾಕಷ್ಟು ಆಳದಲ್ಲಿ ಇಳಿದು ಹೋದರೆ ನೀವು ಬಹಳ ಸ್ಪಷ್ಟ ಉತ್ತರ ಕಂಡುಕೊಳ್ಳುತ್ತೀರಿ. (ಮೌನ), ಅದು ಬಹಳ ಸ್ವಾರಸ್ಯಕರವಾದ ಉತ್ತರವಾಗಿರುತ್ತದೆ. ಎಲ್ಲ ಬಾಹ್ಯ ವಿಷಯಗಳಿಂದ, ಸಾಕಷ್ಟು ಸಂಪೂರ್ಣ ನಿಶ್ಚಲ ನೀರವತೆಯಿಂದ ನೀವು ಸಾಕಷ್ಟು ಆಳದಲ್ಲಿ ಇಳಿದು ಹೋದರೆ ನಿಮ್ಮಂತರಂಗದಲ್ಲಿ ಇಳಿದು ಹೋದರೆ ನಾನು ಅನೇಕ ಸಲ ಪ್ರಸ್ತಾಪಿಸಿದ ಜ್ವಾಲೆಯನ್ನು ಕಂಡುಕೊಳ್ಳುತ್ತೀರಿ ಮತ್ತು ಈ ಜ್ವಾಲೆಯಲ್ಲಿ ನಿಮ್ಮ ಅದೃಷ್ಟವನ್ನು ನೋಡುತ್ತೀರಿ. ಶತಮಾನಗಳ ಕಾಲದ ಅಭೀಪ್ಸೆಯನ್ನು ನೋಡುವಿರಿ, ಅದು ಕ್ರಮೇಣ ಏಕಾಗ್ರಗೊಂಡಿದೆ, ಅದರಿಂದಾಗಿ ಅಸಂಖ್ಯಾತ ಜನ್ಮಗಳ ಮೂಲಕ ಸಿದ್ಧಿಯ ಶ್ರೇಷ್ಠ ದಿನದತ್ತ ನಿಮ್ಮನ್ನು ಕರೆದೊಯ್ಯುತ್ತದೆ– ಸಾವಿರಾರು ವರ್ಷಗಳಾದ್ಯಂತ ಕೈಕೊಂಡ ತಯಾರು ಅದಾಗಿದೆ, ಅದು ತನ್ನ ಪರಾಕಾಷ್ಠೆ ತಲುಪುತ್ತಿದೆ.

ಮತ್ತು ಇದನ್ನು ಕಂಡುಕೊಳ್ಳಲು ನೀವು ಬಹಳ ಆಳದವರೆಗೆ ಸಾಗಿ ಹೋದಾಗ ನಿಮ್ಮ ಎಲ್ಲ ಅಸಾಮರ್ಥ್ಯಗಳು, ಎಲ್ಲ ದೌರ್ಬಲ್ಯಗಳು, ನಿಮ್ಮಲ್ಲಿ ನಿರಾಕರಿಸುವ, ತಿಳಿದುಕೊಳ್ಳದೆ ಇರುವುದೆಲ್ಲವೂ– ಅದು ಸ್ವತಃ ನೀವಲ್ಲ, ಅದೊಂದು ಉಡುಪು ಎಂಬ ಭಾವನೆ ನಿಮಗೆ ಬರುತ್ತದೆ, ಅದು ಒಂದಾನೊಂದು ರೀತಿಯಲ್ಲಿ ಸೇವೆ ಸಲ್ಲಿಸುತ್ತದೆ ಮತ್ತು ಸದ್ಯದ ಸಮಯಕ್ಕೆ ನೀವು ಅದನ್ನು ಧರಿಸಿರುತ್ತೀರಿ. ನಿಮಗೆ ಕೊಡಲಾದ ಸದವಕಾಶದಿಂದ ನೀವು ಕೈಕೊಳ್ಳಬೇಕೆಂದು ಬಯಸಿದ್ದನ್ನು ಕೈಕೊಳ್ಳಲು ನಿಜವಾಗಿ ಪೂರ್ತಿ ಲಾಭ ಪಡೆಯಲು ಸಮರ್ಥರಾಗುವುದಕ್ಕಾಗಿ, ಇಷ್ಟು ದೀರ್ಘಕಾಲ ಏನನ್ನು ಕೈಕೊಳ್ಳಬೇಕೆಂಬುದರ ಬಗ್ಗೆ ಅಭೀಪ್ಸೆಪಟ್ಟದ್ದನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ನೀವು ಕ್ರಮೇಣ ಪ್ರಕಾಶವನ್ನು, ಪ್ರಜ್ಞೆಯನ್ನು, ಸತ್ಯವನ್ನು ಬಾಹ್ಯ ಉಡುಪಿನ ಮಬ್ಬಾದ ಅಂಶಗಳಲ್ಲಿ ತರಬೇಕು, ಅದರಿಂದಾಗಿ ನೀವು ಇಲ್ಲಿ ಏಕೆ ಇರುವಿರಿ ಎಂಬುದನ್ನು ಸಮಗ್ರವಾಗಿ ತಿಳಿದುಕೊಳ್ಳುವಿರಿ. ಅದನ್ನು ನೀವು ಅರ್ಥಮಾಡಿಕೊಳ್ಳಬಹುದಷ್ಟೇ ಅಲ್ಲ, ನೀವದನ್ನು ಕೈಕೊಳ್ಳಲು ಶಕ್ತರಾಗಬಹುದು. ಇದರಲ್ಲಲ್ಲ. (ಶ್ರೀಮಾತೆಯವರು ತಮ್ಮ ತೋಳಿನ ಮುಂಭಾಗದಲ್ಲಿರುವ ಚರ್ಮವನ್ನು ತೋರಿಸುತ್ತಾರೆ ಆದರೆ ನಿಮ್ಮ ನಿಜವಾದ ಆತ್ಮದಲ್ಲಿ ಶಕ್ತರಾಗಬಹುದು).

ಶತಮಾನಗಳ ಕಾಲದಿಂದ ಅದು ಈ ಸದವಕಾಶಕ್ಕಾಗಿ ಕಾದುಕೊಂಡು ಬಂದಿದೆ.

ಮತ್ತು ಆಗ ನೀವು ಕೂಡಲೆ ಅದ್ಭುತವಾದುದರಲ್ಲಿ ಪ್ರವೇಶಿಸುತ್ತೀರಿ. ಅದು ಎಷ್ಟರ ಮಟ್ಟಿಗೆ ಅಸಾಧಾರಣವಾಗಿರುತ್ತದೆಂಬುದನ್ನು ನೋಡುವಿರಿ. ದೀರ್ಘ–ಕಾಲದಿಂದ ಭರವಸೆ ಇಟ್ಟುಕೊಂಡಿದ್ದ ವಿಷಯಗಳು, ಎಷ್ಟೊಂದು ಪ್ರಾರ್ಥನೆ ಮಾಡಿದ್ದ ವಿಷಯಗಳು, ಕೈಕೊಂಡಿದ್ದ ಎಷ್ಟೊಂದು ಪ್ರಯತ್ನಗಳು ಇವುಗಳಿಂದಾಗಿ ಹಠಾತ್ತನೆ ಅವುಗಳನ್ನು ಸಿದ್ಧಿಸಿಕೊಳ್ಳುವ ಒಂದು ಕ್ಷಣ ಬರುತ್ತದೆ. ಮನುಷ್ಯ ಆ ಸದವಕಾಶದಿಂದ ತಪ್ಪಿಸಿಕೊಳ್ಳಬಾರದು.

**CWM, 6/271–72** **– ಶ್ರೀಮಾತೆ**

*

**ವಾತಾವರಣದ ಸಾಮರ್ಥ್ಯ**

ಬಾಲ್ಯದಿಂದ ಇಲ್ಲಿ ಬೆಳೆದುಬಂದ ಯಾರಾದರೂ ಮತ್ತು ಇಲ್ಲಿಯ ವಿಷಯಗಳನ್ನು ಅವಚೇತನದಿಂದ ಭಾವನೆಗೆ ತಂದುಕೊಂಡವರು ಬಹಳ ತರುಣರಾದವರು, ಪ್ರತಿಯೊಂದೆಲ್ಲ ಇದ್ದಾಗಲೂ– ತಮ್ಮ ಮೇಲೆ ಗುರುತೊಂದನ್ನು ಉಳಿಸಿಕೊಂಡಿರುತ್ತಾರೆ; ಅದು ಯಾವ ಪರಿಣಾಮ ಬೀರದೆ ಹೋಗಲಾರದು ಎಂದು ನಾನು ನಿಖರವಾಗಿ ನಂಬುತ್ತೇನೆ. ಬಾಹ್ಯದಿಂದ ಬಂದ ಮಕ್ಕಳೊಡನೆ ಇಲ್ಲಿ ಪೋಷಿಸಿಕೊಂಡು ಬಂದ ಮಕ್ಕಳನ್ನು ನೋಡಿದಾಗ ಅಲ್ಲಿ ನಿಜವಾಗಿ ದೊಡ್ಡ ವ್ಯತ್ಯಾಸವಿರುತ್ತದೆ (ಬಹುಶಃ ಬಾಹ್ಯದಲ್ಲಿ ಯಾಂತ್ರಿಕವಾಗಿ ತರಬೇತು ಪಡೆದ ಭಾಗದಲ್ಲಲ್ಲ, ಆದರೆ ಅರ್ಥಮಾಡಿಕೊಳ್ಳುವಿಕೆಯ, ಬುದ್ಧಿಮತ್ತೆಯ, ಆಂತರಿಕ ಎಚ್ಚತ್ತುಕೊಳ್ಳುವ ಭಾಗದಲ್ಲಿ) ಗಣನೀಯ ವ್ಯತ್ಯಾಸವಿರುತ್ತದೆ. ಹೊಸದಾಗಿ ಬಂದವರು ಅದೇ ಮಟ್ಟಕ್ಕೆ ಬರಲು ಸ್ವಲ್ಪ ಸಮಯ ಬೇಕಾಗುತ್ತದೆ. ಅದು ಪುಸ್ತಕಗಳಾಚೆಗಿರುವ ಏನೋ ಒಂದು, ನೀವು ಅದನ್ನು ನೋಡುತ್ತಿಲ್ಲವೆ? ಪರಿಶುದ್ಧ ವಾತಾವರಣದಲ್ಲಿ ಜೀವಿಸುವುದು, ಉಸಿರಾಡಿಸಿದ ಪ್ರತಿಯೊಂದು ಸಲ ಪುಪ್ಪುಸಗಳನ್ನು ಶುದ್ಧ ಗಾಳಿಯಿಂದ ತುಂಬಿಕೊಳ್ಳುವುದು ಮತ್ತು ಸೋಂಕು ತಗಲಿದ ವಾತಾವರಣದಲ್ಲಿ ಜೀವಿಸುವುದು, ಉಸಿರಾಡಿಸಿದ ಪ್ರತಿಸಲ ವಿಷಪೂರಿತವಾದದ್ದನ್ನು ಒಳಗೆಳೆದುಕೊಳ್ಳುವುದು ಇವುಗಳ ನಡುವಿನ ವ್ಯತ್ಯಾಸದಂತಿರುತ್ತದೆ. ಪ್ರಜ್ಞೆಯ ದೃಷ್ಟಿಕೋನದಿಂದ ಅದೇ ಗೋಚರ ಸಂಗತಿ ಮತ್ತು ಅದು ಸಾರಭೂತವಾಗಿ ಅತ್ಯಂತ ಮಹತ್ವವುಳ್ಳ ವಿಷಯ, ಇದೇ ಮೇಲ್ಮೈ ಪ್ರಜ್ಞೆಯಿಂದ ತಪ್ಪಿಸಿಕೊಳ್ಳುವಂತಹದು. ಪೂರ್ತಿ ಪ್ರಕಾಶವಿರುವ, ಅಭೀಪ್ಸೆಯಿರುವ, ನಿಜವಾದ ತಿಳಿವಳಿಕೆ ಇರುವ, ಸಾರಭೂತ ಪರಿಶುದ್ಧತೆ ಇರುವ ಸಮುದ್ರದಲ್ಲಿ ಮುಳುಗಿ ಹೋಗಿರುತ್ತೀರಿ, ಅದು ನಿಮಗೆ ಬೇಕಾಗಿರಲಿ, ಇಲ್ಲವೆ ಬೇಡವಾಗಿರಲಿ, ತಮ್ಮನ್ನು ಬಾಹ್ಯ–ಪ್ರಜ್ಞೆಯಲ್ಲಿ ಮುಚ್ಚಿಹಾಕಿಕೊಂಡವರೂ ಕೂಡ, ಸರಿ ವ್ಯರ್ಥವಾಗಿ ನಿದ್ರೆ ಮಾಡಲಾರರು.

ಇಲ್ಲಿ ಬಹಳ ಗಣನೀಯವಾದ ಕ್ರಿಯೆಯೊಂದು ನಿದ್ರಾಸಮಯದಲ್ಲಿರುತ್ತದೆ. ಹಾಗಾಗಿ ಅದರ ಪರಿಣಾಮವೊಂದಿರುತ್ತದೆ, ಅದನ್ನು ನೋಡಬಹುದು. ಒಟ್ಟಿನಲ್ಲಿ ಹೊರಗಿನಿಂದ ಬಂದಿದ್ದ ಜನರನ್ನು ನಾನು ನೋಡಿದ್ದೇನೆ, ಅವರಿಗೆ ಏನೂ ತಿಳಿದಿರುವುದಿಲ್ಲ (ಅವರು ಕೇವಲ ತಮ್ಮ ಮಕ್ಕಳಲ್ಲಿ ಆಸಕ್ತಿಯನ್ನಿರಿಸುತ್ತ

ಬಂದಿದ್ದಾರೆ) ಸರಿ ಈ ಜನರ, ಭೇಟಿಗಾರರ, ಕೇವಲ ಹಾದುಹೋಗುವ ಎಲ್ಲರಿಗೂ ಆದ ಪರಿಣಾಮವೆಂದರೆ ಅವರು ದಿಗ್ಭ್ರಮೆಗೊಳಗಾಗಿದ್ದರು: "ಆದರೆ ನಾವು ಬೇರೆಡೆ ಎಲ್ಲಿಯೂ ನೋಡಿರದ ಮಕ್ಕಳು ನಿಮ್ಮಲ್ಲಿದ್ದಾರೆ!" ನಮ್ಮನ್ನು ಕುರಿತು ಹೇಳುವುದಾದರೆ ನಾವು ಅದನ್ನು ರೂಢಿಸಿಕೊಂಡಿದ್ದೇವೆ. ಅವರು ಸ್ವಯಂ ಪ್ರೇರಣೆಯಿಂದ ಸ್ವಾಭಾವಿಕವಾಗಿ ಆ ರೀತಿಯವರಾಗಿದ್ದಾರೆ. ಆದರೆ ಅಲ್ಲಿ ಪ್ರಜ್ಞೆಯಲ್ಲಿ ಎಚ್ಚತ್ತುಕೊಳ್ಳುವಿಕೆಯಿದೆ, ಒಂದು ಬಗೆಯ ಆಂತರಿಕ ಪ್ರತಿಸ್ಪಂದನವಿದೆ, ಹಾಗೂ ಅರಳಿಕೊಳ್ಳುತ್ತಿರುವ ಭಾವನೆಯಿದೆ, ಬೇರೆಡೆ ಎಲ್ಲಿಯೂ ಕಂಡುಬರದ ಆಂತರಿಕ ಸ್ವಾತಂತ್ರ್ಯವಿದೆ. ಇಲ್ಲಿಗೆ ಬರುವ ಕೆಲವು ಮಕ್ಕಳು ವಿಪರೀತವಾಗಿ ಸರಿಯಾಗಿ ಬೆಳೆದುಕೊಂಡು ಬಂದಿರುತ್ತಾರೆ. ಎಷ್ಟೊಂದು ವಿನಯ, ಸಂಭಾವಿತರಾಗಿರುವಿಕೆ ಅವರಲ್ಲಿರುತ್ತದೆ. ಅವರು ಆ ರೀತಿಯಲ್ಲಿ ನಿಮಗೆ ಉತ್ತರ ಕೊಡುತ್ತಾರೆ. ಹಾಗಾಗಿ... ಮತ್ತು ಮನುಷ್ಯ ಅವರು ಚಿಕ್ಕ ಗೊಂಬೆಗಳ ಹಾಗಿರುವ ಭಾವನೆ ತಂದುಕೊಳ್ಳುತ್ತಾನೆ, ಅರ್ಧ ಜೀವಂತವಿದ್ದವರು, ಅವರನ್ನು ನಯನಾಜೂಕಿನವರಿರುವಂತೆ, ಕೂದಲನ್ನು ಸರಿಯಾಗಿ ಬಾಚಿಕೊಂಡಿರುವಂತೆ, ಲಕ್ಷಣವಾಗಿ ಕಾಣುವಂತೆ ಸಿಂಗರಿಸಿದವರಾಗಿರುವಂತೆ ಮಾಡಲಾಗಿರುತ್ತದೆ, ಆದರೆ ಅಂತರಂಗದಲ್ಲಿ ಯಾವ ಸ್ಪಂದನವೂ ಇರುವುದಿಲ್ಲ. ಇಲ್ಲಿ ನಾವು ಅಸಾಮಾನ್ಯವಾಗಿ ವಿನಯವಂತನಾದ ಮಗುವೊಬ್ಬನ ಉದಾಹರಣೆಯನ್ನು ಕೊಡಬಲ್ಲೆವು ಎಂದು ಹೇಳಲಾರೆವು. ಜನರು ಅಸಂಸ್ಕೃತರು ಎಂದು ಕರೆಯುವ ರೀತಿಯಲ್ಲಿ ಹೆಚ್ಚಾಗಿ ಒಬ್ಬರು ಕಂಡುಬರಬಹುದು. ಆದರೆ ಅದರಲ್ಲಿಯೂ ಕೂಡ ಆ ಒಬ್ಬರು ಎಷ್ಟೊಂದು ಜೀವಂತವಾಗಿರುತ್ತಾರೆ. ಇಲ್ಲಿ ಕಂಪಿಸುವ ಪ್ರಜ್ಞೆಯ ಭಾವನೆಯನ್ನು ತಂದುಕೊಳ್ಳುತ್ತಾರೆ. ಅದು ಎಲ್ಲದಕ್ಕಿಂತಲೂ ಹೆಚ್ಚಾಗಿ ಅತ್ಯಂತ ಹೆಚ್ಚು ಮಹತ್ವದ್ದಾಗಿರುವ ಭಾಗ ಮತ್ತು ಇದನ್ನು ಕುರಿತು ಅವರು ಮಾತನಾಡುವುದಿಲ್ಲ, ಏಕೆಂದರೆ ಇವು ಕೈಕೊಳ್ಳಬೇಕಾದ ಸಂಗತಿಗಳು– ಇವತ್ತಿನಂತಹ ಸಂದರ್ಭ ಒದಗಿಬಂದಾಗ ನಾನು ಅದರ ಬಗ್ಗೆ ನಿಮ್ಮ ಬಳಿ ಮಾತನಾಡುತ್ತೇನೆ. ಎಷ್ಟೋ ವರ್ಷಗಳ ಕಾಲದಿಂದ ನೀವು ಇಲ್ಲಿರುತ್ತ ಬಂದಿದ್ದೀರಿ ಮತ್ತು ಅಂತಹ ಸಂದರ್ಭ ನನಗೆ ಮೊದಲನೆಯ ಸಲ ಒದಗಿ ಬಂದಿತ್ತು.

**CWM, 5/16–17** **– ಶ್ರೀಮಾತೆ**

*

## ವಿದ್ಯಾರ್ಥಿಗಳ ಪ್ರಾರ್ಥನೆ

ವೀರೋಚಿತ ಯೋಧರಾಗಬೇಕೆಂದು ಬಯಸುವ ನಮ್ಮನ್ನು ನಾವು ಅದಾಗುವಂತೆ ಮಾಡು, ಭವಿಷ್ಯತ್ತಿನಲ್ಲಿ ಜನ್ಮತಾಳಲಿರುವ ಶ್ರೇಷ್ಠ ಸಮರದಲ್ಲಿ ಹಾಗೂ ತಾಳಿಕೊಳ್ಳಲು ಅರಸುತ್ತಿರುವ ಗತಕಾಲದ ವಿರುದ್ಧ ನಾವು ಯಶಸ್ವಿಯಾಗಿ ಹೋರಾಡುವಂತಾಗಲಿ, ಅದರಿಂದಾಗಿ ಹೊಸ ವಿಷಯಗಳು ಪ್ರಕಟವಾಗಬಹುದು ಮತ್ತು ನಾವು ಅವುಗಳನ್ನು ಸ್ವೀಕರಿಸಲು ತಯಾರಾಗಬಹುದು.

**CWM, 12/112** **– ಶ್ರೀಮಾತೆ**

*

## ಹೊಸ ಮಾರ್ಗ

### ಪ್ರತಿಯೊಂದನ್ನು ಹೊಸ ಮನೋಭಾವದಲ್ಲಿ ಕೈಕೊಳ್ಳುವುದು

**ಪ್ರಶ್ನೆ:** *ದೀರ್ಘ ಜಿಗಿತ ಮಾಡುವ ಪ್ರಯತ್ನದಲ್ಲಿ, ಉದಾಹರಣೆಗೆ ಮನುಷ್ಯ ಹೆಚ್ಚು ಹೆಚ್ಚು ದೂರ ಜಿಗಿತ ಮಾಡುತ್ತಾನೆ. ಅವನು ದೈವೀ ಕಾರ್ಯವನ್ನು ಹೇಗೆ ಮಾಡಬಲ್ಲನು?*

**ಶ್ರೀಮಾತೆ:** ನನ್ನನ್ನು ಕ್ಷಮಿಸಿರಿ. ಅದು ದೀರ್ಘ ಜಿಗಿತ ಮಾಡಿ ಪಡೆಯುವ ಸಂತೋಷದ ರೀತಿಯದಲ್ಲ. ದೇಹವನ್ನು ಅದು ಕೈಕೊಳ್ಳುವ ಕಾರ್ಯವಿಧಾನದಲ್ಲಿ ಹೆಚ್ಚು ಪರಿಪೂರ್ಣವಾಗುವಂತೆ ಮಾಡುವುದಿದೆ, ಅದರಿಂದಾಗಿ ದೈವೀ ಶಕ್ತಿಗಳನ್ನು ಸ್ವೀಕರಿಸುವುದಕ್ಕಾಗಿ ಹಾಗೂ ಪ್ರಕಟಗೊಳಿಸುವುದಕ್ಕಾಗಿ ಹೆಚ್ಚು ಯೋಗ್ಯವಾದ ಉಪಕರಣವಾಗುವಂತಾಗುವುದು. ಈ ಸ್ಥಾನದಲ್ಲಿ ಮನುಷ್ಯ ಕೈಕೊಳ್ಳುವ ಪ್ರತಿಯೊಂದನ್ನು ಈ ಮನೋಭಾವದಿಂದ ಏಕೆ ಮಾಡಬೇಕು? ಹಾಗಿರದಿದ್ದರೆ ನಿಮಗೆ ಕೊಟ್ಟ ಸದವಕಾಶಗಳಿಂದ, ಪರಿಸ್ಥಿತಿಗಳಿಂದ ನೀವು ಲಾಭ ಪಡೆಯಲಾರಿರಿ. ದೈವೀ ಪ್ರಜ್ಞೆ ಇಲ್ಲಿದೆ, ಅದು ಎಲ್ಲ ವಿಷಯಗಳಲ್ಲಿ ನುಗ್ಗುತ್ತಲಿದೆ ಮತ್ತು ಎಲ್ಲ ಚಲನೆಗಳಲ್ಲಿ ಪ್ರಕಟವಾಗಲು ಪ್ರಯತ್ನ ಮಾಡುತ್ತಲಿದೆ ಎಂದು ಹಿಂದೆ ಒಂದು ದಿನ ನಾನು ವಿವರಿಸಿ ಹೇಳಿದ್ದೆನಲ್ಲವೆ? ಆದರೆ ನೀವು ನಿಮ್ಮ ಬದಿಯಿಂದ ನೀವು ಮಾಡುತ್ತಿರುವ ಪ್ರಯತ್ನ, ಸಾಧಿಸುತ್ತಿರುವ ಪ್ರಗತಿ ಈ ದೈವೀ ಪ್ರಜ್ಞೆಯನ್ನು ಸ್ವೀಕರಿಸಲು ಹಾಗೂ ಪ್ರಕಟಿಸಲು ನಿಮ್ಮನ್ನು ಹೆಚ್ಚು ಸಮರ್ಥರನ್ನಾಗಿ ಮಾಡುವುದಕ್ಕಿದೆ ಎಂದು ನಿಮಗೆ ನೀವೇ ಹೇಳಿಕೊಂಡರೆ, ಕಾರ್ಯ ಹೆಚ್ಚು

ಒಳ್ಳೆಯದಾಗುವುದು ಹಾಗೂ ತೀವ್ರಗತಿಯದಾಗುವುದು. ನನಗೆ ಇದು ಬಹಳ ಪ್ರಾಥಮಿಕ ವಿಷಯ ಎಂದು ತೋರಿಬರುತ್ತದೆ, ಸತ್ಯ ಹೇಳುವುದಾದರೆ ಅದು ಬೇರೆ ರೀತಿಯದಾಗಬಹುದು ಎಂಬುದು ನನಗೆ ಆಶ್ಚರ್ಯವನ್ನುಂಟು ಮಾಡುತ್ತದೆ! ಏಕೆಂದರೆ ಅದು ಅದಾಗಿರದಿದ್ದರೆ ಆಶ್ರಮದಲ್ಲಿ ಅದು ಸಂಘಟಿತಕೊಂಡ ರೀತಿಯಲ್ಲಿ ನಿಮ್ಮ ಸಾನ್ನಿಧ್ಯ ಯಾವ ಅರ್ಥವನ್ನೂ ಹೊಂದಿರುತ್ತಿರಲಿಲ್ಲ. ಅದು ಯಾವ ಉಪಯೋಗಕ್ಕಾಗಿ ಇರುತ್ತಿತ್ತು? ಜಗತ್ತಿನಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಸಂಘಟಿತಗೊಂಡ ಅನೇಕ ವಿಶ್ವವಿದ್ಯಾಲಯಗಳು ಹಾಗೂ ಬಹಳಷ್ಟು ಶಾಲೆಗಳಿವೆ. ಆದರೆ ನೀವಿಲ್ಲಿದ್ದುದಾದರೆ ಅದು ಒಂದು ವಿಶಿಷ್ಟ ಕಾರಣಕ್ಕಾಗಿ! ಅದು ಏಕೆಂದರೆ ಬೇರೆಡೆ ಎಲ್ಲಿಯೂ ಕಂಡುಬರದ ಪ್ರಜ್ಞೆಯನ್ನು ಹಾಗೂ ಪ್ರಗತಿಯನ್ನು ಹೀರಿಕೊಳ್ಳುವ ಸಾಧ್ಯತೆ ಇಲ್ಲಿದೆ. ಅದನ್ನು ಸ್ವೀಕರಿಸಲು ನೀವು ನಿಮ್ಮನ್ನು ತಯಾರು ಮಾಡಿಕೊಳ್ಳದಿದ್ದರೆ, ಸರಿ, ನಿಮಗೆ ಕೊಡಲಾದ ಯೋಗಾಯೋಗವನ್ನು ಕಳೆದುಕೊಳ್ಳುತ್ತೀರಿ!

**CWM, 6/269** **– ಶ್ರೀಮಾತೆ**

*

## ನಮ್ಮ ಶಾಲೆಯ ಉದ್ದೇಶ

ನಮ್ಮ ಶಾಲೆಯ ಉದ್ದೇಶ ಯಾರಲ್ಲಿ ತಮ್ಮ ಜೀವನಕ್ಕೆ ನಿರ್ದೇಶನ ಕೊಡುವುದಕ್ಕಾಗಿ ಆವಶ್ಯಕತೆ ಸಾಕಷ್ಟು ಪ್ರಜ್ಞಾಪೂರ್ಣವಾಗಿದೆಯೋ ಅಂತಹರನ್ನು ಶೋಧಿಸುವುದಾಗಿದೆ ಹಾಗೂ ಅವರಿಗೆ ಉತ್ತೇಜನ ನೀಡುವುದಾಗಿದೆ ಎಂಬುದನ್ನು ತಿಳಿದುಕೊಂಡಿರಬೇಕು ಮತ್ತು ನಾವು ಅದನ್ನು ಮುಚ್ಚುಮರೆಯಿಲ್ಲದೆ ಹೇಳಲು ಹಿಂದುಮುಂದು ನೋಡಬಾರದು.

**CWM, 17/306** **– ಶ್ರೀಮಾತೆ**

*

### ಸಾಧ್ಯವಿದ್ದಷ್ಟು ಗರಿಷ್ಠವಾಗಿರುವ ಸ್ವಾತಂತ್ರ್ಯದ ತತ್ವ

**ಪ್ರಶ್ನೆ:** *ನಾವಿಲ್ಲಿರುವ ಹಾಗೂ ನಮಗೆಲ್ಲವೂ ಇರುವ ಕಾರಣದಿಂದಾಗಿ ಅದು ನಮಗೆ ಬಹಳ ಸ್ವಾಭಾವಿಕವಾದದ್ದೆನಿಸುತ್ತದೆ ಎಂದು ನೀವು ಹೇಳಿರುವಿರಿ. ಪ್ರಯತ್ನ ಕೂಡ ಸ್ವಾಭಾವಿಕವಾಗಿ ಏಕೆ ಬರುವುದಿಲ್ಲ?*

**ಶ್ರೀಮಾತೆ:** ಅದು ಏಕೆಂದರೆ ಸಾಮಾನ್ಯ ಮನುಷ್ಯನಲ್ಲಿ ಭೌತಿಕ ಸ್ವಭಾವ, ಶ್ರೀ ಅರವಿಂದರು ಬರೆದ ಹಾಗೆ, ಹೆಚ್ಚಾಗಿ ತಾಮಸಿಕವಾಗಿರುತ್ತದೆ, ಸ್ವಾಭಾವಿಕವಾಗಿ ಅದು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಆದರೆ ಪ್ರಾಣಿಕ ಪ್ರಯತ್ನವೊಂದನ್ನು ಮಾಡುತ್ತದೆ. ಸಾಮಾನ್ಯವಾಗಿ ಅದು ತನ್ನದೇ ತೃಪ್ತಿಗಾಗಿ ಪ್ರಯತ್ನ ಮಾಡುತ್ತದೆ. ಆದಾಗ್ಯೂ ಪ್ರಯತ್ನವೊಂದನ್ನು ಮಾಡಲು ಬಹಳ ಸಮರ್ಥವಾಗಿರುತ್ತದೆ, ಏಕೆಂದರೆ ಅದು ಅದರ ಸ್ವಭಾವದಲ್ಲಿದೆ. ವಾಸ್ತವದಲ್ಲಿ ನೀವು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ ಎಂದು ಹೇಳಲಾರೆ. ನೀವು ಹಲವಾರು ವಿಷಯಗಳಿಗಾಗಿ ಬಹಳ ಪ್ರಯತ್ನ ಮಾಡುತ್ತೀರಿ, ಅದು ಸಂತೋಷ ಕೊಡುವಂತಹದಿರಬಹುದು ಇಲ್ಲವೆ ಒಂದಿಲ್ಲೊಂದು ಕಾರಣಕ್ಕಾಗಿ ಆವಶ್ಯವಾಗಿದೆ ಎಂಬುದನ್ನು ತಿಳಿದುಕೊಂಡಿರುತ್ತೀರಿ. ನೀವು ಹೇಳುವುದರ ಅರ್ಥವೆಂದರೆ ಯೋಗಕ್ಕಾಗಿ ಮುಂದುವರಿದುಕೊಂಡು ಹೋಗುತ್ತಿರುವ ಪ್ರಯತ್ನ ಮಾಡುವು–ದಾಗಿದೆ. ಯೋಗಕ್ಕಾಗಿ ಇಲ್ಲವೆ ಯೋಗವನ್ನು ಆಚರಿಸಲು ಬಂದಿದ್ದೇವೆ ಎಂಬ ಯೋಚನೆಯಿಂದ ಬಂದ ಜನರು ಕೂಡ ಇಲ್ಲಿರುತ್ತಾರೆ, ಅವರು ಬಹಳ ಪ್ರಯತ್ನ ಮಾಡುವುದಿಲ್ಲ, ಅವರು ಬರುತ್ತಿರುವಂತೆಯೇ ವಿಷಯಗಳನ್ನು ಹಗುರಾಗಿ ತೆಗೆದುಕೊಳ್ಳುತ್ತಾರೆ. ಭೌತಿಕ ಸ್ವಭಾವವನ್ನು ಅದಿರುವಂತೆ ಬಿಟ್ಟುಕೊಟ್ಟಾಗ ಅದು ಸ್ವಯಂಪ್ರೇರಣೆಯಿಂದ ಮುಂದೂಡುವಿಕೆಗೆ ಒಳಗಾಗುತ್ತದೆ ಎಂದು ನಾನು ಯೋಚಿಸುವುದಿಲ್ಲ ಅದಕ್ಕೆ ಸ್ವಲ್ಪ ಮಟ್ಟಿಗಿನ ಚಟುವಟಿಕೆ ಬೇಕಾಗುತ್ತದೆ, ಆದರೆ ಅದು ಬಹಳ ಅಲ್ಪವಾಗಿರುತ್ತದೆ, ನೀವು ನೋಡಿದ ಹಾಗೆ ಇಲ್ಲಿರುವ ಶ್ರೇಷ್ಠ ಸಂಗತಿ ಎಂದರೆ ಶಿಕ್ಷಣದ ತತ್ವ ಸ್ವಾತಂತ್ರ್ಯದ ತತ್ವವಾಗಿರುತ್ತದೆ. ಅದನ್ನು ಸಂಕ್ಷಿಪ್ತವಾಗಿ ಹೇಳುವುದಾದರೆ ಇಡೀ ಜೀವನವನ್ನು ಚಲನೆಯಲ್ಲಿ ಸಾಧ್ಯವಿದ್ದಷ್ಟು ಗರಿಷ್ಠ ಮಟ್ಟದ ಸ್ವಾತಂತ್ರ್ಯವಿರುವಂತೆ ಸಂಘಟಿಸಲಾಗಿದೆ, ಎಂದರೆ ನಿಯಮಗಳು, ನಿಯಂತ್ರಣಗಳು ಹಾಗೂ ಕಟ್ಟುನಿಟ್ಟುಗಳು ಇವುಗಳನ್ನು ಸಂಪೂರ್ಣವಾಗಿ ಅತಿ ಅಲ್ಪವಾಗುವಂತೆ ಕಡಿಮೆ ಮಾಡಲಾಗಿದೆ. ಇದನ್ನು ನೀವು, ಪಾಲಕರು ಸಾಮಾನ್ಯವಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡುವ ರೀತಿಗೆ ಹೋಲಿಸಿದರೆ, ಆ ರೀತಿ ಸತತ “ಇದನ್ನು ಮಾಡಬೇಡ”, “ನೀನದನ್ನು ಮಾಡಲಾರೆ”, “ಇದನ್ನು ಮಾಡು”, “ಅಲ್ಲಿಗೆ ಹೋಗಿ ಅದನ್ನು ಮಾಡು” ಎಂದು ಹೇಳುವುದಾಗಿರುತ್ತದೆ ಮತ್ತು ನಿಮಗೆ ಆಜ್ಞೆಗಳು ಹಾಗೂ ನಿಯಮಗಳು ತಿಳಿದಿವೆ, ಆ ಹೋಲಿಕೆಯಲ್ಲಿ ಗಣನೀಯ ವ್ಯತ್ಯಾಸ ಕಂಡುಬರುತ್ತದೆ.

ನಮ್ಮಲ್ಲಿರುವುದಕ್ಕಿಂತ ಅನಂತಪಟ್ಟು ಹೆಚ್ಚು ಕಟ್ಟುನಿಟ್ಟಿನ ನಿಯಮಗಳು ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಹೀಗೆ ಎಲ್ಲೆಡೆಯಲ್ಲಿ ಇವೆ. ಪ್ರಗತಿ ಸಾಧಿಸಲು ನಿಮ್ಮ ಮೇಲೆ ಪರಿಪೂರ್ಣ ಷರತ್ತನ್ನು ಇರಿಸದೆ ಇದ್ದುದರಿಂದ, ಅದನ್ನು ನಿಮಗೆ ಸಂತೋಷದ್ದೆಂದು ಕಂಡುಕೊಂಡಾಗ ಕೈಕೊಳ್ಳುತ್ತೀರಿ, ಸಂತೋಷದ್ದೆನಿಸದಿದ್ದರೆ ಅದನ್ನು ಕೈಕೊಳ್ಳುವುದಿಲ್ಲ ಮತ್ತು ನಂತರ ವಿಷಯಗಳನ್ನು ನಿಮಗೆ ಸಾಧ್ಯವಿದ್ದಷ್ಟು ಹಗುರಾಗಿ ತೆಗೆದುಕೊಳ್ಳುತ್ತೀರಿ. ಕೆಲವರಿದ್ದಾರೆ– ನಾನದನ್ನು ಪರಿಪೂರ್ಣ ರೀತಿಯಲ್ಲಿ ಹೇಳಲಾರೆ– ಪ್ರಯತ್ನ ಮಾಡುವ ಕೆಲವರಿದ್ದಾರೆ, ಆದರೆ ಅವರು ಸ್ವಯಂಪ್ರೇರಣೆಯಿಂದ ಕೈಕೊಳ್ಳುತ್ತಾರೆ. ಸಹಜವಾಗಿ ಇದು ಆಧ್ಯಾತ್ಮಿಕ ದೃಷ್ಟಿಕೋನದಿಂದ ಅನಂತಪಟ್ಟು ಹೆಚ್ಚು ಮೌಲ್ಯವುಳ್ಳದ್ದು. ಪ್ರಗತಿಯನ್ನು ನೀವು ಸಾಧಿಸುತ್ತೀರಿ, ಏಕೆಂದರೆ ನಿಮ್ಮಂತರಂಗದಲ್ಲಿ ಅದನ್ನು ಕೈಕೊಳ್ಳುವ ಆವಶ್ಯಕತೆಯ ಭಾವನೆಯನ್ನು ತಂದುಕೊಳ್ಳುತ್ತೀರಿ, ಏಕೆಂದರೆ ಒಂದು ಪ್ರಚೋದನೆ ಸ್ವಯಂಪ್ರೇರಣೆಯಿಂದ ಮುಂದೆ ದೂಡುತ್ತದೆ ಮತ್ತು ಅದನ್ನು ನಿಮ್ಮ ಮೇಲೆ ನಿಯಮವೆಂದು ಹೇರಲಾಗಿದೆ ಎಂಬ ಕಾರಣದಿಂದಲ್ಲ – ಈ ಪ್ರಗತಿ ಆಧ್ಯಾತ್ಮಿಕ ದೃಷ್ಟಿಕೋನದಿಂದ ಅನಂತಪಟ್ಟು ಶ್ರೇಷ್ಠವಾಗಿರುತ್ತದೆ. ಅದಕ್ಕೆ ಕಾರಣ ನಿಮ್ಮಲ್ಲಿರುವುದೆಲ್ಲವೂ ಕಾರ್ಯಗಳನ್ನು ಸ್ವಯಂಪ್ರೇರಣೆಯಿಂದ ಹಾಗೂ ನಿಷ್ಕಾಪಟ್ಯದಿಂದ ಸರಿಯಾಗಿ ಕೈಕೊಳ್ಳಲು ಪ್ರಯತ್ನಿಸಿದಾಗ ಅದು ನಿಮ್ಮ ಅಂತರಂಗದಿಂದ ಬಂದಿರುವ ಏನೋ ಒಂದಾಗಿರುತ್ತದೆ ಮತ್ತು ನೀವು ಸರಿಯಾಗಿ ಮಾಡಿದರೆ ನಿಮಗೆ ಬಹುಮಾನ ಕೊಡಲಾಗುವುದು, ಕೆಟ್ಟದಾಗಿ ಮಾಡಿದರೆ ಶಿಕ್ಷೆ ನೀಡಲಾಗುವುದು ಎಂಬ ವಚನ ನೀಡಿದ ಕಾರಣದಿಂದಲ್ಲ. ಒಂದು ವಿಶಿಷ್ಟ ಕ್ಷಣದಲ್ಲಿ ನಿಮ್ಮ ಪ್ರಯತ್ನವನ್ನು ಮೆಚ್ಚಿಕೊಳ್ಳಲಾಗಿದೆ ಎಂಬ ಭಾವನೆಯನ್ನು ನಿಮಗೆ ತಂದುಕೊಡುವ ಏನೋ ಒಂದಿರುವ ಸಾಧ್ಯತೆ ಇದೆ, ಆದರೆ ಈ ದೃಷ್ಟಿಕೋನ–ವನ್ನಿಟ್ಟುಕೊಂಡು ಆ ಪ್ರಯತ್ನವನ್ನು ಮಾಡಲಾಗಿರುವುದಿಲ್ಲ; ಎಂದರೆ ಈ ಭರವಸೆಗಳನ್ನು ಮೊದಲೇ ಕೊಡಲಾಗಿರುವುದಿಲ್ಲ ಇಲ್ಲವೆ ಅವುಗಳಿಗೆ ಸರಿಸಮವಾದ ಶಿಕ್ಷೆಗಳಿಂದ ಸರಿತೂಗಿಸಲಾಗಿರುವುದಿಲ್ಲ. ಇದು ಇಲ್ಲಿ ಆಚರಣೆಯಲ್ಲಿಲ್ಲ. ಸಾಮಾನ್ಯವಾಗಿ ವಿಷಯಗಳು ಹೇಗಿರುತ್ತವೆ ಎಂದರೆ ಹೇಗೆ ವ್ಯವಸ್ಥೆಗೆ ಒಳಪಡಿಸಲಾಗಿರುತ್ತವೆ ಎಂದರೆ ಸರಿಯಾಗಿ ಕೈಕೊಂಡದ್ದರ ತೃಪ್ತಿ ಬಹುಮಾನಗಳಲ್ಲಿ ಅತ್ಯಂತ ಒಳ್ಳೆಯದೆಂದು ತೋರಿಬರುತ್ತದೆ, ಮನುಷ್ಯ ಕೆಟ್ಟ ರೀತಿಯಲ್ಲಿ ಕೈಕೊಂಡಾಗ ಅವನು ತನಗೇ ಶಿಕ್ಷೆ ಕೊಡುತ್ತಾನೆ, ಆ ಶಿಕ್ಷೆಯ ಅರ್ಥ

ದುಃಖಿತನಾಗಿರುವ, ಅಸಂತೋಷದಿಂದಿರುವ, ನೆಮ್ಮದಿ ಕಳೆದುಕೊಂಡಿರುವ ಭಾವನೆ ತಂದುಕೊಳ್ಳುತ್ತಾನೆ, ಇದು ನಿಜವಾಗಿ ಮನುಷ್ಯ ಹೊಂದಬಹುದಾದ ಮೂರ್ತರೂಪದ ಶಿಕ್ಷೆ ಮತ್ತು ಹಾಗಾಗಿ ಈ ಎಲ್ಲ ಚಲನೆಗಳು ಆಂತರಿಕ ಆಧ್ಯಾತ್ಮಿಕ ದೃಷ್ಟಿಕೋನದಿಂದ, ಬಾಹ್ಯ ನಿಯಮದಿಂದಾಗುವ ಪರಿಣಾಮದಿಂದ ದೊರಕಿಸುವ ಮೌಲ್ಯಕ್ಕಿಂತ ಅನಂತಪಟ್ಟು ಹೆಚ್ಚು ಮೌಲ್ಯವನ್ನು ಹೊಂದಿರುತ್ತವೆ.

**CWM, 6/431–32** **– ಶ್ರೀಮಾತೆ**

*

**ಸ್ವಾತಂತ್ರ್ಯ ಹಾಗೂ ಶಿಸ್ತುಪಾಲನೆ**

**ಪ್ರಶ್ನೆ:** *ಭೌತಿಕ ಶಿಕ್ಷಣಕ್ಕಾಗಿ ಕ್ರೀಡೆಗಳ ಮೇಲೆ ಬಹಳ ಹೆಚ್ಚಿನ ಒತ್ತು ನೀಡುತ್ತಿರುವುದರಿಂದಾಗಿ ಅಭ್ಯಾಸದಲ್ಲಿ ಸರ್ವಸಾಧಾರಣ ಅಸಮರ್ಪಕತೆ ಬರುತ್ತಿದೆ ಎಂದು ಕೆಲವರು ಹೇಳುತ್ತಾರೆ, ಇದು ಸತ್ಯವಾದದ್ದೇ?*

**ಶ್ರೀಮಾತೆ:** ಯಾರು ಅದನ್ನು ಹೇಳಿದರು? ಭೌತಿಕ ಶಿಕ್ಷಣವನ್ನು ಇಷ್ಟಪಡದ ಜನರೇ? ವ್ಯಾಯಾಮ ಮಾಡುವುದನ್ನು ಬಿಟ್ಟುಕೊಟ್ಟ ಗಡಸು ವರ್ತನೆಯ ಹಳೆಯ ಶಿಕ್ಷಕರೇ? ಇವರೇ? ನಾನು ಹೆಸರುಗಳನ್ನು ಕೇಳುತ್ತಿಲ್ಲ! ಸರಿ ಅದು ಹಾಗಿದೆ ಎಂದು ನಾನು ಯೋಚಿಸುವುದಿಲ್ಲ.

ಬುಲೆಟಿನ್ ಪತ್ರಿಕೆಯಲ್ಲಿ ಶ್ರೀ ಅರವಿಂದರು ಬರೆದ ಮೊದಲ ಲೇಖನದ ಬಗ್ಗೆ ನಿಮಗೆ ನೆನಪಿದೆಯೆ? ಈ ಜನರಿಗೆ ಅವರು ಬಹಳ ನೇರ ಉತ್ತರ ನೀಡಿದ್ದಾರೆ. ಇದು ಅದೆಂದು ನಾನು ಯೋಚಿಸುವುದಿಲ್ಲ. ಇದು ಅದಲ್ಲ ಎಂಬುದರ ಬಗ್ಗೆ ನನಗೆ ಬಹಳ ಖಚಿತತೆ ಇದೆ. ಅದಕ್ಕೂ ಹೆಚ್ಚಾಗಿ ಆ ಆಪಾದನೆಯನ್ನು ನನ್ನ ಮೇಲೆಯೇ ತೆಗೆದುಕೊಳ್ಳುತ್ತೇನೆ. ಅದೆಂದರೆ ನನ್ನ ಮಕ್ಕಳೆ, ನಿಮಗೆ ಅತಿಯಾದ ಸ್ವಾತಂತ್ರ್ಯವನ್ನು ಕೊಡಲಾಗಿದೆ, ಓಹ್! ಮಕ್ಕಳು ಇಷ್ಟೊಂದು ಮುಕ್ತರಾಗಿರುವ ಸ್ಥಳ ಜಗತ್ತಿನಲ್ಲಿ ಬೇರೆಡೆ ಎಲ್ಲಿಯಾದರೂ ಇದೆ ಎಂದು ನನಗನಿಸುವುದಿಲ್ಲ ಮತ್ತು ನಿಜವಾಗಿ ಆ ಬಗೆಯ ಸ್ವಾತಂತ್ರ್ಯದ ಉಪಯೋಗ ಹೇಗೆ ಮಾಡಿಕೊಳ್ಳಬೇಕು ಎಂದು ತಿಳಿದುಕೊಳ್ಳುವುದು ಕಠಿಣವಾದದ್ದು.

ಹಾಗಿದ್ದರೂ ಆ ಪ್ರಯೋಗಕ್ಕಾಗಿ ಪ್ರಯತ್ನಿಸುವುದು ಯೋಗ್ಯವಾಗಿತ್ತು. ನೀವು ಅದನ್ನು ಮೆಚ್ಚಿಕೊಳ್ಳುವುದಿಲ್ಲ, ಏಕೆಂದರೆ ಅದು ಆ ರೀತಿಯದಾಗಿರದಿದ್ದರೆ ಅದು

ಹೇಗಿರುತ್ತದೆ ಎಂಬುದು ನಿಮಗೆ ತಿಳಿದಿರುವುದಿಲ್ಲ, ಅದು ನಿಮಗೆ ಬಹಳ ಸ್ವಾಭಾವಿಕವಾದದ್ದು ಎಂದೆನಿಸುತ್ತದೆ. ಮನುಷ್ಯನೇ ಸ್ವತಃ ತನ್ನ ಸ್ವಾತಂತ್ರ್ಯವನ್ನು ಹೇಗೆ ವ್ಯವಸ್ಥೆಗೊಳಪಡಿಸಬೇಕು ಎಂಬುದನ್ನು ತಿಳಿದುಕೊಳ್ಳುವುದು ಕಠಿಣವಾದದ್ದು. ಆದಾಗ್ಯೂ ನಿಮಗೆ ನಿಮ್ಮದೇ ಶಿಸ್ತುಪಾಲನೆಯನ್ನು ಕೊಡುವುದರಲ್ಲಿ ಯಶಸ್ವಿಯಾದಾಗ– ಮತ್ತು ಅದು ಉಚ್ಚತರ ಕಾರಣಗಳಿಗಾಗಿರಬೇಕು, ಪರೀಕ್ಷೆಗಳನ್ನು ಪಾಸು ಮಾಡುವುದಕ್ಕಲ್ಲ, ಬದುಕಿನ ಹಾದಿ (career)ಯನ್ನು ಮಾಡಿಕೊಳ್ಳುವುದಕ್ಕಲ್ಲ, ನಿಮ್ಮ ಶಿಕ್ಷಕರನ್ನು ಸಂತೋಷಪಡಿಸುವುದಕ್ಕಲ್ಲ, ಬಹುಮಾನಗಳನ್ನು ಗೆದ್ದುಕೊಳ್ಳುವುದಕ್ಕಲ್ಲ, ಇಲ್ಲವೆ ಮಕ್ಕಳಲ್ಲಿರುವ ಎಲ್ಲ ಸಾಧಾರಣ ಕಾರಣಗಳಿಗಾಗಿ ಅಲ್ಲ: ಬೈಸಿಕೊಳ್ಳುವುದಕ್ಕಾಗಿ ಅಲ್ಲ, ಅದೆಲ್ಲದಕ್ಕೆ ಶಿಕ್ಷೆ ಪಡೆಯುವುದಕ್ಕಲ್ಲ, ಆ ಎಲ್ಲ ಕಾರಣಗಳನ್ನು ಬಿಟ್ಟುಕೊಡುತ್ತೇವೆ– ನೀವು ನಿಮ್ಮ ಮೇಲೆ ಶಿಸ್ತುಪಾಲನೆಯನ್ನು ಹೇರಿಕೊಳ್ಳುವುದನ್ನು ನಿರ್ವಹಿಸಬಲ್ಲಿರಾದರೆ– ಪ್ರತಿಯೊಬ್ಬನೂ ತನ್ನದೇ, ಬೇರೆಯವರೊಬ್ಬರನ್ನು ಅನುಸರಿಸುವ ಅಗತ್ಯವಿಲ್ಲ.– ಒಂದು ಶಿಸ್ತುಪಾಲನೆಗೆ ಕಾರಣ ನೀವು ಪ್ರಗತಿ ಸಾಧಿಸಲು ಹಾಗೂ ನಿಮ್ಮೊಳಗಿಂದ ಹೊರಗೆ ಅತ್ಯಂತ ಒಳ್ಳೆಯದನ್ನು ಹೊರಗೆಳೆದು ತರಲು ಬಯಸುತ್ತೀರಿ. ಆಗ ಓಹ್! ಸಾಧಾರಣ ಶಾಲೆಯ ಶಿಸ್ತುಪಾಲನೆಯನ್ನು ಅನುಸರಿಸುವವರಿಗಿಂತ ಮೇಲ್ಮಟ್ಟದವರಾಗುತ್ತೀರಿ.

ಅದನ್ನೇ ನಾನು ಪ್ರಯತ್ನಿಸಲು ಬಯಸಿದ್ದೆ. ಲಕ್ಷ್ಯಗೊಡಿರಿ. ನಾನು ವಿಫಲಳಾಗಿದ್ದೇನೆಂದು ಹೇಳುವುದಿಲ್ಲ. ಈ ಅನನ್ಯ ಸದವಕಾಶದಿಂದ ಹೇಗೆ ಲಾಭಗಳಿಸಬೇಕೆಂಬುದನ್ನು ನೀವು ತಿಳಿದುಕೊಳ್ಳುತ್ತೀರಿ. ನೀವು ತಿಳಿದುಕೊಳ್ಳುತ್ತೀರಿ ಎಂಬ ಭರವಸೆಯನ್ನು ನಾನು ಇನ್ನೂ ಇಟ್ಟುಕೊಂಡಿದ್ದೇನೆ. ಆದಾಗ್ಯೂ ನೀವು ಕಂಡುಕೊಳ್ಳಲೇಬೇಕಾದ ಏನೋ ಒಂದಿದೆ, ಅದು ಆಂತರಿಕ ಶಿಸ್ತುಪಾಲನೆಯ ಆವಶ್ಯಕತೆ. ಶಿಸ್ತುಪಾಲನೆ ಇಲ್ಲದೆ ನೀವು ಎಲ್ಲಿಯೂ ತಲುಪಲಾರಿರಿ, ಶಿಸ್ತುಪಾಲನೆ ಇಲ್ಲದೆ ಸಾಮಾನ್ಯ ಮನುಷ್ಯನ ಸಾಮಾನ್ಯ ಜೀವನವನ್ನು ಕೂಡ ಜೀವಿಸಲಾರಿರಿ. ಆದರೆ ಸಾಮಾನ್ಯ ಸಮಾಜಗಳ ಇಲ್ಲವೆ ಸಾಮಾನ್ಯ ಸಂಸ್ಥೆಗಳ ಸಾಂಪ್ರದಾಯಿಕ ಶಿಸ್ತುಪಾಲನೆಯನ್ನು ಹೊಂದುವುದರ ಬದಲಾಗಿ ನಿಮ್ಮ ಸತ್ತೆಯ ಪರಿಪೂರ್ಣತೆಗಾಗಿ, ನಿಮ್ಮದೇ ಪರಿಪೂರ್ಣತೆಗಾಗಿ, ಪರಿಪೂರ್ಣತೆಗಾಗಿ ಇರುವ ಪ್ರೀತಿಗಾಗಿ ನಿಮ್ಮದೇ ಶಿಸ್ತುಪಾಲನೆಯನ್ನು, ನೀವು ಇನ್ನೂ ಇರಿಸಿಕೊಳ್ಳಬೇಕೆಂದು ನಾನು ಇಷ್ಟಪಡುತ್ತೇನೆ.

ಆದರೆ ಅದಿಲ್ಲದಿದ್ದರೆ ಮನುಷ್ಯ ದೇಹಕ್ಕೆ ಶಿಸ್ತುಪಾಲನೆ ಒದಗಿಸದಿದ್ದರೆ ಅವನು ಎರಡು ಕಾಲುಗಳ ಮೇಲೆ ನಿಲ್ಲಲೂ ಕೂಡ ಸಾಧ್ಯವಾಗುವುದಿಲ್ಲ. ಮಗುವಿನ ಹಾಗೆ ನಾಲ್ಕು ಅಂಗಗಳ ಮೇಲೆ ನಡೆಯುವುದನ್ನು ಮುಂದುವರಿಸಿಕೊಂಡು ಹೋಗುತ್ತಾನೆ. ನೀವು ಏನನ್ನೂ ಮಾಡಲಾರಿರಿ. ನಿಮ್ಮನ್ನು ಶಿಸ್ತಿಗೆ ಒಳಪಡಿಸಿಕೊಳ್ಳಲು ಬದ್ಧರಾಗುತ್ತೀರಿ, ನೀವು ಸಮಾಜದಲ್ಲಿ ಜೀವಿಸಲಾರಿರಿ, ನೀವು ಜೀವಿಸಲಾಗುವುದೇ ಇಲ್ಲ, ಬಹುಶಃ ಏಕಾಕಿಯಾಗಿ ಅಡವಿಯಲ್ಲಿರಬಹುದು, ಆಗಲೂ ಕೂಡ ನನಗೆ ಅದರ ಬಗ್ಗೆ ಬಹಳಷ್ಟು ತಿಳಿದಿಲ್ಲ. ಅದು ಪರಿಪೂರ್ಣವಾಗಿ ಅತ್ಯಗತ್ಯವಾದದ್ದು. ನಾನಿದನ್ನು ನಿಮಗೆ ಹೇಳಿದ್ದೇನೆ. ಅದೆಷ್ಟು ಸಲ ಹೇಳಿದ್ದೇನೆ ಎಂಬುದು ನನಗೆ ತಿಳಿದಿಲ್ಲ ಮತ್ತು ನನಗೆ ಬಹಳ ಗುರುತಿಸಲಾದ ಜುಗುಪ್ಸೆ ಸಾಂಪ್ರದಾಯಿಕ, ಸಾಮಾಜಿಕ ಹಾಗೂ ಇತರ ಶಿಸ್ತುಪಾಲನೆಗಳನ್ನು ಕುರಿತಾಗಿದೆ ಎಂಬ ಕಾರಣದಿಂದ ನೀವು ಎಲ್ಲ ಶಿಸ್ತುಪಾಲನೆಯನ್ನು ಬಿಟ್ಟುಕೊಡಬೇಕೆಂಬ ಅರ್ಥ ಅಲ್ಲಿರುವುದಿಲ್ಲ. ತನ್ನ ನಿಷ್ಕಪಟ ಅಭೀಪ್ಸೆಯಿಂದ ಹಾಗೂ ತನ್ನನ್ನು ಸಿದ್ಧಿಕೊಳ್ಳಬೇಕು ಎಂಬ ಸಂಕಲ್ಪದಿಂದ ಪ್ರತಿಯೊಬ್ಬನೂ ತನ್ನದೇ ಶಿಸ್ತುಪಾಲನೆಯನ್ನು ಕಂಡುಕೊಳ್ಳುವುದನ್ನು ನಾನು ಇಷ್ಟಪಡುತ್ತೇನೆ ಮತ್ತು ಹಾಗಾಗಿ ತಿಳಿದುಕೊಂಡವರು ಶಿಕ್ಷಕರೇ ಆಗಿರಲಿ, ಬೋಧಕರೇ ಆಗಿರಲಿ, ಇಲ್ಲವೆ ಇನ್ನಿತರರೇ ಆಗಿರಲಿ ಅವರು ತಿಳಿದುಕೊಂಡಿರುವುದರ ಉದ್ದೇಶ ನಿಮಗೆ ಮಾಹಿತಿ ಕೊಡುವುದಾಗಿದೆ ಹಾಗೂ ಸಹಾಯ ಮಾಡುವುದಾಗಿದೆ. ನಿಮಗೆ ಕಠಿಣವಾದದ್ದೆಂದು ತೋರಿಬರುವ ಸನ್ನಿವೇಶದಲ್ಲಿ ನೀವಿದ್ದಾಗ ನಿಮ್ಮ ಸಮಸ್ಯೆಯನ್ನು ಅವರ ಮುಂದಿರಿಸಿರಿ ಮತ್ತು ವೈಯಕ್ತಿಕ ಅನುಭವದಿಂದ ಅವರು ಹೇಳಬಲ್ಲರು: “ಇಲ್ಲ, ಅದು ಇದರ ಹಾಗಿದೆ ಇಲ್ಲವೆ ಅದರ ಹಾಗಿದೆ, ನೀವು ಅದನ್ನು ಕುರಿತು ಪ್ರಯತ್ನ ಮಾಡಬೇಕು”. ಹಾಗಾಗಿ ಸಿದ್ಧಾಂತಗಳನ್ನು ತತ್ವಗಳನ್ನು ಹಾಗೂ ನಿಯಮಗಳೆಂದು ಕರೆಯಲಾದ–ವುಗಳನ್ನು, ಹೆಚ್ಚು ಕಡಿಮೆ ಅಮೂರ್ತ ಜ್ಞಾನವನ್ನು ಹೀರಿಕೊಳ್ಳಲು ಒತ್ತಾಯ ತರುವುದರ ಬದಲಾಗಿ ಅವರು ಅಲ್ಲಿ ಅತ್ಯಂತ ಭೌತಿಕವಾದದ್ದರಿಂದ ಹಿಡಿದು ಅತ್ಯಂತ ಆಧ್ಯಾತ್ಮಿಕವಾದ ವಿಷಯಗಳ ಬಗ್ಗೆ ಮಾಹಿತಿ ಕೊಡಲು ಇರುತ್ತಾರೆ, ಅವರಲ್ಲಿ ಪ್ರತಿಯೊಬ್ಬನೂ ತನ್ನದೇ ಕಾರ್ಯಕ್ಷೇತ್ರದಲ್ಲಿ ಹಾಗೂ ತನ್ನ ಕ್ಷಮತೆಗನುಗುಣವಾಗಿ ಇರುತ್ತಾನೆ.

**CWM, 8/183–85** **– ಶ್ರೀಮಾತೆ**

*

## ಸ್ವಾತಂತ್ರ್ಯವನ್ನು ಅರ್ಥಮಾಡಿಕೊಳ್ಳುವುದು

**ಪ್ರಶ್ನೆ:** *ಶ್ರೀಮಾತೆಯವರೆ, ನೀವು ವಿದ್ಯಾರ್ಥಿಗೆ ಪೂರ್ತಿ ಸ್ವಾತಂತ್ರ್ಯ ಕೊಡಬೇಕೆಂದು ಹೇಳಿದ್ದೀರಿ, ಇದನ್ನು ಈಗ ಕೆಲವರು ವಿವರಿಸಿ ಹೇಳುವುದೇನೆಂದರೆ ಅಲ್ಲಿ ಸ್ಥಿರಗೊಳಿಸಿದ ವರ್ಗಗಳಿರುವುದಿಲ್ಲ, ವಿದ್ಯಾರ್ಥಿ ತನಗಿಷ್ಟವಾದದ್ದನ್ನು ಕೈಕೊಳ್ಳಲು ಮುಕ್ತನಾಗಿರಬೇಕು, ಕ್ಲಾಸಿಗೆ ಬರಬಹುದು ಇಲ್ಲವೆ ಬರದೆ ಇರಬಹುದು ಇತ್ಯಾದಿ. ಇಂತಹ ಸಂದರ್ಭದಲ್ಲಿ ಪ್ರತಿಯೊಂದು ಕ್ಲಾಸಿಗೆ ಸ್ಥಿರಗೊಳಿಸಿದ ಗಂಟೆಗಳಿರ–ಬಾರದು. ಹೀಗಿದ್ದಾಗ ಸಂಘಟನೆ ಬಹಳ ಜಟಿಲವಾಗುತ್ತದೆ– ಕ್ಲಾಸುಗಳನ್ನು ವ್ಯವಸ್ಥೆಗೆ ಒಳಪಡಿಸುವುದು ಹೇಗೆ?*

**ಶ್ರೀಮಾತೆ:** ಬಹಳ ಅಸಾಧ್ಯವಾದದ್ದು. ಆದರೆ ವಿದ್ಯಾರ್ಥಿ ಕ್ಲಾಸಿಗೆ ಬರಬೇಕೋ ಬೇಡವೋ ಎಂಬುದನ್ನು ಕುರಿತು ನಾನು ಹೇಳಿದ್ದು ಯಾವಾಗ?

ಕ್ಷಮಿಸಬೇಕು, ವಿಷಯಗಳನ್ನು ನೀವು ಗೊಂದಲಕ್ಕೀಡು ಮಾಡಬಾರದು, ನಾನು ಹೇಳುತ್ತೇನೆ ಮತ್ತೆ ಪುನರಾವರ್ತಿಸಿ ಹೇಳುತ್ತೇನೆ, ಒಬ್ಬ ವಿದ್ಯಾರ್ಥಿಗೆ ಒಂದು ವಿಷಯ ಬಹಳ ಪರಕೀಯವಾದದ್ದು ಎನಿಸಿದರೆ, ಉದಾಹರಣೆಗೆ ಒಬ್ಬ ವಿದ್ಯಾರ್ಥಿ ಸಾಹಿತ್ಯ ಹಾಗೂ ಕಾವ್ಯ ಇವುಗಳನ್ನು ಕಲಿಯಲು ಶಕ್ತನಾಗಿದ್ದೇನೆ ಮತ್ತು ತನಗೆ ಗಣಿತ ಕುರಿತು ಜುಗುಪ್ಸೆಯಿದೆ ಇಲ್ಲ ಉದಾಸೀನತೆ ಇದೆ "ನಾನು ಗಣಿತ ಕಲಿತುಕೊಳ್ಳುವುದಕ್ಕೆ ಆದ್ಯತೆ ನೀಡುವುದಿಲ್ಲ" ಎಂದು ನನಗೆ ಹೇಳಿದರೆ ನಾನು ಅವನಿಗೆ "ಇಲ್ಲ, ಅದನ್ನು ಕಲಿಯುವುದು ಅತ್ಯಂತ ಅವಶ್ಯವಾದದ್ದು" ಎಂದು ಹೇಳುವುದಿಲ್ಲ. ಆದರೆ ಒಬ್ಬ ವಿದ್ಯಾರ್ಥಿ ಒಂದು ಕ್ಲಾಸಿಗೆ ಹೋಗಬೇಕೆಂದು ನಿರ್ಧರಿಸಿದ್ದರೆ ಆಗ ಅದು ಪ್ರಾಥಮಿಕ ಶಿಸ್ತುಪಾಲನೆ, ಅವನು ಅದನ್ನು ಅನುಸರಿಸಬೇಕು ಮತ್ತು ಕ್ರಮಬದ್ಧವಾಗಿ ಅಲ್ಲಿಗೆ ಹೋಗಬೇಕು ಹಾಗೂ ಅಲ್ಲಿ ಸರಿಯಾದ ರೀತಿಯಲ್ಲಿ ನಡೆದುಕೊಳ್ಳಬೇಕು. ಹಾಗಿರದಿದ್ದರೆ ಅವನು ಶಾಲೆಗೆ ಹೋಗುವುದಕ್ಕೆ ಒಟ್ಟಿನಲ್ಲಿ ಅಯೋಗ್ಯನಾಗಿರುತ್ತಾನೆ. ಕ್ಲಾಸುಗಳು ನಡೆಯುತ್ತಿರುವ ಸಮಯದಲ್ಲಿ ಅತ್ತಿತ್ತ ಅಲೆದಾಡುವುದಕ್ಕೆ ನಾನು ಯಾರಿಗೂ ಉತ್ತೇಜನ ನೀಡಿಲ್ಲ. ಒಂದು ದಿನ ಕ್ಲಾಸಿಗೆ ಬರುವುದು ಮುಂದಿನ ದಿನ ಬರದೆ ಇರುವುದು ಇಂತಹದು ಎಂದಿಗೂ ಇರಬಾರದು, ಏಕೆಂದರೆ ಪ್ರಾರಂಭದಿಂದ ಅವನು ಈ ಬಹಳ ಪ್ರಾಥಮಿಕ ಶಿಸ್ತುಪಾಲನೆಗೆ ಅಧೀನನಾಗದಿದ್ದರೆ ಅವನು ಎಂದಿಗೂ ತನ್ನ ಮೇಲೆ ಕನಿಷ್ಠ ಮಟ್ಟದ ನಿಯಂತ್ರಣ ದೊರಕಿಸುವುದಿಲ್ಲ, ಅವನು ಯಾವಾಗಲೂ ತನ್ನ

ಪ್ರಚೋದನೆಗಳ ಹಾಗೂ ಚಪಲತನಗಳ ಗುಲಾಮನಾಗುತ್ತಾನೆ. ಜ್ಞಾನದ ಒಂದು ವಿಭಾಗವನ್ನು ನೀವು ಅಭ್ಯಾಸ ಮಾಡಲು ಇಷ್ಟಪಡದಿದ್ದರೆ ಪರವಾಯಿಲ್ಲ, ಅದನ್ನು ಕೈಕೊಳ್ಳಿರೆಂದು ಯಾರೂ ನಿಮ್ಮನ್ನು ಒತ್ತಾಯಪಡಿಸುವುದಿಲ್ಲ, ಆದರೆ ನೀವು ಏನನ್ನೋ ಕೈಕೊಳ್ಳಲು ನಿರ್ಧರಿಸಿದಾಗ ಅದನ್ನು ಪ್ರಾಮಾಣಿಕವಾಗಿ, ಶಿಸ್ತುಪಾಲನೆಯಿಂದ, ಕ್ರಮಬದ್ಧವಾಗಿ ಹಾಗೂ ವಿಧಾನಕ್ಕನುಗುಣವಾಗಿ ಕೈಕೊಳ್ಳಲೇಬೇಕು. ಹುಚ್ಚಾಟಿಕೆ ಇರಬಾರದು. ಯಾರಾದರೂ ತನ್ನದೇ ಪ್ರಚೋದನೆಯ ಹಾಗೂ ಚಪಲತನದ ಆಟಿಗೆ ವಸ್ತುವಾಗಲು ನಾನು ಎಂದಿಗೂ ಅನುಮತಿ ನೀಡಿಲ್ಲ, ಎಂದೆಂದಿಗೂ ಇಲ್ಲ, ನೀವು ಅದನ್ನು ನನ್ನಿಂದ ದೊರಕಿಸಲಾರಿರಿ, ಏಕೆಂದರೆ ಆಗ ಮನುಷ್ಯ ಇನ್ನು ಮುಂದೆ ಮಾನವ ಸತ್ತೆಯಾಗಿರುವುದಿಲ್ಲ, ಪಶುವಾಗಿರುತ್ತಾನೆ. ಹಾಗಾಗಿ ಇಲ್ಲಿ ಪ್ರಶ್ನೆಗಳಲ್ಲಿ ಒಂದನ್ನು ನಿರ್ಣಯಕ್ಕೆ ಒಳಪಡಿಸುವಂತಾಗಿದೆ.

**CWM, 8/357** **– ಶ್ರೀಮಾತೆ**

*

**ಅಜ್ಞಾನದಲ್ಲಿ ಉಳಿದುಕೊಳ್ಳುವುದಕ್ಕೆ ಹಕ್ಕು**

ಜನರಲ್ಲಿ ಮೊದಲು ಕೈಕೊಂಡದ್ದನ್ನು, ಇತರರು ಕೈಕೊಳ್ಳುತ್ತಿರುವುದನ್ನು, ನಕಲು ಮಾಡುವ ಶೋಚನೀಯ ರೂಢಿಯಿದೆ. ಬಹಳ ಹಿಂದೆ ನಾನಿದನ್ನು ನಿಮಗೆ ಹೇಳಿದ್ದೇನೆ. ವಾದವೆಂದರೆ “ಇದನ್ನು ಮಾಡಲೇಬೇಕು, ಏಕೆಂದರೆ ಇದನ್ನೇ ಎಲ್ಲೆಡೆಯಲ್ಲಿ ಮಾಡಲಾಗುತ್ತಿದೆ”. ನನ್ನ ಉತ್ತರ “ಬಹುಶಃ ಆ ಕಾರಣದಿಂದಾಗಿಯೆ ಅದನ್ನು ಮಾಡಬಾರದು: ಏಕೆಂದರೆ ಇತರರು ಅದನ್ನು ಮಾಡುತ್ತಿದ್ದರೆ ಇಲ್ಲಿಯೂ ಕೂಡ ಅದನ್ನೇ ಮಾಡುವುದರ ಉಪಯೋಗವೇನಿದೆ?

**ಪ್ರಶ್ನೆ:** ಆದರೆ ನಿಮ್ಮ ಮಧ್ಯಸ್ಥಿಕೆ ಇಲ್ಲದೆ ನಾವು ಏನನ್ನಾದರೂ ಹೇಗೆ ಮಾಡಬಲ್ಲೆವು?

**ಶ್ರೀಮಾತೆ:** ಅದನ್ನು ನನಗೇಕೆ ಕೇಳುವಿರಿ? ಮೊದಲು ನಿಮ್ಮ ಶಿಕ್ಷಣ ಪದ್ಧತಿಯನ್ನು ಅತಿಮನಸ್ಸಿನ ತತ್ವಗಳ ಪ್ರಕಾರ ಬದಲು ಮಾಡಬೇಕು. ಕನಿಷ್ಠಪಕ್ಷ ಪ್ರಯತ್ನ ಮಾಡಬೇಕು. ನೀವು ಅದನ್ನು ಕೇಳಬಾರದು, ಆದರೆ ಕೈಕೊಳ್ಳಬೇಕು. ನೀವು ಒಂದೇ ಬಗೆಯ ಕಾರ್ಯ ವಿಧಾನದಲ್ಲಿ ಚಲಿಸುತ್ತಿದ್ದರೆ, ಅನಿಶ್ಚಿತ ಕಾಲದವರೆಗೆ ಅದೇ ಕಾರ್ಯವಿಧಾನದಲ್ಲಿ ಮುಂದುವರಿದುಕೊಂಡು ಹೋಗುವಿರಿ. ನೀವು

ಅದರಿಂದ ಹೊರಬರಲು ಪ್ರಯತ್ನಿಸಬೇಕು. ನಾನು ಸತತ ಈ ವಿಷಯವನ್ನು ಕುರಿತು ಚರ್ಚೆ ಮಾಡುತ್ತಿರುತ್ತೇನೆ. ಇಂದು ಇಲ್ಲವೆ ಬಹುಶಃ ನಿನ್ನೆ ಪ್ರತಿಯೊಬ್ಬನಿಗೂ, ಅವನಿಗೆ ಅಜ್ಞಾನದಲ್ಲಿರುವುದು ಸಂತೋಷ ಕೊಡುತ್ತಿದ್ದರೆ, ಅಜ್ಞಾನದಲ್ಲಿರುವುದಕ್ಕೆ ಹಕ್ಕಿದೆ ಎಂದು ಅವನ ಪಕ್ಷದಿಂದ ವಾದಿಸುತ್ತಿದ್ದೆ– ನಾನು ಆಧ್ಯಾತ್ಮಿಕ ದೃಷ್ಟಿಕೋನದಿಂದಿರುವ ಅಜ್ಞಾನವನ್ನು ಕುರಿತು ಮಾತನಾಡುತ್ತಿಲ್ಲ, ನಾವು ಜೀವಿಸುತ್ತಿರುವ ಅವಿದ್ಯೆಯ ಜಗತ್ತನ್ನು ಕುರಿತಾಗಿಯಲ್ಲ. ನಾನು ಅದನ್ನು ಕುರಿತು ಮಾತನಾಡುತ್ತಿಲ್ಲ. ಸಾಂಪ್ರದಾಯಿಕ ಶಿಕ್ಷಣಕ್ಕನುಗುಣವಾಗಿರುವ ಅಜ್ಞಾನ ಕುರಿತು ಮಾತನಾಡುತ್ತಿದ್ದೇನೆ. ಕಲಿಯಲು ಬಯಸದ ಜನರಿದ್ದರೆ, ಕಲಿಯುವುದು ಅವರಿಗೆ ಇಷ್ಟವಾಗದಿದ್ದರೆ ಕಲಿಯದೆ ಇರುವುದಕ್ಕೆ ಅವರಿಗೆ ಹಕ್ಕಿದೆ. ಕೇವಲ ಒಂದು ವಿಷಯವಿದೆ, ಅವರಿಗೆ ಹೇಳಬೇಕಾದ ಕರ್ತವ್ಯವಿದೆ. ಹೇಳಬೇಕಾದದ್ದು ಹೀಗಿದೆ: "ನಿಮ್ಮ ಮಿದುಳು ತಯಾರು ಮಾಡಿಕೊಳ್ಳುತ್ತಿರುವ ಹಂತದಲ್ಲಿರುವ ವಯಸ್ಸಿನಲ್ಲಿ ನೀವಿದ್ದೀರಿ, ಅದು ರೂಪುಗೊಳ್ಳುತ್ತಿದೆ, ನೀವು ಅಭ್ಯಾಸ ಮಾಡುವ ಪ್ರತಿಯೊಂದು ಹೊಸ ವಿಷಯ ನಿಮ್ಮ ಮಿದುಳಿನಲ್ಲಿ ಒಂದು ಹೆಚ್ಚಿನ ಚಿಕ್ಕ ಮಡಿಕೆಯನ್ನುಂಟು ಮಾಡುತ್ತದೆ. ಹೆಚ್ಚು ಹೆಚ್ಚಾಗಿ ಅಭ್ಯಾಸ ಮಾಡಿದ ಹಾಗೆ, ಯೋಚಿಸಿದ ಹಾಗೆ, ಚಿಂತನ ಕೈಕೊಂಡ ಹಾಗೆ, ಕಾರ್ಯ ಮಾಡಿದ ಹಾಗೆ ನಿಮ್ಮ ಮಿದುಳು ಅದರ ಚಿಕ್ಕ ಮಡಿಕೆಗಳಲ್ಲಿ ಹೆಚ್ಚು ಸಂಕೀರ್ಣ ಹಾಗೂ ಸಂಪೂರ್ಣ–ವಾಗುತ್ತದೆ. ನೀವು ತರುಣರಾಗಿರುವುದರಿಂದ ಈ ಸಮಯದಲ್ಲಿ ಅದನ್ನು ಮಾಡುವುದು ಅತ್ಯಂತ ಒಳ್ಳೆಯದಾಗಿರುತ್ತದೆ.

ಆ ಕಾರಣದಿಂದಾಗಿಯೇ ತಾರುಣ್ಯವನ್ನು ಕಲಿತುಕೊಳ್ಳುವ ಅವಧಿ ಎಂದು ಆಯ್ದುಕೊಳ್ಳುತ್ತಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ, ಏಕೆಂದರೆ ಆಗ ಅದು ಅನಂತಪಟ್ಟು ಸುಲಭವಾಗಿರುತ್ತದೆ. ಮಗು ತನ್ನ ಬಗ್ಗೆ ಕನಿಷ್ಠ ಸ್ವಲ್ಪ ಪ್ರಜ್ಞೆಯುಳ್ಳ–ದ್ದಾಗುವವರೆಗೆ ಅದನ್ನು ಒಂದು ವಿಶಿಷ್ಟ ನಿಯಮಕ್ಕೆ ಅಧೀನಗೊಳಿಸ–ಬೇಕೆಂಬುದು ಸ್ಪಷ್ಟವಾಗಿರುತ್ತದೆ, ಏಕೆಂದರೆ ತನಗಾಗಿ ಆಯ್ದುಕೊಳ್ಳುವ ಕ್ಷಮತೆ ಅದರಲ್ಲಿರುವುದಿಲ್ಲ.

**CWM, 8/178–79** **– ಶ್ರೀಮಾತೆ**

*

## ಆಯ್ಕೆ ಮಾಡಿಕೊಳ್ಳುವುದನ್ನು ಮಕ್ಕಳಿಗೆ ಕಲಿಸಿಕೊಡುವುದು

ವಯಸ್ಸು ಬಹಳ ವ್ಯತ್ಯಾಸಕ್ಕೊಳಗಾಗುತ್ತದೆ, ಅದು ಜನರ ಮೇಲೆ ಅವಲಂಬಿಸಿರುತ್ತದೆ, ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಅವಲಂಬಿಸಿರುತ್ತದೆ. ಆದಾಗ್ಯೂ ಏಳು ಹಾಗೂ ಹದಿನಾಲ್ಕು ವರ್ಷಗಳ ನಡುವಿನ ಏಳು ವರ್ಷಗಳ ಅವಧಿಯಲ್ಲಿ ಮನುಷ್ಯ ತರ್ಕಮಾಡುವ ಅವಧಿಯನ್ನು ತಲುಪಲು ಪ್ರಾರಂಭಿಸುತ್ತಾನೆ. ಅವನಿಗೆ ಸಹಾಯ ಮಾಡಿದರೆ ಏಳು ಹಾಗೂ ಹದಿನಾಲ್ಕು ವಯಸ್ಸುಗಳ ನಡುವೆ ಅವನು ತರ್ಕಮಾಡುವ ಸತ್ತೆಯಾಗಬಲ್ಲ.

ಏಳು ವರ್ಷಗಳಾಗುವುದಕ್ಕಿಂತ ಮೊದಲೇ ಪ್ರತಿಭೆಯನ್ನು ತೋರಿಸುವ ಮಕ್ಕಳಿರುತ್ತಾರೆ– ಅಲ್ಲಿ ಯಾವಾಗಲೂ ಪ್ರತಿಭೆಯುಳ್ಳ ಮಕ್ಕಳಿರುತ್ತಾರೆ– ಆದರೆ ಸರ್ವಸಾಧಾರಣ ನಿಯಮವೆಂದಾಗಿ ಮಗು ತನ್ನ ಬಗ್ಗೆ ಪ್ರಜ್ಞೆಯುಳ್ಳದ್ದಾಗಿರುವುದಿಲ್ಲ. ಕಾರ್ಯಗಳನ್ನು ಏಕೆ ಕೈಕೊಳ್ಳಬೇಕು ಹಾಗೂ ಹೇಗೆ ಮಾಡಬೇಕು ಎಂಬುದು ಅದಕ್ಕೆ ತಿಳಿದಿರುವುದಿಲ್ಲ. ಮಗುವಿನ ಲಕ್ಷ್ಯವನ್ನು ಅಭಿವೃದ್ಧಿಗೊಳಿಸುವುದಕ್ಕೆ ಸಮಯ ಅದೇ ಆಗಿರುತ್ತದೆ, ಅದು ಮಾಡುತ್ತಿರುವುದರ ಮೇಲೆ ಲಕ್ಷ್ಯಗೊಡುವುದನ್ನು ಕಲಿಸಿಕೊಡಬೇಕು, ಇಡಿಯಾಗಿ ಪಶುವಿನಂತಾಗದಿರಲು ಸಾಕಾಗುವಷ್ಟು ಆದರೆ ಮನುಕುಲಕ್ಕೆ ಸೇರಿದವನಾಗಲು ಪ್ರಾಥಮಿಕ ಬೌದ್ಧಿಕ ಅಭಿವೃದ್ಧಿಯ ಮೂಲಕ ಸಾಧ್ಯವಾಗಬೇಕು.

ಅದರ ನಂತರ, ಏಳು ವರ್ಷಗಳ ಅವಧಿಯ ಕಾಲದಲ್ಲಿ ಅದಕ್ಕೆ ಆಯ್ದುಕೊಳ್ಳುವುದನ್ನು ಕಲಿಸಿಕೊಡಬೇಕು– ಅದೇನಾಗಬಯಸುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಅದು ಸಮೃದ್ಧ, ಸಂಕೀರ್ಣ, ಸರಿಯಾಗಿ ಅಭಿವೃದ್ಧಿ ಹೊಂದಿದ, ಅದರ ಕಾರ್ಯವಿಧಾನದಲ್ಲಿ ಸಾಮರ್ಥ್ಯವಿರುವ ಜೀವನವನ್ನು ಹೊಂದಲು ಅದಕ್ಕೆ ಕಾರ್ಯ ಕೈಕೊಳ್ಳುವುದನ್ನು ಕಲಿಸಿಕೊಡಬೇಕು. ಏಕೆಂದರೆ ಕಾರ್ಯ, ಚಿಂತನೆ, ಅಭ್ಯಾಸ, ವಿಶ್ಲೇಷಣೆ ಇವೆಲ್ಲವುಗಳ ಮೂಲಕ ಮಿದುಳು ರೂಪುಗೊಳ್ಳುತ್ತದೆ. ನೀವು ಏನಾಗಬೇಕೆಂಬುದನ್ನು ತಿಳಿದುಕೊಳ್ಳಲು ನಿಮ್ಮ ಹದಿನಾಲ್ಕನೇ ವಯಸ್ಸಿನಲ್ಲಿ ತಯಾರಾಗಿರುತ್ತೀರಿ ಇಲ್ಲವೆ ತಯಾರಾಗಬೇಕು ಎಂಬುದನ್ನು ನಾನು ಹೇಳುತ್ತೇನೆ. ಸುಮಾರು ಆ ವಯಸ್ಸಿನಲ್ಲಿರುವ ಕೆಲವು ಮಕ್ಕಳು ನೇರವಾಗಿ ನಿರ್ಧರಿಸುತ್ತಾರೆ: "ಬೌದ್ಧಿಕ ಬೆಳವಣಿಗೆಯಲ್ಲಿ ನನಗೆ

ಆಸಕ್ತಿಯಿಲ್ಲ, ನಾನು ಕಲಿಯಲು ಬಯಸುವುದಿಲ್ಲ, ಸರ್ವಸಾಧಾರಣ ರೀತಿಯಲ್ಲಿ ಅಜ್ಞಾನಿಯಾಗಿ ಉಳಿದುಕೊಳ್ಳಲು ಬಯಸುತ್ತೇನೆ." ಯಾವ ಹಕ್ಕಿನಿಂದ ಅಭ್ಯಾಸ ಮಾಡುವುದನ್ನು ಅಂತಹರ ಮೇಲೆ ಹೇರಬೇಕು ಇಲ್ಲವೆ ಅವರನ್ನು ಪ್ರಮಾಣೀಕರಿಸುವುದು ಅವಶ್ಯವಾಗಿದೆಯೆ ಎಂಬುದು ನನಗೆ ಕಂಡು ಬರುತ್ತಿಲ್ಲ.

**CWM, 8/179–80** **– ಶ್ರೀಮಾತೆ**

*

**ಹಳೆಯ ವಿರೋಧ**

ಇತಿಹಾಸದಲ್ಲಿ ದಿವ್ಯಾತ್ಮವಿದೆ; ವಿಜ್ಞಾನದಲ್ಲಿ ದಿವ್ಯಾತ್ಮವಿದೆ– ದೈವೀ ಸತ್ಯ ಎಲ್ಲೆಡೆಯಲ್ಲಿದೆ. ಅವಶ್ಯವಾದದ್ದು ಏನೆಂದರೆ ಮಿಥ್ಯೆಯ ರೀತಿಯಲ್ಲಿ ಕಲಿಸದಿರು–ವುದಾಗಿದೆ ಆದರೆ ಅದನ್ನು ನಿಜವಾದ ರೀತಿಯಲ್ಲಿ ಕಲಿಸಿಕೊಡಬೇಕು.

"ಆಧ್ಯಾತ್ಮಿಕ ಜೀವನ"ವೆಂಬುದಿಲ್ಲ! ಅದು ಇನ್ನೂ ಹಳೆಯ ವಿಚಾರ, ಆಧ್ಯಾತ್ಮಿಕ ಜೀವನವನ್ನು ಪ್ರತಿನಿಧಿಸುವ ಋಷಿಯ, ಸನ್ಯಾಸಿಯ ಆಧ್ಯಾತ್ಮಿಕ ಜೀವನವನ್ನು ಪ್ರತಿನಿಧಿಸುವವನ ಹಳೆಯ ವಿಚಾರ, ಅದು ಹಾಗಿರುವಾಗ ಉಳಿದವರೆಲ್ಲರೂ ಸಾಧಾರಣ ಜೀವನವನ್ನು ಪ್ರತಿನಿಧಿಸುತ್ತಾರೆ– ಅದು ಸತ್ಯವಾದದ್ದಲ್ಲವೇ ಅಲ್ಲ. ಅವರಿಗೆ ಎರಡು ವಿಷಯಗಳ ನಡುವೆ ವಿರೋಧ ಇನ್ನೂ ಬೇಕಾಗಿದ್ದರೆ– ಏಕೆಂದರೆ ಮನಸ್ಸಿಗೆ ನೀವು ವಿರೋಧವನ್ನು ಒದಗಿಸದಿದ್ದರೆ ಅದು ಕಾರ್ಯ ಮಾಡುವುದಿಲ್ಲ– ಅವರಿಗೆ ವಿರೋಧ ಬೇಕಾಗಿದ್ದರೆ ದೈವೀಸತ್ಯ ಹಾಗೂ ಮಿಥ್ಯೆ ಇವುಗಳ ನಡುವಿರುವ ವಿರೋಧವನ್ನು ಕೈಗೆತ್ತಿಕೊಳ್ಳಲಿ, ಅದು ಸ್ವಲ್ಪ ಒಳ್ಳೆಯದಾದದ್ದು, ಅದು ಪರಿಪೂರ್ಣವಾದದ್ದು ಎಂದು ಹೇಳಲಾರೆ, ಆದರೆ ಅದು ಸ್ವಲ್ಪ ಒಳ್ಳೆಯದು. ಹೀಗೆ ಎಲ್ಲ ವಿಷಯಗಳಲ್ಲಿ ಮಿಥ್ಯೆ ಹಾಗೂ ಸತ್ಯ ಎಲ್ಲೆಡೆಯಲ್ಲಿ ಮಿಶ್ರಣಕ್ಕೊಳಗಾಗಿವೆ: "ಆಧ್ಯಾತ್ಮಿಕ ಜೀವನ" ಎಂದು ಕರೆಯುವುದರಲ್ಲಿ, ಸನ್ಯಾಸಿಗಳಲ್ಲಿ, ಸ್ವಾಮಿಗಳಲ್ಲಿ, ತಾವು ದೈವೀ ಜೀವನವನ್ನು ಪೃಥ್ವಿಯ ಮೇಲೆ ಪ್ರತಿನಿಧಿಸುತ್ತಿದ್ದೇವೆ ಎಂದು ಯೋಚಿಸುವವರಲ್ಲಿ, ಅಂತಹರೆಲ್ಲರಲ್ಲಿ ಅಲ್ಲಿಯೂ ಕೂಡ ಮಿಥ್ಯೆ ಹಾಗೂ ಸತ್ಯಗಳ ಮಿಶ್ರಣವಿರುತ್ತದೆ.

ಯಾವುದೇ ಬಗೆಯ ವಿಭಜನೆ ಮಾಡದಿರುವುದು ಹೆಚ್ಚು ಒಳ್ಳೆಯದು.

ಮಕ್ಕಳಿಗಾಗಿ, ನಿಖರವಾಗಿ ಅವರು ಮಕ್ಕಳಾಗಿರುವುದರಿಂದ ಅವರಲ್ಲಿ ಭವಿಷ್ಯತ್ತನ್ನು ಗೆದ್ದುಕೊಳ್ಳುವ ಸಂಕಲ್ಪವನ್ನು, ಮುಂದೆ ಏನಿರಬಹುದು ಎಂಬುದನ್ನು, ಮುಂದಿರುವುದರಲ್ಲಿ ಯಾವಾಗಲೂ ನೋಡುತ್ತ ತೀವ್ರಗತಿಯಿಂದ ಅದರತ್ತ ಸಾಗುವ ಸಂಕಲ್ಪವನ್ನು ತುಂಬಬೇಕು– ಆದರೆ ಅವರು ತಮ್ಮೊಡನೆ ಗತಕಾಲದ ಹೊರೆಯನ್ನು, ಇಡಿಯಾಗಿ ದಬ್ಬಾಳಿಕೆ ನಡೆಸುವ ಭಾರೀ ಜವಾಬ್ದಾರಿಯನ್ನು ಎಳೆದುಕೊಂಡು ಹೋಗಬಾರದು. ನಾವು ಪ್ರಜ್ಞೆ ಹಾಗೂ ಜ್ಞಾನಗಳಲ್ಲಿ ಉಚ್ಚಮಟ್ಟದಲ್ಲಿದ್ದಾಗ ಹಿಂದೆ ನೋಡುವುದು ಒಳ್ಳೆಯದು, ಅಲ್ಲಿ ಈ ಭವಿಷ್ಯತ್ತು ತನ್ನನ್ನು ತೋರಿಸಿ ಕೊಡಲು ಪ್ರಾರಂಭಿಸುತ್ತಿರುವ ಬಿಂದುಗಳನ್ನು ಕಂಡುಕೊಳ್ಳಬಹುದು. ಇಡೀ ಚಿತ್ರದತ್ತ ನಾವು ನೋಡಿದಾಗ, ನಮ್ಮಲ್ಲಿ ಬಹಳ ವಿಶ್ವವ್ಯಾಪಕ ದೃಷ್ಟಿಯಿದ್ದಾಗ ನಂತರ ಏನನ್ನು ಸಿದ್ಧಿಸಿಕೊಳ್ಳಲಾಗುವುದೋ ಅದನ್ನು ಮೊದಲೇ ಘೋಷಿಸಲಾಗಿರುತ್ತದೆ ಎಂಬುದನ್ನು ತಿಳಿದುಕೊಳ್ಳುವುದು ಸ್ವಾರಸ್ಯಕರವಾಗಿರುತ್ತದೆ. ಶ್ರೀ ಅರವಿಂದರು ಹೇಳಿದ್ದು ಇದೇ ರೀತಿಯದಾಗಿದೆ: ದೈವೀ ಜೀವನ ಪೃಥ್ವಿಯ ಮೇಲೆ ಪ್ರಕಟವಾಗುವುದು, ಏಕೆಂದರೆ ಅದು ಈಗಾಗಲೆ ಭೌತದ್ರವ್ಯದಲ್ಲಿ ಒಳಗೊಂಡಿದೆ. ಈ ದೃಷ್ಟಿಕೋನದಿಂದ ಹಿಂದೆ ನೋಡುವುದು, ಕೆಳಗಿದ್ದುದರತ್ತ ನೋಡುವುದು ಸ್ವಾರಸ್ಯಕರವಾಗಿರುತ್ತದೆ– ಏನು ಸಂಭವಿಸಿತ್ತು ಎಂಬುದನ್ನು ನೋಡುವುದಲ್ಲ. ಇಲ್ಲವೆ ಜನರಿಗೆ ಏನು ಗೊತ್ತಿತ್ತು ಎಂಬುದನ್ನು ನೋಡುವುದಲ್ಲ: ಅದು ಬಹಳ ನಿರುಪಯುಕ್ತವಾಗಿರುತ್ತದೆ.

ಮಕ್ಕಳಿಗೆ ಹೇಳಬೇಕು: ಅದ್ಭುತ ವಿಷಯಗಳು ಪ್ರಕಟವಾಗಲು ಅಲ್ಲಿವೆ, ಅವುಗಳನ್ನು ಸ್ವೀಕರಿಸಲು ನಿಮ್ಮನ್ನು ತಯಾರು ಮಾಡಿಕೊಳ್ಳಿರಿ. ಆಗ ಅವರು ಹೆಚ್ಚು ಮೂರ್ತರೂಪದ, ತಿಳಿದುಕೊಳ್ಳಲು ಸುಲಭವಾಗಿರುವ ಏನೋ ಒಂದನ್ನು ಬಯಸಿದರೆ ನೀವು ಅವರಿಗೆ ಹೇಳಬಹುದು: ಶ್ರೀ ಅರವಿಂದರು ಈ ವಿಷಯಗಳನ್ನು ಘೋಷಿಸಲು ಬಂದಿದ್ದರು. ನೀವು ಅವರು ಬರೆದದ್ದನ್ನು ಓದಲು ಶಕ್ತರಾದಾಗ ಅರ್ಥಮಾಡಿಕೊಳ್ಳುವಿರಿ. ಹಾಗಾಗಿ ಇದು ಅವರಲ್ಲಿ ಆಸಕ್ತಿಯನ್ನು, ಕಲಿತುಕೊಳ್ಳುವ ಬಯಕೆಯನ್ನು ಎಚ್ಚರಗೊಳಿಸುತ್ತದೆ.

**CWM, 12/401–03** **– ಶ್ರೀಮಾತೆ**

*

## ಅಭ್ಯಾಸದತ್ತ ಮನೋಭಾವ

**ಪ್ರಶ್ನೆ:** *ಶ್ರೀಮಾತೆಯವರೆ, ಈ ಪ್ರಶ್ನೆ ಮೇಲೆದ್ದು ಬರುತ್ತದೆ, ಏಕೆಂದರೆ ಶಾಲೆಯಲ್ಲಿರುವ ಅಭ್ಯಾಸ ಕ್ರಮಗಳಲ್ಲಿ ಕೆಲವೊಮ್ಮೆ ಬಹಳ ಜುಗುಪ್ಸೆ ಉಂಟಾಗುವುದನ್ನು ನಾವು ಭಾವನೆಗೆ ತಂದುಕೊಳ್ಳುತ್ತೇವೆ ಮತ್ತು ನಮ್ಮನ್ನೇ ಕೇಳುತ್ತೇವೆ: "ಇದೆಲ್ಲದರ ಉಪಯೋಗವೇನು?" ಹಾಗಾಗಿ ನಾವು ಯಾವ ಮನೋಭಾವದಿಂದ ಅಭ್ಯಾಸ ಮಾಡಬೇಕು?*

**ಶ್ರೀಮಾತೆ:** ನಾನು ಯಾವಾಗಲೂ ಹೇಳಿದ್ದೇನೆ: ವ್ಯಾಯಾಮ ಮಾಂಸಖಂಡಗಳ ಮೇಲೆ ಉಂಟುಮಾಡುವ ಪರಿಣಾಮದಂತಹದನ್ನೇ ಅಭ್ಯಾಸ ಮಾಡುವುದು ಉಂಟುಮಾಡುತ್ತದೆ. ಉದಾಹರಣೆಗೆ ಮಾನಸಿಕ ವ್ಯಾಯಾಮಗಳು ಮನುಷ್ಯನ ಮನಸ್ಸಿನ ಚಟುವಟಿಕೆಯನ್ನು ನಮ್ಯವಾಗುವಂತೆ ಮಾಡಲು, ಅದನ್ನು ಬಲಗೊಳಿಸಲು, ಸಮೃದ್ಧಿಗೊಳಿಸಲು, ಅರ್ಥ ಮಾಡಿಕೊಳ್ಳುವಿಕೆಯ ಹರಡುವಿಕೆಯನ್ನು ಅದಕ್ಕೆ ಕೊಡಲು ಬಹಳ ಅವಶ್ಯವಾಗಿರುತ್ತವೆ, ಈ ವ್ಯಾಯಾಮಗಳಿಲ್ಲದಿದ್ದರೆ ಅವೆಲ್ಲವುಗಳನ್ನು ಅದು ಹೊಂದುತ್ತಿರಲಿಲ್ಲ. ಇತ್ತೀಚೆಗೆ ನಿಜವಾಗಿ ಈಗಾಗಲೆ ಬಹಳ ಸಮಯದ ಹಿಂದೆ ನಾನು ಗಮನಿಸಿದ್ದೇನೆ, ಉದಾಹರಣೆಗೆ ನಿಮಗೆ ಏನೋ ಒಂದನ್ನು ಆಧ್ಯಾತ್ಮಿಕ ಶಬ್ದಗಳೊಂದಿಗೆ ಇಲ್ಲವೆ ಆಧ್ಯಾತ್ಮಿಕ ದೃಷ್ಟಿಕೋನದಿಂದ ನಿಮ್ಮ ಬಳಿ ಮಾತನಾಡಲು ನಾನು ಸಾಕಷ್ಟು ದುರ್ದೈವಿಯಾಗಿದ್ದರೆ ನೀವು ಅದನ್ನು ಅನುಸರಿಸಲಾರಿರಿ. ಅದು ಸರಳವಾಗಿ ಏಕೆಂದರೆ ನೀವು ತತ್ವಜ್ಞಾನದ ವ್ಯಾಯಾಮ ಮಾಡಿರುವುದಿಲ್ಲ. ನೀವು ಬುದ್ಧಿವಂತರಲ್ಲ ಎಂದಲ್ಲ, ತಿಳಿದುಕೊಳ್ಳಲು ನಿಮ್ಮಲ್ಲಿ ಕ್ಷಮತೆ ಇಲ್ಲವೆಂದಲ್ಲ: ಅದು ಏಕೆಂದರೆ ನೀವು ಯೋಗ್ಯವಾದ ವ್ಯಾಯಾಮವನ್ನು ಮಾಡಿರುವುದಿಲ್ಲ. ನಾನು ಅದೇ ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳಬಲ್ಲೆ: ನೀವು ಆ ಭಾಷೆಯನ್ನು ಕಲಿತುಕೊಂಡಿಲ್ಲ. ಆದರೆ ಅವೇ ಶಬ್ದಗಳನ್ನು ಉಪಯೋಗಿಸಲಾಗಿರುತ್ತದೆ, ಅವುಗಳ ನಡುವೆ ಭಿನ್ನ ಸಂಬಂಧವಿರುತ್ತದೆ, ಪದಗುಚ್ಛದ ಭಿನ್ನ ತಿರುವುಗಳಿರುತ್ತವೆ, ವಿಷಯಗಳನ್ನು ಕುರಿತು ಭಿನ್ನ ಮನೋಭಾವವಿರುತ್ತದೆ. ಸರಿ, ಈ ವ್ಯತ್ಯಾಸದ ಮನೋಭಾವವನ್ನು ಅದಕ್ಕನುಗುಣವಾದ ವ್ಯಾಯಾಮ ಮಾಡದೆ ಹೊಂದಲಾರಿರಿ. ಈ ಉದಾಹರಣೆಯನ್ನು ಅರ್ಥಮಾಡಿಕೊಳ್ಳುವದು ನಿಮಗೆ ಸುಲಭವಾಗಿದೆ. ಏಕೆಂದರೆ ನೀವೆಲ್ಲ ಸರಿಯಾಗಿ ತಿಳಿದುಕೊಂಡಿರುವ ಹಾಗೆ ನಿಮಗೆ ತರಬೇತು ದೊರಕಿರದಿದ್ದರೆ

ನೀವು ಎಂದಿಗೂ ನಿಮ್ಮ ಅಂಗಸಾಧನೆ ವ್ಯಾಯಾಮವನ್ನು ಮಾಡಲಾರಿರಿ. ನಿಮ್ಮಲ್ಲಿ ವಿಶಿಷ್ಟ ಯೋಗ್ಯತೆಗಳಿದ್ದಾಗಲೂ, ಸಹಜ ಪ್ರತಿಭೆಯಿದ್ದಾಗಲೂ ನೀವು ಆಚರಿಸದಿದ್ದರೆ, ನಿಮ್ಮನ್ನು ತರಬೇತಿಗೊಳಪಡಿಸದಿದ್ದರೆ ನೀವು ಅವುಗಳನ್ನು ಮಾಡಲಾರಿರಿ. ನಿಮ್ಮ ಎಲ್ಲ ಕುಶಾಗ್ರತೆಯ ವ್ಯಾಯಾಮಗಳನ್ನು ಪರಿಗಣಿಸಿರಿ, ಅವೆಲ್ಲವನ್ನು ಮೊದಲ ದಿನದಂದು ಮಾಡಿರಿ ಎಂದು ನಿಮಗೆ ಹೇಳಿದರೆ, ನೀವದನ್ನು ಮಾಡಲಾರಿರಿ. ಅದು ಬಹಳ ಅಸಾಧ್ಯವಾದ ಸಂಗತಿ ಮತ್ತು ಅದು ನಿಮಗೆ ಸರಿಯಾಗಿ ತಿಳಿದಿದೆ. ಯಾರಾದರೂ ನಿಮಗೆ ಸ್ವಯಂಪ್ರೇರಣೆಯಿಂದ "ಅಹಾ! ಈಗ ಇದನ್ನು ಮಾಡು"– ಹಾರಾಡುತ್ತ ಲಾಗ ಹಾಕುವ ಜಿಗಿತವೆಂದು ತಿಳಿಯೋಣ– ಎಂದು ಹೇಳಿದರೆ– ನೀವು ಹೇಳುತ್ತೀರಿ, "ಈ ಮನುಷ್ಯ ನಿಜವಾಗಿ ತರ್ಕಹೀನನಾಗಿದ್ದಾನೆ, ಅದು ಅಸಾಧ್ಯವಾದದ್ದು." ಸರಿ, ಇದು ಅದೇ ವಿಷಯ, ನಾನು ಕೆಲವು ಪುಸ್ತಕಗಳನ್ನು ಕೈಗೆತ್ತಿಕೊಂಡು ಅವುಗಳನ್ನು ನಿಮಗೆ ಓದಿ ಹೇಳಿದರೆ, ನೀವು ಅದನ್ನು ಅನುಸರಿಸಲಾರಿರಿ, ಏಕೆಂದರೆ ನೀವು ಸಂಪೂರ್ಣವಾಗಿ ತತ್ವಜ್ಞಾನದ ವ್ಯಾಯಾಮಗಳನ್ನು ನಿರ್ಲಕ್ಷಿಸಿರುತ್ತೀರಿ. ಇದು ನಿಖರವಾಗಿ ಅದೇ ವಿಷಯ, ಗಣಿತ ವಿಷಯವನ್ನು ಅಭ್ಯಾಸ ಮಾಡಿರದ ಯಾರೋ ಒಬ್ಬರಿಗೆ ಗಣಿತ ಶಾಸ್ತ್ರದ ತರ್ಕವನ್ನು ಅನುಸರಿಸೆಂದು ಕೇಳಿದರೆ ಅವನಿಗೆ ಅದು ಶಕ್ಯವಾಗುವುದಿಲ್ಲ ಮತ್ತು ಹಾಗಾಗಿ ನಿಮ್ಮ ಸತ್ತೆಯ ಆಳಾತಿ ಆಳದ ನೈಜತೆಯನ್ನು ಪೂರ್ತಿಯಾಗಿ, ಇಡಿಯಾಗಿ ಅಭಿವ್ಯಕ್ತಪಡಿಸಲು ಬಯಸಿದರೆ ನೀವದನ್ನು ಹೆಚ್ಚು ಸಮೃದ್ಧಿಯಿರುವ, ಸಮಗ್ರವಾಗಿರುವ, ವೈವಿಧ್ಯಮಯವಾಗಿರುವ, ಹೆಚ್ಚು ಉತ್ಪಾದಕ ರೀತಿಯಲ್ಲಿ ಅಭಿವ್ಯಕ್ತಪಡಿಸುತ್ತೀರಿ ಅದಕ್ಕಾಗಿ ನಿಮ್ಮ ಸತ್ತೆಯ ಎಲ್ಲ ಭಾಗಗಳು ಪೂರ್ತಿಯಾಗಿ ಈ ಯೋಗ್ಯವಾದ ವ್ಯಾಯಾಮಗಳಂತೆ ಅಭಿವೃದ್ಧಿ ಹೊಂದಿರಬೇಕು.

**CWM, 8/364–65** **– ಶ್ರೀಮಾತೆ**

*

ಮನುಷ್ಯ ತನ್ನ ಸ್ವಭಾವದ ಮೇಲೆ ನಿಯಂತ್ರಣ ಹೊಂದಿದವನಾದಾಗ ಮಕ್ಕಳ ಮೇಲೆ ಮನೋವೈಜ್ಞಾನಿಕ ನಿಯಂತ್ರಣವನ್ನು ಹೊಂದಲು ಅವನಿಗೆ ಸಾಧ್ಯವಾಗುವುದು.

**CWM, 12/193** **– ಶ್ರೀಮಾತೆ**

*

**ಸತ್ಯದ ಕೆಲವು ಹನಿಗಳು**

ತಪ್ಪೊಂದನ್ನು ಎಂದಿಗೂ ಮಾಡಬಾರದು.
ಕೋಪದಿಂದ ಕೆರಳುವುದು ಬೇಡ.
ಯಾವಾಗಲೂ ಅರ್ಥ ಮಾಡಿಕೊಳ್ಳಿರಿ.

ಮಗುವಿನಲ್ಲಿ ಈ ಚಲನೆಯೇಕಿದೆ, ಈ ಪ್ರಚೋದನೆಯೇಕಿದೆ, ಅದರ ಆಂತರಿಕ ದೇಹಸ್ಥಿತಿ ಹೇಗಿದೆ, ಯಾವುದನ್ನು ಬಲಪಡಿಸಬೇಕು ಹಾಗೂ ಮುಂದೆ ತರಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು– ಕೇವಲ ಇದನ್ನು ಮಾಡುವುದಿರುತ್ತದೆ ಮತ್ತು ಮಕ್ಕಳು ಅರಳಿಕೊಳ್ಳಲು ಅವರನ್ನು ಮುಕ್ತರನ್ನಾಗಿ ಬಿಟ್ಟುಕೊಡಬೇಕು ಹಾಗೆ ಬಿಟ್ಟುಕೊಡುವುದು ಸರಳವಾಗಿ ಅವರು ಹಲವಾರು ವಸ್ತುಗಳನ್ನು ನೋಡಲು ಹಾಗೂ ಸ್ಪರ್ಶಿಸಲು, ಸಾಧ್ಯವಿದ್ದಷ್ಟು ಅನೇಕ ಕಾರ್ಯಗಳನ್ನು ಕೈಕೊಳ್ಳುವುದಕ್ಕಾಗಿ ಇರುತ್ತದೆ. ಅದು ಬಹಳ ಮೋಜಿನ–ದಾಗಿರುತ್ತದೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ನಿಮಗೆ ತಿಳಿದಿದೆ ಎಂದು ನೀವು ಯೋಚಿಸುವುದನ್ನು ಅವರ ಮೇಲೆ ಹೇರಲು ಪ್ರಯತ್ನಿಸಬಾರದು. ಅವರಿಗೆ ಎಂದೂ ಬಯ್ಯಬಾರದು. ಯಾವಾಗಲೂ ಅರ್ಥಮಾಡಿಕೊಳ್ಳಬೇಕು ಮತ್ತು ಮಗು ತಯಾರಾಗಿದ್ದರೆ, ವಿವರಿಸಿ ಹೇಳಬೇಕು, ವಿವರಣೆಗೆ ಅವನು ತಯಾರಾಗಿರದಿದ್ದರೆ– ನೀವು ತಯಾರಾಗಿದ್ದರೆ ಮಿಥ್ಯೆಯ ಕಂಪನಗಳ ಸ್ಥಾನದಲ್ಲಿ ನಿಜವಾದದ್ದಿರುವಂತೆ ಬದಲು ಮಾಡಿರಿ. ಆದರೆ ಇದು ಶಿಕ್ಷಕರಿಂದ ಒತ್ತಾಯಪೂರ್ವಕವಾಗಿ ಬೇಡುವ ಪರಿಪೂರ್ಣತೆ, ಅವರಲ್ಲಿ ಅದು ಅಪರೂಪಕ್ಕೆ ಕಂಡುಬರುತ್ತದೆ.

ಆದರೆ ಶಿಕ್ಷಕರಿಗಾಗಿ ಹಾಗೂ ಅಭ್ಯಾಸದ ಒಂದು ನಿಜವಾದ ಕಾರ್ಯಕ್ರಮಕ್ಕಾಗಿ ಒಂದು ಕಾರ್ಯಕ್ರಮವನ್ನು ಮಾಡುವುದು ಸ್ವಾರಸ್ಯಕರವಾಗುವುದು, ಅದನ್ನು ತಳದಿಂದಲೇ ಪ್ರಾರಂಭಿಸಬೇಕು, ಅದು ಸಾಕಷ್ಟು ನಮ್ಯವಾಗಿರಬೇಕು, ಅಭಿಪ್ರಾಯಗಳನ್ನು ಆಳವಾಗಿ ಸ್ವೀಕರಿಸಬೇಕು. ಅವರು ಬಹಳ ತರುಣರಾಗಿದ್ದಾಗ ಅವರಿಗೆ ಸತ್ಯದ ಕೆಲವು ಹನಿಗಳನ್ನು ಕೊಟ್ಟರೆ, ಸತ್ತೆ ಬೆಳೆದ ಹಾಗೆ ಅವರು ಬಹಳ ಸ್ವಾಭಾವಿಕವಾಗಿ ಅರಳಿಕೊಳ್ಳುತ್ತಾರೆ. ಅದು ಸುಂದರವಾದ ಕಾರ್ಯವಾಗುವುದು.

**CWM, 12/405** **– ಶ್ರೀಮಾತೆ**

*

**ಮನುಷ್ಯ ಮಗುವಿಗೆ ಶಿಕ್ಷೆ ಕೊಡಬೇಕೆ?**

**ಶ್ರೀಮಾತೆ:** ಶಿಕ್ಷೆ? ಶಿಕ್ಷೆಯ ಅರ್ಥ ಏನೆಂದು ತಿಳಿದಿರುವಿರಿ? ಒಂದು ಮಗು ಕ್ಲಾಸಿನಲ್ಲಿ ಗದ್ದಲ ಮಾಡುತ್ತಿದ್ದರೆ ಮತ್ತು ಇತರರು ಕಾರ್ಯಕೈಕೊಳ್ಳುವುದಕ್ಕೆ ತಡೆ ಉಂಟು ಮಾಡುತ್ತಿದ್ದರೆ ನೀವು ಅವನಿಗೆ ಸರಿಯಾಗಿ ವರ್ತಿಸಬೇಕು ಎಂದು ಹೇಳಬೇಕು, ಮತ್ತು ಅವನು ಗದ್ದಲವನ್ನು ಮುಂದುವರಿಸಿಕೊಂಡು ಹೋದರೆ ನೀವು ಅವನನ್ನು ಕ್ಲಾಸಿನಿಂದ ಹೊರಗೆ ಕಳಿಸಬಲ್ಲಿರಿ. ಅದು ಶಿಕ್ಷೆಯಲ್ಲ, ಅದು ಅವನ ಕ್ರಿಯೆಗಳ ಸ್ವಾಭಾವಿಕ ಪರಿಣಾಮ. ಆದರೆ ಶಿಕ್ಷೆಕೊಡುವುದು! ಶಿಕ್ಷೆ ಕೊಡಲು ನಿಮಗೆ ಹಕ್ಕಿಲ್ಲ.

**CWM, 12/378** **– ಶ್ರೀಮಾತೆ**

*

**ಕ್ರೀಡೆಗಳ ಮಹತ್ವ**

**ಪ್ರಶ್ನೆ:** *ಶ್ರೀಮಾತೆಯವರೆ, ನಮ್ಮ ಪ್ರಗತಿಗಾಗಿ ಕ್ರೀಡಾಸ್ಪರ್ಧೆಗಳು ಅವಶ್ಯವಾಗಿಯೆ?*

**ಶ್ರೀಮಾತೆ:** ನೈತಿಕ ಶಿಕ್ಷಣದ ದೃಷ್ಟಿಕೋನದಿಂದ ಅವು ಹೆಚ್ಚಾಗಿ ಅವಶ್ಯವಾಗಿರುತ್ತವೆ, ಏಕೆಂದರೆ ಮನುಷ್ಯ ಸರಿಯಾದ ಮನೋಭಾವದಿಂದ ಅದರಲ್ಲಿ ಭಾಗವಹಿಸಿದರೆ ಅದು ಅಹಂಕಾರದ ಮೇಲೆ ಜಯಸಾಧಿಸುವುದಕ್ಕೆ ಒಳ್ಳೆಯ ಅವಕಾಶವಾಗುತ್ತದೆ. ಅದನ್ನು ಅವನು ತನ್ನ ದೌರ್ಬಲ್ಯದ ಮೇಲೆ, ನಿಮ್ನತರ ಚಲನೆಗಳ ಮೇಲೆ ಜಯ ಸಾಧಿಸದೆ ಪ್ರಯತ್ನ ಮಾಡಿದರೆ ಅದರಿಂದ ಲಾಭ ಹೇಗೆ ಪಡೆಯಬೇಕು ಎಂಬುದನ್ನು ಅವನು ತಿಳಿದುಕೊಂಡಿರುವುದಿಲ್ಲ, ಮತ್ತು ಅದು ಯಾವ ಒಳ್ಳೆಯದನ್ನೂ ಮಾಡುವುದಿಲ್ಲ. ಆದರೆ ಸರಿಯಾದ ಮನೋಭಾವದಿಂದ, ಯಾವುದೇ ಬಗೆಯ ನಿಮ್ನತರ ಚಲನೆಯಿಲ್ಲದೆ, ಮತ್ಸರ ಇಲ್ಲವೆ ಮಹತ್ವಾಕಾಂಕ್ಷೆ ಇಲ್ಲದೆ, ನ್ಯಾಯ ವರ್ತನೆ (fair plays) ಎಂದು ಕರೆಯಲಾದ ಮನೋಭಾವವನ್ನು ಕಾಪಾಡಿಕೊಂಡು ಎಂದರೆ ಪರಿಣಾಮ ಕುರಿತು ಚಿಂತೆ ಮಾಡದೆ ಆಡಲು ಮನುಷ್ಯನಲ್ಲಿ ಸಂಕಲ್ಪವಿದ್ದರೆ, ಯಶಸ್ಸು ದೊರಕಲಿಲ್ಲ, ವಿಷಯಗಳು ಅನುಕೂಲಕರವಾಗಲಿಲ್ಲ ಎಂಬ ಕಾರಣದಿಂದ ತಳಮಳಗೊಳ್ಳದೆ ಅವನು ಅತ್ಯಂತ ಹೆಚ್ಚಿನ ಪ್ರಯತ್ನ ಕೈಕೊಳ್ಳುವುದಾದರೆ, ಆಗ ಅದು ಬಹಳ ಉಪಯುಕ್ತವಾಗಿರುತ್ತದೆ. ಈ ಎಲ್ಲ ಸ್ಪರ್ಧೆಗಳಿಂದ ಹೆಚ್ಚಿನ ಸ್ವ–ನಿಯಂತ್ರಣ–

ದೊಂದಿಗೆ ಮತ್ತು ಪರಿಣಾಮಗಳ ಬಗ್ಗೆ ನಿರಾಸಕ್ತವಾಗಿ ಮನುಷ್ಯ ಹೊರಗೆ ಬರಬಲ್ಲ, ಇವು ಅಸಾಧಾರಣ ಚಾರಿತ್ರ್ಯವನ್ನು ರೂಪಿಸುವುದಕ್ಕೆ ಶ್ರೇಷ್ಠರೀತಿಯಲ್ಲಿ ಸಹಾಯಕವಾಗಿರುತ್ತವೆ. ಸ್ವಾಭಾವಿಕವಾಗಿ ಅದನ್ನು ನೀವು ಸಾಮಾನ್ಯ ರೀತಿಯಲ್ಲಿ, ಎಲ್ಲ ಸಾಮಾನ್ಯ ಪ್ರತಿಕ್ರಿಯೆಗಳೊಂದಿಗೆ ಹಾಗೂ ಕುರೂಪದ್ದಾಗಿರುವ ಚಲನೆಗಳೊಂದಿಗೆ ಕೈಕೊಂಡರೆ ಅದು ಯಾವುದಕ್ಕೂ ಸಹಾಯ ನೀಡುವುದಿಲ್ಲ, ಆದರೆ ಮನುಷ್ಯ ಏನನ್ನೇ ಕೈಕೊಳ್ಳಲಿ, ಕ್ರೀಡೆಗಳ ಕ್ಷೇತ್ರದಲ್ಲಾಗಲಿ ಇಲ್ಲವೆ ಬೌದ್ಧಿಕ ಕ್ಷೇತ್ರದಲ್ಲಾಗಲಿ, ಎಲ್ಲೆಡೆಯಲ್ಲಿಯೂ ಮನುಷ್ಯ ಸರ್ವಸಾಮಾನ್ಯ ರೀತಿಯಲ್ಲಿ ಕಾರ್ಯಮಾಡಿದರೆ ಸರಿ, ಅವನು ತನ್ನ ವೇಳೆಯನ್ನು ಹಾಳು ಮಾಡುತ್ತಾನೆ. ಆಟವಾಡುತ್ತಿರುವಾಗ ಕ್ರೀಡಾಪಂದ್ಯಗಳ ಪ್ರದರ್ಶನಗಳಲ್ಲಿ ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದಾಗ ಅದು ಒಳ್ಳೆಯ ಶಿಕ್ಷಣ, ಏಕೆಂದರೆ ನೀವು ವಿಶೇಷವಾದ ಪ್ರಯತ್ನ ಮಾಡಲು, ನಿಮ್ಮ ಸರ್ವಸಾಮಾನ್ಯ ಮಿತಿಗಳನ್ನು ಮೀರಿ ಹೋಗಲು ನಿಮ್ಮ ಮೇಲೆ ಅದು ಒತ್ತಾಯ ತರುತ್ತದೆ.

ಅದು (ಕ್ರೀಡೆ) ನಿಮ್ಮ ಅನೇಕ ಚಲನೆಗಳನ್ನು ಪ್ರಜ್ಞಾಪೂರ್ವಕವಾಗುವಂತೆ ಮಾಡಲು ಒಂದು ಅವಕಾಶ, ಈ ಅವಕಾಶವನ್ನು ಉಪಯೋಗಿಸದಿದ್ದರೆ ಆ ಚಲನೆಗಳು ಯಾವಾಗಲೂ ಅಪ್ರಜ್ಞೆಯಲ್ಲಿ ಉಳಿದುಕೊಂಡುಬಿಡುತ್ತವೆ. ಆದರೆ ಸ್ವಾಭಾವಿಕವಾಗಿ ಪ್ರಗತಿಗಾಗಿ ಇದು ಒಂದು ಅವಕಾಶ ಹಾಗೂ ಸಾಧನವಾಗಲೇಬೇಕು ಎಂಬುದನ್ನು ನೀವು ಮರೆಯಬಾರದು. ಆದರೆ ನಿಮ್ಮನ್ನು ಒಟ್ಟಿನಲ್ಲಿ ಸರ್ವಸಾಧಾರಣ ರೀತಿಯಲ್ಲಿ ಇರಲು ಬಿಟ್ಟುಕೊಟ್ಟು ಆಟವಾಡಲು ಹೋದಾಗ ನೀವು ಸಮಯವನ್ನು ಹಾಳು ಮಾಡುತ್ತೀರಿ, ಆದರೆ ಅದು ಪ್ರತಿಯೊಂದಕ್ಕೆ ಕೇವಲ ಇದಕ್ಕಾಗಿ ಅಲ್ಲ: ಅಭ್ಯಾಸಕ್ಕಾಗಿ, ಬೇರೆ ಯಾವುದಕ್ಕೂ ಅದೇ ರೀತಿಯದಾಗಿರುತ್ತದೆ. ಯಾವಾಗಲೂ ಪ್ರತಿಯೊಂದೂ ಕಾರ್ಯಗಳನ್ನು ಹೇಗೆ ಕೈಕೊಳ್ಳಲಾಗುತ್ತದೆ ಎಂಬುದರ ಮೇಲೆ ಅವಲಂಬಿಸಿರುತ್ತದೆ, ಮನುಷ್ಯ ಏನನ್ನು ಕೈಕೊಳ್ಳುತ್ತಾನೆ ಎಂಬುದರ ಮೇಲಲ್ಲ, ಆದರೆ ಅದನ್ನು ಹೇಗೆ ಕೈಕೊಳ್ಳುತ್ತಾನೆ ಎಂಬುದು ಮಹತ್ವದ್ದು. ನೀವೆಲ್ಲರೂ ಯೋಗಿಗಳಾಗಿದ್ದರೆ ಮತ್ತು ನೀವು ಕೈಕೊಳ್ಳುವುದೆಲ್ಲವನ್ನೂ ನಿಮ್ಮ ಅತ್ಯಂತ ಹೆಚ್ಚಿನ ಪ್ರಯತ್ನದಿಂದ ಹಾಗೂ ನಿಮ್ಮ ಅತ್ಯಂತ ಹೆಚ್ಚಿನ ಸಾಧ್ಯತೆಗಳಿಂದ ನೀವು ಸರಿಯಾದ ರೀತಿಯಿಂದ, ಅದನ್ನು ಇನ್ನೂ ಹೆಚ್ಚು ಒಳ್ಳೆಯ ರೀತಿಯಿಂದ ಮಾಡಬೇಕು ಎಂದು ಕೈಕೊಂಡಿದ್ದರೆ ಆಗ

ಸ್ಪಷ್ಟವಾಗಿ ಸ್ಪರ್ಧೆಗಳ, ಪಾರಿತೋಷಕಗಳ ಬಹುಮಾನಗಳ ಆವಶ್ಯಕತೆ ಇರುವುದಿಲ್ಲ; ಆದರೆ ಶ್ರೀ ಅರವಿಂದರು ಬರೆದ ಹಾಗೆ ಚಿಕ್ಕಮಕ್ಕಳು ಯೋಗಿಗಳಾಗಿರಲಿ ಎಂದು ನಿರೀಕ್ಷೆ ಮಾಡಲಾಗುವುದಿಲ್ಲ ಮತ್ತು ತಯಾರು ಮಾಡಿಕೊಳ್ಳುವ ಕಾಲದಲ್ಲಿ ಒಂದು ಉದ್ದೀಪನ (stimulas) ಅವಶ್ಯವಾಗಿರುತ್ತದೆ, ಆ ಉದ್ದೀಪನ ಭೌತಿಕ ಪ್ರಜ್ಞೆಯ ಪ್ರಗತಿಗಾಗಿ ಪ್ರಯತ್ನ ಮಾಡುವುದಕ್ಕೆ ಅವಶ್ಯವಾಗಿರುತ್ತದೆ. ಈ ಬಾಲ್ಯದ ಅವಧಿ ಬಹಳ ವರ್ಷಗಳ ಕಾಲ ಉಳಿದುಕೊಳ್ಳಬಹುದು. ಆದರ್ಶವನ್ನು ಕುರಿತಾಗಿ ನಾನು ಬುಲೆಟಿನ್ 1ರಲ್ಲಿ ನಿಖರವಾಗಿ ಬರೆದಿದ್ದೇನೆ. ನೀವದನ್ನು ಓದಿರುವಿರೋ ಇಲ್ಲವೋ ನನಗೆ ತಿಳಿಯದು.

ಆದರೆ ನಾನು ಬರೆದದ್ದು ಹೀಗಿದೆ:

ಮಹತ್ವಾಕಾಂಕ್ಷೆ ಹೊಂದಿರುವುದು ಬೇಡ,
ಎಲ್ಲದಕ್ಕಿಂತ ಹೆಚ್ಚಾಗಿ ಯಾವುದೇ ಬಗೆಯ ನಟನೆ ಇರಬಾರದು,
ಆದರೆ ಪ್ರತಿಯೊಂದು ಕ್ಷಣ
ನಿಮಗೆ ಸಾಧ್ಯವಾಗಬಹುದಾದಷ್ಟು ಅತ್ಯಂತ ಹೆಚ್ಚಿನ
ರೀತಿಯಲ್ಲಿ ನೀವು ಇರಬೇಕು.

ಸಮಗ್ರ ಜೀವನದಲ್ಲಿ–ಮನುಷ್ಯ ಏನನ್ನೇ ಕೈಕೊಳ್ಳಲಿ ಅದು ಆದರ್ಶ ಸ್ಥಿತಿ. ಅವನು ಅದನ್ನು ಅರಿವಿಗೆ ತಂದುಕೊಂಡರೆ, ಸರಿ ಮನುಷ್ಯ ನಿಶ್ಚಿತವಾಗಿ ಪರಿಪೂರ್ಣತೆಯ ಮಾರ್ಗದಲ್ಲಿ ಬಹಳ ದೂರ ಸಾಗಿ ಹೋಗಿರುತ್ತಾನೆ. ಆದರೆ ಸ್ಪಷ್ಟವಾಗಿ ಇದನ್ನು ಎಲ್ಲ ನಿಷ್ಕಾಪಟ್ಯದಿಂದ ಕೈಕೊಳ್ಳಲು ಒಂದಿಷ್ಟು ಆಂತರಿಕ ಪೂರ್ತಿ ಬೆಳವಣಿಗೆ(maturity) ಅವಶ್ಯವಾಗಿರುತ್ತದೆ. ಇದನ್ನು ನೀವು ನಿಮಗಾಗಿ ಒಂದು ಕಾರ್ಯಕ್ರಮ ಎಂದಿರಿಸಿಕೊಳ್ಳಬಹುದು.

**CWM, 9/97–98** **– ಶ್ರೀಮಾತೆ**

*

**ತರ್ಕದ ಉಪಯೋಗ**

ಸರಿ, ಇದನ್ನು ತಪ್ಪಿಸಿಕೊಳ್ಳಲು ನಿಮಗೆ ಹೇಳಲಾಗುತ್ತದೆ, ನಿಮ್ಮ ಮಿದುಳು ರೂಪುಗೊಳ್ಳುವುದು ನಡೆದಿರುವಾಗ “ಇಂತಹ ರೂಢಿಗಳಿಂದ, ಗುಣಗಳಿಂದ

ಅದು ರೂಪು ತಾಳುವುದಕ್ಕೆ ಅನುವು ಮಾಡಿಕೊಡುವುದರ ಬದಲಾಗಿ, ಅದಕ್ಕೆ ಸ್ವಲ್ಪ ಕರಾರುವಾಕ್ಕಾಗಿರುವಿಕೆ, ನಿಖರತೆ, ಆಯ್ದುಕೊಳ್ಳುವುದಕ್ಕೆ, ನಿರ್ಧರಿಸುವುದಕ್ಕೆ ವಿಷಯಗಳನ್ನು ಕ್ರಮಬದ್ಧವಾಗಿ ಇರಿಸುವಿಕೆಗೆ ಏಕಾಗ್ರತೆಗಾಗಿ ಕ್ಷಮತೆ ಇವೆಲ್ಲವುಗಳಿಗೆ ಅನುವು ಮಾಡಿಕೊಡಿರಿ, ನಿಮ್ಮ ತರ್ಕವನ್ನು ಉಪಯೋಗಿಸಲು ಪ್ರಯತ್ನಿಸಿರಿ."

ಸಹಜವಾಗಿ ತರ್ಕ ಮನುಷ್ಯನ ಪರಮೋಚ್ಚ ಸಾಮರ್ಥ್ಯವಲ್ಲ ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಲಾಗಿದೆ ಮತ್ತು ಅದನ್ನು ಮೀರಿಹೋಗಬೇಕು, ಆದರೆ ನೀವು ಅದನ್ನು ಹೊಂದಿರದಿದ್ದರೆ ನೀವು ಒಟ್ಟಿನಲ್ಲಿ ಅಸಂಬದ್ಧ ಜೀವನವನ್ನು ಜೀವಿಸುತ್ತೀರಿ ಎಂಬುದು ಸ್ಪಷ್ಟವಿದೆ, ತರ್ಕಬದ್ಧವಾಗಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಕೂಡ ನೀವು ತಿಳಿದಿರುವುದಿಲ್ಲ. ಕನಿಷ್ಠ ವಿಷಯ ಕೂಡ ನಿಮ್ಮನ್ನು ಸಂಪೂರ್ಣವಾಗಿ ಪಲ್ಲಟಿಸು (upset)ತ್ತದೆ, ನಿಮಗೆ ಅದು ಹೇಗಾಯಿತು ಎಂಬುದು ಕೂಡ ತಿಳಿದಿರುವುದಿಲ್ಲ ಮತ್ತು ಅದಕ್ಕೂ ಹೆಚ್ಚಾಗಿ ಅದಕ್ಕೆ ಉಪಾಯ ತಿಳಿದಿರುವುದಿಲ್ಲ. ಅದು ಹಾಗಿರುವಾಗ ಯಾರೋ ಒಬ್ಬರು ಕ್ರಿಯಾಶೀಲ, ಸ್ಪಷ್ಟವಾಗಿರುವ ತರ್ಕಮಾಡುವಿಕೆಯನ್ನು ತನ್ನೊಳಗೆ ಸ್ಥಾಪಿಸಿಕೊಂಡವನಾಗಿದ್ದರೆ ಎಲ್ಲ ಬಗೆಯ ಆಕ್ರಮಣಗಳನ್ನು ಎದುರಿಸಬಲ್ಲನು, ಆ ಆಕ್ರಮಣಗಳು ಭಾವನಾತ್ಮಕವಾಗಿರಬಹುದು, ಯಾವುದೇ ಬಗೆಯ ಪೀಡೆಯಿಂದಾಗಿರಬಹುದು, ಏಕೆಂದರೆ ಜೀವನವನ್ನು ಸಂತೋಷವಿಲ್ಲದಿರುವಿಕೆ, ಕೋಪೋದ್ರೇಕ ಇಂತಹ ವಿಷಯಗಳಿಂದ ಮಾಡಲಾಗಿದೆ– ಅವು ಚಿಕ್ಕವಾಗಿರಬಹುದು, ಆದರೆ ಅವು ಅವುಗಳನ್ನು ಭಾವನೆಗೆ ತಂದುಕೊಳ್ಳುವವನ ಪ್ರಮಾಣದಲ್ಲಿರುತ್ತವೆ ಮತ್ತು ಸ್ವಾಭಾವಿಕವಾಗಿ ಅವು ದೊಡ್ಡವೆಂಬ ಭಾವನೆ ಅವನಿಗೆ ಬರಬಹುದು. ಸರಿ, ತರ್ಕ ಸ್ವಲ್ಪ ಹಿಂದೆ ಸರಿದು ನಿಂತುಕೊಳ್ಳಬಲ್ಲದು, ಅದರತ್ತ ನೋಡಿ ಮುಗುಳ್ನಗೆ ಬೀರಿ ಹೇಳಿರಿ: "ಓಹ್! ಇಲ್ಲ ಇಂತಹ ಚಿಕ್ಕ ವಿಷಯ ಕುರಿತು ಮನುಷ್ಯ ಗಲಿಬಿಲಿ ಮಾಡಿಕೊಳ್ಳಬಾರದು."

ನಿಮ್ಮಲ್ಲಿ ತರ್ಕವಿರದಿದ್ದರೆ ನೀವು ಬಿರುಗಾಳಿಗೊಳಗಾದ ಸಮುದ್ರದ ಮೇಲೆ ಒಂದು ಬೆಂಡಿ(cork)ನಂತಿರುತ್ತೀರಿ. ಬೆಂಡು ಅದರ ಸ್ಥಿತಿಯಿಂದ ವೇದನೆಗೆ ಒಳಗಾಗುತ್ತದೆಯೋ ಎಂಬುದು ನನಗೆ ತಿಳಿದಿಲ್ಲ. ಆದರೆ ಅದು ಬಹಳ ಸಂತೋಷದಿಂದಿರುತ್ತದೆ ಎಂದು ನನಗನಿಸುವುದಿಲ್ಲ.

ಈಗ ನಾನಿದೆಲ್ಲವನ್ನು ನಿಮಗೆ ಹೇಳಿದ ನಂತರ– ಅದನ್ನು ಕೇವಲ ಒಂದು ಸಲವಲ್ಲ, ಹಲವಾರು ಸಲ ಹೇಳಿದ್ದೇನೆ ಎಂದು ನನಗನಿಸುತ್ತದೆ ಮತ್ತು ನಿಮಗೆ ಇಷ್ಟವಾದರೆ ಎಷ್ಟು ಸಲ ಬೇಕೋ ಅಷ್ಟು ಸಲ ಅದನ್ನು ಮತ್ತೆ ಹೇಳಲು ತಯಾರಾಗಿದ್ದೇನೆ. ಇದನ್ನು ಹೇಳಿದ ನಂತರ ನೀವು ಬಿರುಗಾಳಿಗೊಳಗಾದ ಸಮುದ್ರದ ಮೇಲಿರುವ ಬೆಂಡಿನಂತಾಗಲು ಆಯ್ದುಕೊಳ್ಳುವುದಕ್ಕೆ ಇಲ್ಲವೆ ನೀವು ಹೋಗಬೇಕೆಂದಿರುವಲ್ಲಿಗೆ ನಡೆದು ಹೋಗಲು ಶಕ್ತರಾಗುವುದಕ್ಕೆ ಸ್ಪಷ್ಟ, ನಿಖರವಾದ ಗ್ರಹಿಕೆ ಹಾಗೂ ಶಕ್ತರಾಗಲು ವಿಷಯಗಳ ಬಗ್ಗೆ ಸಾಕಷ್ಟು ಜ್ಞಾನ ಇವುಗಳನ್ನು ಹೊಂದಬೇಕೋ ಎಂಬುದನ್ನು ಆಯ್ಕೆಮಾಡಿಕೊಳ್ಳುವುದನ್ನು ನಿಮಗೆ ಮುಕ್ತವಾಗಿರಿಸಲಾಗಿದೆ. ಮನುಷ್ಯ ಆಯ್ದುಕೊಂಡ ಮಾರ್ಗವನ್ನು ಅನುಸರಿಸುವುದಕ್ಕೆ ಶಕ್ತನಾಗಲು ಅತ್ಯಗತ್ಯವಾದ ಸ್ಪಷ್ಟತೆಯೊಂದಿದೆ.

ನೀವು ವಿದ್ವಾಂಸ (scholar)ರಾಗಬೇಕೆಂಬುದನ್ನು ಕುರಿತು ನಾನು ಎಳ್ಳಷ್ಟೂ ಉತ್ಸುಕಳಾಗಿಲ್ಲ, ಅದರಿಂದ ಬಹಳ ದೂರವಿದ್ದೇನೆ. ಏಕೆಂದರೆ ಆಗ ಮನುಷ್ಯ ಇನ್ನೊಂದು ಕಟ್ಟಕಡೆಯ ತುದಿಯಲ್ಲಿ ಪತನಗೊಳ್ಳುತ್ತಾನೆ ಮತ್ತು ತನ್ನ ತಲೆಯನ್ನು ಎಷ್ಟೋ ವಿಷಯಗಳಿಂದ ತುಂಬಿಕೊಳ್ಳುತ್ತಾನೆ, ಅದರಿಂದಾಗಿ ಅಲ್ಲಿ ಉಚ್ಚತರ ಪ್ರಕಾಶಕ್ಕಾಗಿ ಸ್ಥಾನವಿರುವುದಿಲ್ಲ, ಆದರೆ ಬೆಂಡಿನಂತಾಗದೆ ಇರುವುದಕ್ಕೆ ಸರಿ, ಅತ್ಯಗತ್ಯವಾದ ಕನಿಷ್ಠಮಟ್ಟದ್ದು ಅಲ್ಲಿರುತ್ತದೆ.

**CWM, 8/182–83** **– ಶ್ರೀಮಾತೆ**

*

**ವ್ಯಾಸಂಗ (course)ಕ್ಕಾಗಿ ತಯಾರಿ**

**ಪ್ರಶ್ನೆ:** *ಶಾಲೆಯಲ್ಲಿ ವ್ಯಾಸಂಗವೊಂದನ್ನು ಒಂದು ವರ್ಷದಲ್ಲಿ ಮುಗಿಸುವುದಿರುತ್ತದೆ. ವಿದ್ಯಾರ್ಥಿ ಒಂದು ಪ್ರಶ್ನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಮೊದಲು ಅವನು ಮುಂದಿನ ಪ್ರಕರಣಕ್ಕೆ ಹೋಗಬೇಕಾಗುತ್ತದೆ.*

**ಶ್ರೀಮಾತೆ:** ನನ್ನ ಮಗು, ನೀನು ಹೇಳಿದ್ದನ್ನು ನಾನು ಪೂರ್ತಿ ಒಪ್ಪಿಕೊಳ್ಳುತ್ತೇನೆ. ಅದು ಬಹಳ ಸರಿಯಾಗಿಲ್ಲ. ಆದರೆ ಅದೆಲ್ಲವನ್ನು ಬದಲಿಸಲು ನಾವು ಪ್ರಯತ್ನ ಮಾಡುತ್ತೇವೆ, ಏಕೆಂದರೆ ವಿದ್ಯಾರ್ಥಿ ಒಂದು ವರ್ಷದಲ್ಲಿ ಒಂದು ಪುಸ್ತಕವನ್ನು ಅಂತೂ ಮುಗಿಸಲೇಬೇಕೆಂಬುದು ಏಕೆ ಎಂಬುದು ನನಗೆ ತಿಳಿಯುತ್ತಿಲ್ಲ.

ವಿದ್ಯಾರ್ಥಿ ಒಂದು ಪ್ರಕರಣವನ್ನು ಮನಸ್ಸಿನಿಂದ ಪೂರ್ತಿ ಗ್ರಹಿಸುವವರೆಗೆ ಬಿಟ್ಟುಕೊಡಬಾರದು, ನಂತರ ಮಾತ್ರ ಮುಂದಿನದನ್ನು ಕೈಗೆತ್ತಿಕೊಳ್ಳಬೇಕು ಇತ್ಯಾದಿ. ಒಂದು ಪ್ರಕರಣವನ್ನು ಅಭ್ಯಾಸ ಮಾಡಿ ಮುಗಿಸಿದ ನಂತರ ಅದು ಮುಗಿದು ಹೋಗಿರುತ್ತದೆ, ಅದನ್ನು ಮುಗಿಸಲಾಗದಿದ್ದರೆ ಅದು ಮುಗಿದಿರುವುದಿಲ್ಲ. ಇರುವ ಸತ್ಯವೆಂದರೆ ಶಿಕ್ಷಕ ಕಲಿಸುವ ವ್ಯಾಸಂಗದ ಭಾಗವನ್ನು ಒಂದು ಪಠ್ಯಪುಸ್ತಕದ ಆಧಾರದಿಂದ ತೆಗೆದುಕೊಳ್ಳದೆ ತಾನೇ ಅದನ್ನು ತಯಾರುಮಾಡುವ ತೊಂದರೆ ತೆಗೆದುಕೊಳ್ಳಬೇಕು. ಅವನು ಸಾಕಷ್ಟು ತಿಳಿದುಕೊಂಡಿರಬೇಕು ಮತ್ತು ದಿನದಿಂದ ದಿನಕ್ಕೆ ತಾನು ಕಲಿಸುವ ವ್ಯಾಸಂಗದ ಭಾಗವನ್ನು ಸಾಕಾಗುವಷ್ಟು ತಯಾರಿಸುವ ತೊಂದರೆ ತೆಗೆದುಕೊಳ್ಳಬೇಕು ಮತ್ತು ಈ ರೀತಿಯಲ್ಲಿ ಕನಿಷ್ಠಪಕ್ಷ ತನ್ನ ಕ್ಲಾಸಿನಲ್ಲಿ ಸದಭಿರುಚಿಯುಳ್ಳ ವಿದ್ಯಾರ್ಥಿಗಳು ಅರ್ಥಮಾಡಿಕೊಂಡಿದ್ದಾರೆ– ಎಲ್ಲರೂ ಅರ್ಥಮಾಡಿಕೊಂಡಿರುತ್ತಾರೆ ಎಂದು ನಾನು ಹೇಳುವುದಿಲ್ಲ, ಏಕೆಂದರೆ ಅದು ಅಸಾಧ್ಯವಾದದ್ದು– ಎಂದು ಒಂದು ವಿಷಯವನ್ನು ಮುಕ್ತಾಯ–ಗೊಳಿಸಬಹುದು. ನಂತರ ಮುಂದಿನ ವಿಷಯವನ್ನು ಕೈಗೆತ್ತಿಕೊಳ್ಳಲಾಗುವುದು ಮತ್ತು ಅದು ಮುಂದುವರಿದುಕೊಂಡು ಹೋದರೆ ಒಂದು ವಿಶಿಷ್ಟ ವಿಷಯ ಒಂದು ವರ್ಷದ ಬದಲಾಗಿ ಎರಡು ವರ್ಷ ವಿಸ್ತರಿಸಿಕೊಂಡು ಹೋದರೆ ಇಲ್ಲವೆ ಎರಡು ವರ್ಷದ ಬದಲಾಗಿ ಒಂದೂವರೆ ವರ್ಷ ತೆಗೆದುಕೊಂಡರೆ ಅದು ಮಹತ್ವದ ವಿಷಯವಲ್ಲ, ಏಕೆಂದರೆ ಅದು ಶಿಕ್ಷಕನದೇ ಉತ್ಪಾದನೆಯಾಗಿರುತ್ತದೆ, ಅವನು ಬರೆದ ಅವನದೇ ವ್ಯಾಸಂಗದ ವಿಷಯ ಮತ್ತು ಅವನು ಕ್ಲಾಸಿನ ಆವಶ್ಯಕತೆಗನುಗುಣವಾಗಿ ಬರೆದದ್ದಾಗಿರುತ್ತದೆ. ಅದು ನನ್ನ ಕಲಿಸಿಕೊಡುವುದರ ಕಲ್ಪನೆ, ಈಗ ನಿಜವಾಗಿ ಅದರದೇ ತೊಂದರೆಗಳಿರುತ್ತವೆ. ಆದರೆ ಅದು ಕಾರ್ಯಕೈಕೊಳ್ಳುವುದರ ನಿಜವಾದ ರೀತಿ. ಏಕೆಂದರೆ ಒಂದು ಪುಸ್ತಕವನ್ನು ಕೈಗೆತ್ತಿಕೊಂಡು ಅನುಸರಿಸಿಕೊಂಡು ಹೋಗುವುದು, ಅದು ವಿದ್ಯಾರ್ಥಿಗಳಿಗೆ ಬಹಳ ಒಳ್ಳೆಯ ರೀತಿಯಲ್ಲಿ ಹೊಂದಿಕೊಂಡು ಹೋಗದೆ ಇರಬಹುದು. ವ್ಯಾಸಂಗದ ಒಂದು ವಿಶಿಷ್ಟ ವಿಷಯ ಎಲ್ಲ ವಿದ್ಯಾರ್ಥಿಗಳಿಗೆ ಹೊಂದಿಕೊಂಡು ಹೋಗುತ್ತದೆ ಎಂದು ನಾನು ಹೇಳುವುದಿಲ್ಲ. ಎಲ್ಲರನ್ನೂ ತೃಪ್ತಿಪಡಿಸುವುದು ಅಸಾಧ್ಯವಾದದ್ದು. ಆದರೆ ಪ್ರಯತ್ನ ಮಾಡಲು ಬಯಸುವ ಕೆಲವು ಜನರಿದ್ದಾರೆ, ಇವರನ್ನೇ ನೀವು ಪರಿಗಣಿಸಲೇಬೇಕು. ಆಲಸಿಗಳು, ಅರೆನಿದ್ರೆಯ ಸ್ಥಿತಿಯಲ್ಲಿ–ರುವವರು, ಮೈಗಳ್ಳರು ಆದವರನ್ನು ಅವರ ಆಲಸ್ಯತನಕ್ಕೆ ಅರೆನಿದ್ರೆಯ ಸ್ಥಿತಿಗೆ,

ಮೃಗಳತನಕ್ಕೆ ಬಿಟ್ಟುಕೊಡಬೇಕು. ಏನೋ ಒಂದು ಅವರನ್ನು ಸಾಕಷ್ಟು ಅಲುಗಾಡಿಸುವವರೆಗೆ ಹಾಗೂ ಎಚ್ಚರಿಸುವವರೆಗೆ ಅವರು ನಿದ್ರೆ ಮಾಡುತ್ತಿರಲಿ! ಆದರೆ ಸ್ವಾರಸ್ವಕರವಾದದ್ದೇನೆಂದರೆ ಕ್ಲಾಸೊಂದರಲ್ಲಿ ಕಲಿತುಕೊಳ್ಳಲು ಇಚ್ಛೆಪಡುವ ಭಾಗವೊಂದಿರುತ್ತದೆ, ಅವರು ನಿಜವಾಗಿಯೂ ಕಲಿತುಕೊಳ್ಳಲು ಬಯಸುತ್ತಾರೆ ಮತ್ತು ಅಂತಹರಿಗಾಗಿ ಕ್ಲಾಸನ್ನು ನಡೆಸಿಕೊಂಡು ಹೋಗಬೇಕು. ಸದ್ಯದ ಶಿಕ್ಷಣ ಪದ್ಧತಿಯ ವಿಧಾನ ಒಂದು ಬಗೆಯ ಸಮಮಟ್ಟಗೊಳಿಸುವುದಾಗಿದೆ ಎಂಬುದು ನಿಮಗೆ ಕಂಡುಬರುತ್ತಿಲ್ಲವೆ? ಪ್ರತಿಯೊಬ್ಬನೂ ಒಂದೇ ಮಟ್ಟದಲ್ಲಿರಬೇಕು. ಹಾಗಾಗಿ ಯಾವ ಮಿದುಳುಗಳು ಉಚ್ಚಮಟ್ಟದಲ್ಲಿರುವವೋ ಅಂತಹವನ್ನು ಕಡಿದು ತೆಗೆಯಬೇಕು, ಯಾವ ಮಿದುಳುಗಳು ಬಹಳ ಚಿಕ್ಕ ಮಟ್ಟದಲ್ಲಿರುವವೋ ಅಂತಹವನ್ನು ಮೇಲಕ್ಕೆ ದೂಡಬೇಕು. ಆದರೆ ಅದು ಯಾವ ಒಳ್ಳೆಯದನ್ನೂ ಮಾಡುವುದಿಲ್ಲ. ಶಿಕ್ಷಕ ಮೇಲೆದ್ದು ಬರುವವರ ಕಾಳಜಿ ವಹಿಸಬೇಕು, ಇತರರು ತಮಗೆ ಸಾಧ್ಯವಿದ್ದಷ್ಟನ್ನು ತೆಗೆದುಕೊಳ್ಳುತ್ತಾರೆ ಮತ್ತು ಪ್ರತಿಯೊಬ್ಬನೂ ಅದೇ ವಿಷಯವನ್ನು ತಿಳಿದುಕೊಳ್ಳುವ ಆವಶ್ಯಕತೆ ಇರುವುದು ನನಗೆ ಕಂಡುಬರುತ್ತಿಲ್ಲ– ಏಕೆಂದರೆ ಅದು ಸಾಮಾನ್ಯ ರೀತಿಯದಾಗಿರುವುದಿಲ್ಲ. ಆದರೆ ತಿಳಿದುಕೊಳ್ಳಲು ಬಯಸುವವರಿಗೆ, ತಿಳಿದುಕೊಳ್ಳಬಲ್ಲವರಿಗೆ, ಕಾರ್ಯಮಾಡಬೇಕಾದ ಎಲ್ಲರಿಗೆ ಕಾರ್ಯಕೈಕೊಳ್ಳಲು ಸಾಧ್ಯವಿದ್ದ ಎಲ್ಲ ಸಾಧನವನ್ನು ಕೊಡಬೇಕು, ಅವರಿಗೆ ಯಾವಾಗಲೂ ಹೊಸ ಆಹಾರವನ್ನು ಕೊಡುತ್ತಿರಬೇಕು. ಹಸಿದುಕೊಂಡವರು ಅವರು, ಅವರನ್ನು ಉಣಿಸಬೇಕು. ಅಹಾ! ನನಗೆ ಸಮಯವಿದ್ದರೆ ಒಂದು ಕ್ಲಾಸಿಗೆ ಕಲಿಸಿಕೊಡುತ್ತಿದ್ದೆ. ಅದು ನನಗೆ ಹೆಚ್ಚು ಸ್ವಾರಸ್ಯಕರವಾಗಿರುತ್ತಿತ್ತು, ಕಲಿಸುವುದನ್ನು ಹೇಗೆ ಮಾಡಬೇಕು ತೋರಿಸಿಕೊಡಬಹುದಾಗಿತ್ತು. ಆದರೆ ಒಂದೇ ಸಮಯದಲ್ಲಿ ಎಲ್ಲೆಡೆಯಲ್ಲಿಯೂ ಇರುವುದನ್ನು ಮನುಷ್ಯ ಕೈಕೊಳ್ಳಲಾರ!

**CWM, 5/105–06** **– ಶ್ರೀಮಾತೆ**

*

**ಹಳತಾಗಿ ಹೋದ ಪರೀಕ್ಷೆಗಳು**

ವಿದ್ಯಾರ್ಥಿಗಳು ಬುದ್ಧಿವಂತರಾಗಿದ್ದಾರೆಯೋ, ಇಷ್ಟಪಡುವವರಾಗಿ–ದ್ದಾರೆಯೋ, ಲಕ್ಷ್ಯಕೊಡುವವರಾಗಿದ್ದಾರೆಯೋ ಎಂಬುದನ್ನು ತಿಳಿದುಕೊಳ್ಳಲು ಪರೀಕ್ಷೆಗಳು ಹಳತಾದ, ಪರಿಣಾಮಕಾರಿಯಾಗದ ರೀತಿಯವು ಎಂದು ನಾನು

ಕಂಡುಕೊಳ್ಳುತ್ತಿದ್ದೇನೆ. ತೀರ ಪೆದ್ದ, ಯಾಂತ್ರಿಕ ಸ್ವರೂಪದ ಮನಸ್ಸು, ಅದರ ನೆನಪಿನ ಶಕ್ತಿ ಒಳ್ಳೆಯದಾಗಿದ್ದರೆ ಪರೀಕ್ಷೆಯಲ್ಲಿ ಒಳ್ಳೆಯ ರೀತಿಯಲ್ಲಿ ಉತ್ತರ ಕೊಡುವಂತೆ ಮಾಡಬಹುದು. ಆದರೆ ಭವಿಷ್ಯತ್ತಿನ ಮನುಷ್ಯ ಹೊಂದಿರಬೇಕಾದ ಗುಣಗಳಲ್ಲಿ ಇವು ನಿಶ್ಚಿತವಾಗಿ ಒಳ್ಳೆಯವುಗಳಲ್ಲ ಹಳೆಯ ರೂಢಿಗಳನ್ನು ಸಹಿಸಿಕೊಳ್ಳುವುದರ ಮೂಲಕ ಪರೀಕ್ಷೆಗಳನ್ನು ಬಯಸುವವರು ಅವುಗಳನ್ನು ಎದುರಿಸಲಿ ಎಂದು ನಾನು ಅನುಮತಿ ನೀಡಿದ್ದೆ. ಆದರೆ ಭವಿಷ್ಯತ್ತಿನಲ್ಲಿ ಈ ವಿನಾಯಿತಿ ಅವಶ್ಯವಾಗುವುದಿಲ್ಲ ಎಂಬ ಭರವಸೆ ತಾಳಿದ್ದೇನೆ. ಪರೀಕ್ಷೆಗಳನ್ನು ರದ್ದುಗೊಳಿಸಿದಾಗ ಒಬ್ಬ ವಿದ್ಯಾರ್ಥಿ ಒಳ್ಳೆಯವನಾಗಿದ್ದಾನೆ ಎಂಬುದನ್ನು ತಿಳಿದುಕೊಳ್ಳಲು ಶಿಕ್ಷಕನಿಗೆ ಸ್ವಲ್ಪ ಹೆಚ್ಚಿನ ಆಂತರಿಕ ಸಂಪರ್ಕ ಹಾಗೂ ಮನೋವೈಜ್ಞಾನಿಕ ಜ್ಞಾನ ಅವಶ್ಯವಾಗಿರುತ್ತವೆ. ಆದರೆ ನಮ್ಮ ಶಿಕ್ಷಕರು ಯೋಗಾಚರಣೆ ಮಾಡಲಿ ಎಂದು ನಿರೀಕ್ಷೆ ಮಾಡಲಾಗಿರುತ್ತದೆ, ಹಾಗಾಗಿ ಇದು ಅವರಿಗೆ ಕಠಿಣವಾಗದೆ ಇರಬಹುದು.

**CWM, 12/201** **– ಶ್ರೀಮಾತೆ**

*

**ಪ್ರಶ್ನೆ:** *ಶ್ರೀಮಾತೆಯವರೆ, ಮುಂದಿನ ವರ್ಷದಿಂದ ಎಲ್ಲ ಮಕ್ಕಳು ಅವರ ಮಾತೃಭಾಷೆಗೆ ಅಧಿಕವಾಗಿ ಸಂಸ್ಕೃತ ಕಲಿಯುವಂತೆ ಮಾಡಬೇಕು ಎಂಬುದನ್ನು ಕುರಿತು ನಾವು ಯೋಚಿಸುತ್ತಿದ್ದೇವೆ.*

**ಶ್ರೀಮಾತೆ:** ಹೌದು. ವಿದ್ಯಾರ್ಥಿಗಳನ್ನು ವಿದ್ವಾಂಸರನ್ನಾಗಿ ಮಾಡಬೇಕೆಂಬ ದೃಷ್ಟಿಕೋನದಿಂದಲ್ಲ.– ಅದನ್ನು ಹೇಗಿರಿಸಬೇಕು ಎಂಬುದು ನಿಮಗೆ ತಿಳಿದಿದೆಯೆ? ಅದು ಭಾರತದಲ್ಲಿಯ ಎಲ್ಲ ಭಾಷೆಗಳಿಗೆ ದ್ವಾರವನ್ನು ತೆರೆದಿರಿಸುತ್ತದೆ. ಅದು ಅತ್ಯಗತ್ಯವಾಗಿದೆ ಎಂದು ನನಗನಿಸುತ್ತದೆ. ಆದರ್ಶ ಏನಾಗುವುದಿದೆ ಎಂದರೆ ಕೆಲವೇ ವರ್ಷಗಳಲ್ಲಿ ಭಾರತದ ಪ್ರಾತಿನಿಧಿಕ ಭಾಷೆಯೆಂದಾಗಿ ಪುನರುಜ್ಜೀವನ–ಗೊಳಿಸಿದ ಸಂಸ್ಕೃತವನ್ನು ಹೊಂದುವಂತಾಗಬೇಕು; ಎಂದರೆ ಎಲ್ಲ ಭಾಷೆಗಳ ಹಿಂದಿರುವ ಸಂಸ್ಕೃತವಾಗಬೇಕು, ಅದಾಗಬೇಕು.

ಹಾಗಾಗಿ ಸರಳ ಸಂಸ್ಕೃತವನ್ನು ಇಲ್ಲಿ ಕಲಿಸುವಂತಾಗಲಿ ಎಂಬುದನ್ನು ನಾನು ಇಷ್ಟಪಡುತ್ತೇನೆ. ಅದು ಸಾಧ್ಯವಾಗುವಷ್ಟು ಸರಳವಾಗಿರಬೇಕು– ಆದರೆ

ಸರಳೀಕೃತಗೊಳಿಸಿದ್ದಲ್ಲ– ಸರಳವಾಗಿ ಅದರ ಮೂಲಕ್ಕೆ ಹೋಗುವುದರ ಮೂಲಕ... ಸ್ಫುಟವಾಗಿ ಉಚ್ಚರಿಸಿದ ಈ ಎಲ್ಲ ಧ್ವನಿಗಳು ನಂತರ ರೂಪುಗೊಂಡ ಶಬ್ದಗಳ ಬೇರುಗಳಾಗಿರುತ್ತವೆ.

**CWM, 12/415** **– ಶ್ರೀಮಾತೆ**

*

## ಆತ್ಮ–ಆಧಾರಿತ ಶಿಕ್ಷಣ

### ಅಭಿವೃದ್ಧಿಪಡಿಸಬೇಕಾದ ಒಂದು ಗುಣಲಕ್ಷಣ

ಮಗು ಅತಿ ಚಿಕ್ಕವನಾಗಿರುವಾಗಿಂದಲೇ ಅಭಿವೃದ್ಧಿಪಡಿಸಬೇಕಾದ ಇನ್ನೊಂದು ಗುಣಲಕ್ಷಣವಿದೆ: ಅದು ಅಸೌಖ್ಯದ ಹಾಗೂ ನೈತಿಕ ಅಸಮತೋಲನದ ಭಾವನೆ, ಈ ಭಾವನೆ ಅದು ಕೆಲವೊಂದು ಕಾರ್ಯಗಳನ್ನು ಕೈಕೊಂಡಾಗ ಬರುತ್ತದೆ. ಈ ಭಾವನೆ ತಂದುಕೊಳ್ಳುವುದಕ್ಕೆ ಕಾರಣ ಮಗುವಿಗೆ ಆ ಕಾರ್ಯಗಳನ್ನು ಕೈಕೊಳ್ಳಬಾರದು ಎಂದು ಹೇಳಿರುವುದಕ್ಕಾಗಿಯಲ್ಲ, ಶಿಕ್ಷೆಯಾಗಬಹುದೆಂಬ ಹೆದರಿಕೆಯಿಂದಲ್ಲ, ಆದರೆ ಅದು ಸ್ವಯಂಪ್ರೇರಣೆಯಿಂದ ಬಂದಿರುತ್ತದೆ. ಉದಾಹರಣೆಗೆ ಒಂದು ಮಗು ತನ್ನ ಸಹಪಾಠಿಗೆ ನೋವನ್ನುಂಟು ಮಾಡಿದಾಗ, ಅದು ಸಾಮಾನ್ಯ ಸ್ಥಿತಿಯಲ್ಲಿದ್ದಾಗ ಅಸೌಖ್ಯವನ್ನು, ಅದರ ಆಂತರಿಕ ಸತ್ತೆಯಲ್ಲಿ ಆಳವಾದ ದುಃಖವನ್ನು ಅನುಭವಕ್ಕೆ ತಂದುಕೊಳ್ಳುತ್ತದೆ, ಏಕೆಂದರೆ ಅದು ಮಾಡಿದ್ದು ಅದರ ಆಂತರಿಕ ಸತ್ಯಕ್ಕೆ ವಿರುದ್ಧವಾಗಿರುತ್ತದೆ.

ಎಲ್ಲ ಬೋಧನೆ ಇದ್ದಾಗಲೂ, ಯೋಚಿಸಲು ಸಾಧ್ಯವಾಗಬಹುದಾದ ಎಲ್ಲ ಯೋಚನೆ ಇದ್ದಾಗಲೂ ಆಳಗಳಲ್ಲಿ ಏನೋ ಒಂದಿರುತ್ತದೆ, ಅದಕ್ಕೆ ಪರಿಪೂರ್ಣತೆಯ, ಶ್ರೇಷ್ಠತೆಯ, ಸತ್ಯದ ಭಾವನೆ ಇರುತ್ತದೆ ಮತ್ತು ಈ ಸತ್ಯವನ್ನು ವಿರೋಧಿಸುವ ಎಲ್ಲ ಚಲನೆಗಳಿಂದ ಅದನ್ನು ನೋವಿಗೊಳಪಡಿಸಲಾಗುತ್ತದೆ. ಮಗುವೊಂದು ಅದರ ಸಾಮಾಜಿಕ ಪರಿಸರದಿಂದ, ತನ್ನ ಸುತ್ತಲಿರುವ ಶೋಚನೀಯ ಉದಾಹರಣೆಗಳಿಂದ ಕೆಡದೇ ಹೋಗಿದ್ದರೆ, ಎಂದರೆ ಅದು ಅದರ ಸಾಮಾನ್ಯ ಸ್ಥಿತಿಯಲ್ಲಿದ್ದರೆ, ಅದಕ್ಕೆ ಏನನ್ನೂ ಹೇಳದೆ ಇದ್ದಾಗ ಅದು ತನ್ನ ಸತ್ತೆಯ ಸತ್ಯದ ವಿರುದ್ಧ ಏನನ್ನೋ ಮಾಡಿದಾಗ ಅದಕ್ಕೆ ಅಸೌಖ್ಯವಿರುವ ಭಾವನೆ

ಬರುತ್ತದೆ ಮತ್ತು ನಿಖರವಾಗಿ ಇದರ ಮೇಲೆ ನಂತರ ಪ್ರಗತಿಗಾಗಿ ಅದರ ಪ್ರಯತ್ನ ಸ್ಥಾಪಿತಗೊಳ್ಳಬೇಕು.

**CWM, 4/24** **– ಶ್ರೀಮಾತೆ**

*

**ನಿಜವಾದ ಮಾರ್ಗದರ್ಶಕ**

ಕೇವಲ ಒಂದು ಮಾರ್ಗದರ್ಶಕ ಇದೆ, ಅದು ಆಂತರಿಕ ಮಾರ್ಗದರ್ಶಕ, ಮಾನಸಿಕ ಪ್ರಜ್ಞೆಯಾದ್ಯಂತ ಹಾದು ಹೋಗುವುದಿಲ್ಲ. ಸ್ವಾಭಾವಿಕವಾಗಿ ಮಗುವೊಂದು ವಿಪತ್ಕಾರಕ ಶಿಕ್ಷಣ ಪಡೆದರೆ ಆ ಶಿಕ್ಷಣ ಈ ನಿಜವಾದ ವಿಷಯವನ್ನು ಕಠಿಣ ರೀತಿಯಲ್ಲಿ ನಂದಿಸಲು ಯಾವಾಗಲೂ ಪ್ರಯತ್ನಿಸುತ್ತದೆ ಮತ್ತು ಕೆಲವೊಮ್ಮೆ ಎಷ್ಟೊಂದು ಒಳ್ಳೆಯ ರೀತಿಯಲ್ಲಿ ಯಶಸ್ವಿಯಾಗುತ್ತದೆಂದರೆ ಆ ಮಾರ್ಗದರ್ಶಕನೊಂದಿಗೆ ಎಲ್ಲ ಸಂಪರ್ಕ ಕಳೆದುಕೊಳ್ಳುತ್ತದೆ, ಹಾಗೆಯೇ ಒಳ್ಳೆಯದು ಹಾಗೂ ಅನಿಷ್ಟವಾದದ್ದು ಇವುಗಳ ನಡುವಿರುವ ಭಿನ್ನತೆಯನ್ನು ಕಂಡುಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತದೆ ಮತ್ತು ಬಾಲ್ಯದಿಂದ ಮಕ್ಕಳಿಗೆ ಅವರೊಳಗೆ, ಪೃಥ್ವಿಯ ಒಳಗೆ, ವಿಶ್ವದ ಒಳಗೆ ಒಂದು ಆಂತರಿಕ ಸತ್ಯವಿದೆ ಎಂಬುದನ್ನು ಕಲಿಸಿಕೊಡಬೇಕು ಎಂದು ನಾನು ಹೇಳುತ್ತೇನೆ ಮತ್ತು ಅವರು, ಪೃಥ್ವಿ ಹಾಗೂ ವಿಶ್ವ ಈ ಸತ್ಯದ ಕಾರ್ಯವಿಧಾನವೆಂದು ಇವೆಲ್ಲ ಅಸ್ತಿತ್ವದಲ್ಲಿರುತ್ತವೆ ಮತ್ತು ಅವು ಅಸ್ತಿತ್ವದಲ್ಲಿರದಿದ್ದರೆ ಮಗು ಅದರ ಅಲ್ಪಾವಧಿಯಲ್ಲೂ ಕೂಡ ಉಳಿಯಲಾರದು ಮತ್ತು ಪ್ರತಿಯೊಂದು ಅಸ್ತಿತ್ವದಲ್ಲಿ ಬರುತ್ತಿದ್ದ ಹಾಗೆ ಕರಗಿ ಹೋಗುವುದು ಮತ್ತು ಇದು ವಿಶ್ವದ ನಿಜವಾದ ಆಧಾರವಾಗಿರುವುದರಿಂದ, ಸ್ವಾಭಾವಿಕವಾಗಿ ಇದೇ ಜಯಸಾಧಿಸುವುದು ಮತ್ತು ಇದನ್ನು ವಿರೋಧಿಸುವುದೆಲ್ಲ ಇದು ಉಳಿದುಕೊಳ್ಳುವಷ್ಟು ಕಾಲದವರೆಗೆ ತಾಳಿಕೊಳ್ಳಲಾರದು, ಏಕೆಂದರೆ ಇದು ಶಾಶ್ವತವಾದ ವಿಷಯ 'ತತ್', ಅದು ವಿಶ್ವದ ಆಧಾರದಲ್ಲಿರುತ್ತದೆ.

ಸಹಜವಾಗಿ ಮಗುವಿಗೆ ತಾತ್ವಿಕ ವಿವರಣೆ ಕೊಡುವ ಪ್ರಶ್ನೆ ಇದಲ್ಲ, ಆದರೆ ಈ ಬಗೆಯ ಆಂತರಿಕ ಸುಖಸೌಲಭ್ಯದ, ತೃಪ್ತಿಯ ಮತ್ತು ಕೆಲವೊಮ್ಮೆ ಗಾಢ ಸಂತೋಷದ ಭಾವನೆಯನ್ನು ಅವನಿಗೆ ಹೆಚ್ಚು ಸರಿಯಾಗಿ ಕೊಡಬಹುದು.

ಅವನೊಳಗಿರುವ ಈ ಬಹಳ ನಿಶ್ಚಲನೀರವತೆಯಲ್ಲಿರುವ ಚಿಕ್ಕ ವಿಷಯಕ್ಕೆ ವಿಧೇಯನಾಗಿದ್ದರೆ, ಅದಕ್ಕೆ ವಿರುದ್ಧವಾದುದನ್ನು ಕೈಕೊಳ್ಳುವುದಕ್ಕೆ ಅದು ತಡೆ ಒಡ್ಡುತ್ತದೆ. ಈ ಬಗೆಯ ಬೋಧನೆಯ ಅನುಭವದಿಂದ ಶಿಕ್ಷಣಕ್ಕೆ ಆಧಾರ ಕೊಡಬಹುದು. ತನ್ನಂತರಂಗದಲ್ಲಿಯೇ ಶಾಶ್ವತವಾದ ಈ ನಿಜವಾದ ತೃಪ್ತಿಯನ್ನು ಹೊಂದಿರದಿದ್ದರೆ ಏನೂ ತಾಳಿಕೊಳ್ಳುವುದಿಲ್ಲ ಎಂಬ ಭಾವನೆಯನ್ನು ಮಗುವಿಗೆ ಕೊಡಲೇಬೇಕು.

**CWM, 4/25** **– ಶ್ರೀಮಾತೆ**

*

**ತಮ್ಮನ್ನು ತಾವು ಅರಿತುಕೊಳ್ಳುವುದನ್ನು ಮಕ್ಕಳಿಗೆ ಕಲಿಸಿಕೊಡಬೇಕು**

ಸಾರಭೂತವಾಗಿ ನೀವು ಶ್ರದ್ಧೆಯಿಂದ ಕೈಕೊಳ್ಳಬೇಕಾದ ಕೇವಲ ಒಂದು ವಿಷಯವಿದೆ: ಮಕ್ಕಳು ತಮ್ಮನ್ನು ತಾವೇ ಅರಿತುಕೊಳ್ಳುವಂತೆ, ತಮ್ಮದೇ ಅದೃಷ್ಟವನ್ನು, ತಾವು ಅನುಸರಿಸಬೇಕಾದ ಮಾರ್ಗವನ್ನು ಆಯ್ದುಕೊಳ್ಳುವಂತೆ ಅವರಿಗೆ ಕಲಿಸಿಕೊಡುವುದಾಗಿದೆ, ಹಾಗೆಯೇ ಅವರು ತಮ್ಮೆಡೆಗೆ ನೋಡುವುದನ್ನು, ತಮ್ಮನ್ನು ತಿಳಿದುಕೊಳ್ಳುವುದನ್ನು ಹಾಗೂ ತಾವೇನಾಗಬೇಕೆಂದಿದ್ದಾರೋ ಅದಕ್ಕಾಗಿ ಸಂಕಲ್ಪ ಮಾಡುವುದನ್ನು ಕಲಿಸಿಕೊಡಬೇಕು. ಅದು ಅನಂತಪಟ್ಟು ಹೆಚ್ಚು ಮಹತ್ವದ್ದು. ನೀವು ಜಗತ್ತಿನಲ್ಲಿ ಸಾಮಾನ್ಯ ಜೀವನ ನಡೆಸಬೇಕೆಂದಿದ್ದರೆ ಪ್ರಾಚೀನ ಕಾಲದಲ್ಲಿ ಪೃಥ್ವಿಯ ಮೇಲೆ ಏನು ಸಂಭವಿಸಿತು, ಪೃಥ್ವಿಯನ್ನು ಹೇಗೆ ನಿರ್ಮಾಣ ಮಾಡಲಾಯಿತು. ಇಂತಹ ಎಲ್ಲ ವಿಷಯಗಳ ತಳಹದಿ ನಿಮಗೆ ಅವಶ್ಯವಾಗಿ ಬೇಕಾಗುತ್ತದೆ, ಏಕೆಂದರೆ ಅದೆಲ್ಲ ನಿಮಗೆ ತಿಳಿದಿರದಿದ್ದರೆ ಯಾರು ಬೇಕಾದರೂ "ಅವನೊಬ್ಬ ಶತದಡ್ಡ, ಅವನಿಗೇನೂ ತಿಳಿಯದು" ಎಂದು ತಿರಸ್ಕಾರದಿಂದ ನೋಡುತ್ತಾರೆ.

ಆದಾಗ್ಯೂ ನೀವು ಅಧ್ಯಯನ ತತ್ಪರರಾಗಿದ್ದರೆ ಯಾವುದೇ ವಯಸ್ಸಿನಲ್ಲಿ ಅದನ್ನು ಕೈಕೊಳ್ಳಬೇಕೆಂಬ ಸಂಕಲ್ಪವಿದ್ದರೆ, ನೀವು ಪುಸ್ತಕಗಳನ್ನು ಕೈಗೆತ್ತಿಕೊಳ್ಳಬೇಕು ಹಾಗೂ ಕಾರ್ಯಮಾಡಬೇಕು; ಅದಕ್ಕಾಗಿ ನೀವು ಶಾಲೆಗೆ ಹೋಗುವುದು ಅವಶ್ಯವಾಗಿರುವುದಿಲ್ಲ. ನಿಮಗೆ ವಿಷಯಗಳನ್ನು ಕಲಿಸಿಕೊಡುವುದಕ್ಕೆ ಜಗತ್ತಿನಲ್ಲಿ ಸಾಕಷ್ಟು ಪುಸ್ತಕಗಳಿವೆ. ಅವಶ್ಯವಾದದ್ದಕ್ಕಿಂತ ಹೆಚ್ಚಿನ ರೀತಿಯಲ್ಲಿ ಪುಸ್ತಕಗಳಿವೆ.

ಮೇಧಾನಂದನಿರುವ ಪುಸ್ತಕಾಲಯ(library)ಕ್ಕೆ ಹೋದರೆ ನೀವು ಎಲ್ಲ ವಿಷಯಗಳನ್ನು ಓದಿ ಮುಗಿಸಬಲ್ಲಿರಿ. ಇಲ್ಲಿಯವರೆಗೆ (ಸಂಜ್ಞೆ) ನಿಮ್ಮನ್ನು ತುಂಬಿಕೊಳ್ಳಲು ನಿಮಗೆ ಸಾಕಾಗುವಷ್ಟಿರುತ್ತವೆ! ನಿಮಗೆ ಏನು ಬೇಕು ಎಂಬುದನ್ನು ತಿಳಿದುಕೊಳ್ಳುವುದು ಮಹತ್ವದ್ದು ಮತ್ತು ಇದಕ್ಕಾಗಿ ಕನಿಷ್ಠಮಟ್ಟದ ಸ್ವಾತಂತ್ರ್ಯ ಅವಶ್ಯವಾಗಿರುತ್ತದೆ. ನೀವು ಒಂದು ಒತ್ತಾಯದ ಇಲ್ಲವೆ ನಿರ್ಬಂಧದ ಅಡಿಯಲ್ಲಿರಬಾರದು. ನೀವು ಕಾರ್ಯಗಳನ್ನು ಸಂಪೂರ್ಣ ಹೃದಯದಿಂದ ಕೈಕೊಳ್ಳಲು ಶಕ್ತರಾಗಿರಬೇಕು. ನೀವು ಆಲಸಿಗಳಾಗಿದ್ದರೆ, ಸರಿ, ಆಲಸಿಗಳಾಗುವುದೆಂದರೆ ಏನು ಎಂಬುದನ್ನು ತಿಳಿದುಕೊಳ್ಳುವಿರಿ. ನಿಮಗೆ ತಿಳಿದ ಹಾಗೆ ಜೀವನದಲ್ಲಿ ಆಲಸಿಗಳು ಉಳಿದವರಿಗಿಂತ ಹತ್ತುಪಟ್ಟು ಹೆಚ್ಚು ಕಾರ್ಯಮಾಡಬೇಕಾದ ನಿರ್ಬಂಧಕ್ಕೊಳಗಾಗುತ್ತಾರೆ, ಏಕೆಂದರೆ ಅವರು ಮಾಡುವುದನ್ನು ಕೆಟ್ಟರೀತಿಯಲ್ಲಿ ಮಾಡುತ್ತಾರೆ ಹಾಗಾಗಿ ಮತ್ತೆ ಮಾಡುವ ನಿರ್ಬಂಧಕ್ಕೊಳಗಾಗುತ್ತಾರೆ. ಆದರೆ ಈ ವಿಷಯಗಳನ್ನು ಮನುಷ್ಯ ಅನುಭವದಿಂದ ಕಲಿತುಕೊಳ್ಳಬೇಕು.

*

**ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದನ್ನು ಕಲಿಯುವುದು**

ಮನಸ್ಸನ್ನು ನಿಯಂತ್ರಣದಲ್ಲಿರಿಸಿಕೊಳ್ಳದಿದ್ದರೆ ಅದು ಹೊಯ್ದಾಡುವ ಹಾಗೂ ನಿಖರವಲ್ಲದ ಏನೋ ಒಂದಾಗಿರುತ್ತದೆ. ಮನಸ್ಸನ್ನು ಯಾವುದೊಂದರ ಮೇಲೆ ಏಕಾಗ್ರತೆಯಲ್ಲಿರಿಸುವ ರೂಢಿ ಮನುಷ್ಯನಲ್ಲಿರದಿದ್ದರೆ ಅದು ಎಲ್ಲ ಕಾಲದಲ್ಲಿ ಅಲೆದಾಡುತ್ತ ಹೋಗುತ್ತದೆ. ಎಲ್ಲಿಯೂ ನಿಲ್ಲದೆ ಮುಂದೆ ಸಾಗುತ್ತದೆ, ಅಸ್ಪಷ್ಟ ಜಗತ್ತೊಂದರಲ್ಲಿ ಅಲೆದಾಡುತ್ತದೆ ಮತ್ತು ಆಗ ಮನುಷ್ಯ ತನ್ನ ಲಕ್ಷ್ಯವನ್ನು ಸ್ಥಿರಗೊಳಿಸಬೇಕೆಂದು ಬಯಸಿದರೆ ಅದು ನೋವನ್ನುಂಟು ಮಾಡುತ್ತದೆ. "ಓಹ್ ಅದು ಎಷ್ಟೊಂದು ದಣಿವನ್ನುಂಟು ಮಾಡುತ್ತದೆ, ಅದು ನೋಯಿಸುತ್ತದೆ" ಎಂಬ ಚಿಕ್ಕ ಪ್ರಯತ್ನ ಅಲ್ಲಿರುತ್ತದೆ. ಹಾಗಾಗಿ ಮನುಷ್ಯ ಅದನ್ನು ಮಾಡುವುದಿಲ್ಲ. ಮನುಷ್ಯ ಒಂದು ಬಗೆಯ ಮೋಡ ಮುಸುಕಿದ ಸ್ಥಿತಿಯಲ್ಲಿರುತ್ತಾನೆ. ನಿಮ್ಮ ತಲೆಯೇ ಒಂದು ಮೋಡದ ಹಾಗಿರುತ್ತದೆ, ಅದು ಹಾಗಿರುತ್ತದೆ, ಬಹಳಷ್ಟು ಮಿದುಳುಗಳು ಮೋಡಗಳ ಹಾಗಿರುತ್ತವೆ. ಅಲ್ಲಿ ನಿಖರತೆ ಇರುವುದಿಲ್ಲ, ಸ್ಪಷ್ಟತೆ ಇರುವುದಿಲ್ಲ, ನಿಷ್ಕೃಷ್ಟತೆ ಇರುವುದಿಲ್ಲ, ಅದು ಮಬ್ಬುಗವಿದದ್ದು– ಮಬ್ಬುಗವಿದದ್ದು

ಅಸ್ಪಷ್ಟವಾದದ್ದು. ವಿಷಯಗಳನ್ನು ಕುರಿತು ನಿಮ್ಮಲ್ಲಿ ಜ್ಞಾನವಿರುವುದರ ಬದಲಾಗಿ ಭಾವನೆಗಳಿರುತ್ತವೆ.

ನೀವು ಒಂದು ಅಂದಾಜಿನಲ್ಲಿ ಜೀವಿಸುತ್ತೀರಿ. ನೀವು ನಿಮ್ಮೊಳಗೆ ಎಲ್ಲ ಬಗೆಯ ವಿರೋಧೀ ವಿಚಾರಗಳನ್ನು ಕಾಪಾಡಿಕೊಂಡು ಬರುತ್ತೀರಿ: ಅವು ಹೆಚ್ಚಾಗಿ ಅಭಿಪ್ರಾಯಗಳು, ಸಂವೇದನೆಗಳು, ಭಾವನೆಗಳು, ಉದ್ವೇಗಗಳು ಇವುಗಳಿಂದ ಆಗಿರುತ್ತವೆ. ಯೋಚನೆಗೆ ಅತಿಸ್ವಲ್ಪವಾದದ್ದನ್ನು ಮಾಡಬಲ್ಲ ಆ ಬಗೆಯ ಎಲ್ಲ ವಿಷಯಗಳಿರುತ್ತವೆ... ಅವು ಅಸ್ಪಷ್ಟ ತಿರುಚಾಟಗಳಾಗಿರುತ್ತವೆ. ಆದರೆ ನೀವು ಒಂದು ವಿಷಯ ಕುರಿತು ನಿಖರವಾದ, ಮೂರ್ತರೂಪದ, ಸ್ಪಷ್ಟ ನಿಶ್ಚಿತ ಯೋಚನೆಯೊಂದನ್ನು ಹೊಂದುವುದರಲ್ಲಿ ಯಶಸ್ವಿಯಾಗಬೇಕಾದರೆ ನೀವು ಪ್ರಯತ್ನವೊಂದನ್ನು ಮಾಡಬೇಕು, ನಿಮ್ಮನ್ನು ಒಟ್ಟುಗೂಡಿಸಿಕೊಳ್ಳಬೇಕು, ನಿಮ್ಮನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಬೇಕು, ಸ್ಥಿರವಾಗಿರಿಸಿಕೊಳ್ಳಬೇಕು, ಏಕಾಗ್ರತೆ–ಯಲ್ಲಿರಬೇಕು. ನೀವದನ್ನು ಮೊದಲ ಸಲ ಕೈಕೊಂಡಾಗ, ಅದು ಅಕ್ಷರಶಃ ನೋವನ್ನುಂಟು ಮಾಡುತ್ತದೆ, ಅದು ದಣಿವನ್ನುಂಟು ಮಾಡುವಂತಹದು! ಆದರೆ ಅದನ್ನು ಒಂದು ರೂಢಿಯನ್ನಾಗಿ ಇರಿಸಿಕೊಳ್ಳದಿದ್ದರೆ, ನಿಮ್ಮ ಎಲ್ಲ ಜೀವನವನ್ನು ಅಸ್ಥಿರತೆಯಲ್ಲಿ ಜೀವಿಸುತ್ತೀರಿ. ವ್ಯಾವಹಾರಿಕ ವಿಷಯಗಳ ಬಳಿ ಬಂದಾಗ, ಹಲವಾರು ಸಮಸ್ಯೆಗಳನ್ನು ಪರಿಹರಿಸಬೇಕಾದುದನ್ನು ಎದುರಿಸಿದಾಗ– ಏನೆಲ್ಲ ಇದ್ದಾಗ್ಯೂ ಮನುಷ್ಯ ಎದುರಿಸಬೇಕಾದವುಗಳು ಇರುತ್ತವೆ– ಆ ಸಮಸ್ಯೆಗಳು ಬಹಳ ವ್ಯಾವಹಾರಿಕವಾದವುಗಳಿರಲಿ ಸರಿ, ಸಮಸ್ಯೆಯ ಪ್ರಾಥಮಿಕ ಸ್ವರೂಪದ ಅಂಶಗಳನ್ನು ಕೈಗೆತ್ತಿಕೊಳ್ಳುವುದರ ಬದಲಾಗಿ, ಒಂದರ ಎದುರಿಗೆ ಇನ್ನೊಂದು ಬರುವಂತೆ ಇರಿಸುವುದರ ಬದಲಾಗಿ ಪ್ರಶ್ನೆಯನ್ನು ಪ್ರತಿಯೊಂದು ಬದಿಯಿಂದ ನೋಡಿ ಮೇಲಕ್ಕೇರಿ ಪರಿಹಾರವನ್ನು ನೋಡುವುದರ ಬದಲಾಗಿ, ಅದೆಲ್ಲದರ ಬದಲಾಗಿ ನಿಮ್ಮನ್ನು ಏನೋ ಒಂದರ ನಿರುತ್ಸಾಹಕರ ಹಾಗೂ ಅನಿಶ್ಚಿತ ಸುರುಳಿಗಳಲ್ಲಿ ಎಸೆಯಲಾಗುತ್ತದೆ– ಅದು ಎಷ್ಟೊಂದು ಹುಳುಗಳು ತಲೆಯಲ್ಲಿ ಸುತ್ತುತ್ತ ಓಡುತ್ತಿರುವ ಹಾಗಿರುತ್ತದೆ– ಆದರೆ ಆ ವಿಷಯವನ್ನು ಹಿಡಿದು–ಕೊಳ್ಳುವುದರಲ್ಲಿ ನೀವು ಯಶಸ್ವಿಯಾಗುವುದಿಲ್ಲ ನಾನು ಅತ್ಯಂತ ಸರಳವಾದ ಸಮಸ್ಯೆಗಳನ್ನು ಕುರಿತು ಮಾತನಾಡುತ್ತಿದ್ದೇನೆ ತಿಳಿಯಿತೆ; ಜಗತ್ತಿನ ಇಲ್ಲವೆ ಮನುಕುಲದ, ಒಂದು ದೇಶ ಕುರಿತಾಗಿದ್ದುದರ ವಿಧಿಯನ್ನು ನಿರ್ಧರಿಸುವುದನ್ನು

ಕುರಿತಾಗಿಯಲ್ಲ– ಅಂತಹ ಯಾವ ಬಗೆಯದೂ ಅಲ್ಲ. ನಿಮ್ಮ ದೈನಂದಿನ ಜೀವನದ, ಪ್ರತಿದಿನದ ಸಮಸ್ಯೆಗಳನ್ನು ಕುರಿತು ಮಾತನಾಡುತ್ತಿದ್ದೇನೆ. ಅವು ಬಹಳ ಮಸುಕಾದ ಏನೋ ಒಂದರಂತಾಗುತ್ತವೆ.

**CWM, 8/181–82** **– ಶ್ರೀಮಾತೆ**

*

**ಆಂತರಿಕ ಸತ್ಯದ ಬಗ್ಗೆ ಪ್ರಜ್ಞೆಯುಳ್ಳವರಾಗುವುದು**

**ಪ್ರಶ್ನೆ:** *ಮಗುವೊಂದು ವಯಸ್ಸಾದವನ ಹಾಗೆ ಆಂತರಿಕ ಸತ್ಯದ ಬಗ್ಗೆ ಪ್ರಜ್ಞೆಯುಳ್ಳ–ದ್ದಾಗುವುದು ಸಾಧ್ಯವಿದೆಯೆ?*

**ಶ್ರೀಮಾತೆ:** ಮಗುವಿಗೆ ಇದು ಬಹಳ ಸ್ಪಷ್ಟವಾಗಿದೆ, ಏಕೆಂದರೆ ಶಬ್ದದ ಇಲ್ಲವೆ ಯೋಚನೆಯ ಯಾವ ಗೋಜಲೂ ಇಲ್ಲದೆ ಅದರ ಗ್ರಹಿಕೆಯಿರುತ್ತದೆ– ಅದು ಅಲ್ಲಿದ್ದುಕೊಂಡು ಮಗು ಸೌಖ್ಯದಿಂದ ಮತ್ತು ಅಸೌಖ್ಯದಿಂದ ಇರುವಂತೆ ಅವನನ್ನಿರಿಸುತ್ತದೆ. (ಆ ವಿಷಯ ಬಹಳ ಗಾಢವಾದಾಗ ಬರುವ ಸಂತೋಷ–ವಾಗಲಿ, ವೇದನೆಯಾಗಲಿ ಅವಶ್ಯವಾಗಿ ಇರುವಂತಹದಲ್ಲ). ಇದೆಲ್ಲವೂ ಮಗುವಿನಲ್ಲಿ ವಯಸ್ಸಾದವನಲ್ಲಿ ಇರುವುದಕ್ಕಿಂತ ಹೆಚ್ಚು ಸ್ಪಷ್ಟವಾಗಿರುತ್ತದೆ. ಏಕೆಂದರೆ ವಯಸ್ಸಾದವನಲ್ಲಿ ಯಾವಾಗಲೂ ಕಾರ್ಯಕೈಕೊಳ್ಳುತ್ತಿರುವ ಮತ್ತು ಸತ್ಯದ ಮೇಲೆ ಮೋಡ ಮುಸುಕುವ ಮನಸ್ಸಿರುತ್ತದೆ.

ಮಗುವೊಂದಕ್ಕೆ ಸಿದ್ಧಾಂತಗಳನ್ನು ಕೊಡುವುದು ನಿರುಪಯುಕ್ತವಾದದ್ದು ಏಕೆಂದರೆ ಅದರ ಮನಸ್ಸು ಎಚ್ಚತ್ತುಕೊಂಡ ಕೂಡಲೆ ನಿಮ್ಮ ಸಿದ್ಧಾಂತಗಳನ್ನು ವಿರೋಧಿಸುವ ಸಾವಿರಾರು ಕಾರಣಗಳನ್ನು ಅದು ಕಂಡುಕೊಳ್ಳುತ್ತದೆ. ಸಸ್ಯಗಳಲ್ಲಿ ಅದು ಪ್ರಜ್ಞಾಪೂರ್ಣವಾಗಿಲ್ಲ. ಪಶುಗಳಲ್ಲಿ ಅದು ಪ್ರಜ್ಞಾಪೂರ್ಣವಾಗಲು ಪ್ರಯತ್ನಿಸುತ್ತದೆ, ಮಕ್ಕಳಲ್ಲಿ ಅದು ಬಹಳ ಪ್ರಜ್ಞಾಪೂರ್ಣವಾದದ್ದಿರುತ್ತದೆ. ಹದಿನಾಲ್ಕು ವರ್ಷ ಇಪ್ಪತ್ತೈದು ವಯಸ್ಸಾಗುವುದಕ್ಕಿಂತ ಮೊದಲು ಐದನೆಯ ವರ್ಷದವರಾಗಿದ್ದಾಗ ತಮ್ಮ ಚೈತ್ಯಸತ್ತೆಯ ಬಗ್ಗೆ ಹೆಚ್ಚು ಪ್ರಜ್ಞೆಯುಳ್ಳವರಾಗಿದ್ದನ್ನು ನಾನು ನೋಡಿದ್ದೇನೆ. ಗಾಢ ಸ್ವರೂಪದ ಮಾನಸಿಕ ತರಬೇತನ್ನು ಪಡೆಯಲು ಶಾಲೆಗೆ ಹೋಗುವ ಕ್ಷಣದಿಂದ ಅವರ ಲಕ್ಷ್ಯ ಅವರ ಸತ್ತೆಯ ಬೌದ್ಧಿಕ ಭಾಗದತ್ತ ಹೊರಳಿರುತ್ತದೆ, ಅವರು ಬಹುಮಟ್ಟಿಗೆ, ಯಾವಾಗಲೂ, ತಮ್ಮ ಚೈತ್ಯಸತ್ತೆಯ–

ನೊಡನಿರುವ ಸಂಪರ್ಕವನ್ನು ಸಂಪೂರ್ಣವಾಗಿ ಕಳೆದುಕೊಂಡಿರುತ್ತಾರೆ. ನೀವು ಅನುಭವವುಳ್ಳ ವೀಕ್ಷಕರಾಗಿದ್ದರೆ, ವ್ಯಕ್ತಿಯಲ್ಲಿ ಏನು ನಡೆಯುತ್ತಿರುತ್ತದೆ ಎಂದು ಅವನ ಕಣ್ಣುಗಳಲ್ಲಿ ನೋಡಿ ಹೇಳಬಲ್ಲವರಾದರೆ!... ಕಣ್ಣುಗಳು ಆತ್ಮದ ಕನ್ನಡಿಯ ಹಾಗೆ ಇರುತ್ತವೆ ಎಂದು ಹೇಳಲಾಗಿದೆ, ಅದು ಮಾತನಾಡುವ ಪ್ರಚಲಿತ ರೀತಿ, ಆದರೆ ಕಣ್ಣುಗಳು ನಿಮಗೆ ಚೈತ್ಯಸತ್ತೆಯನ್ನು ಅಭಿವ್ಯಕ್ತಪಡಿಸದಿದ್ದರೆ ಅದಕ್ಕೆ ಕಾರಣ ಚೈತ್ಯಸತ್ತೆ ಬಹಳ ಹಿಂದೆ ಉಳಿದುಕೊಂಡಿರುತ್ತದೆ, ಅನೇಕ ವಿಷಯಗಳ ಪರದೆಯ ಹಿಂದಿರುತ್ತದೆ. ಚಿಕ್ಕಮಕ್ಕಳ ಕಣ್ಣುಗಳನ್ನು ಕಾಳಜಿಪೂರ್ವಕ ಈಗ ನೋಡಿರಿ, ಅಲ್ಲಿ ಒಂದು ಬಗೆಯ ಪ್ರಕಾಶವಿರುವುದನ್ನು ನೋಡುತ್ತೀರಿ– ಅದನ್ನು ಕೆಲವರು ಮುಚ್ಚುಮರೆಯಲ್ಲಿರದಂತಹದು ಎಂದು ವರ್ಣಿಸುತ್ತಾರೆ– ಜಗತ್ತಿನತ್ತ ಆಶ್ಚರ್ಯದಿಂದ ನೋಡುವ ಅದು ಎಷ್ಟೊಂದು ಸತ್ಯವಾದದ್ದಾಗಿರುತ್ತದೆ. ಸರಿ, ಆಶ್ಚರ್ಯದ ಈ ಭಾವನೆ, ಸತ್ಯವನ್ನು ನೋಡುವ ಚೈತ್ಯಸತ್ತೆಯ ಆಶ್ಚರ್ಯ–ವಾಗಿರುತ್ತದೆ, ಆದರೆ ಅದು ಜಗತ್ತಿನ ಬಗ್ಗೆ ಬಹಳಷ್ಟನ್ನು ತಿಳಿದುಕೊಂಡಿರುವುದಿಲ್ಲ, ಏಕೆಂದರೆ ಅದು ಜಗತ್ತಿನಿಂದ ಬಹಳ ದೂರದಲ್ಲಿರುತ್ತದೆ. ಮಕ್ಕಳು ಇದನ್ನು ಹೊಂದಿರುತ್ತಾರೆ, ಆದರೆ ಅವರು ಹೆಚ್ಚು ಕಲಿತುಕೊಂಡ ಹಾಗೆ, ಹೆಚ್ಚು ಬುದ್ಧಿವಂತರಾಗುತ್ತಾರೆ, ಹೆಚ್ಚು ಶಿಕ್ಷಣ ಪಡೆಯುತ್ತಾರೆ, ಆದರೆ ಇದನ್ನು ಅಳಿಸಿಹಾಕಲಾಗುತ್ತದೆ, ಅವರ ಕಣ್ಣುಗಳಲ್ಲಿ ಎಲ್ಲ ಬಗೆಯ ವಿಷಯಗಳನ್ನು ನೋಡುತ್ತೀರಿ: ಯೋಚನೆಗಳು, ಆಸೆಗಳು, ಭಾವೋದ್ರೇಕಗಳು, ಕುಟಿಲತೆ ಇವೆಲ್ಲ ಇರುತ್ತವೆ, ಆದರೆ ಎಷ್ಟೊಂದು ಪರಿಶುದ್ಧವಾದ ಈ ಬಗೆಯ ಚಿಕ್ಕಜ್ವಾಲೆ, ಇನ್ನು ಮುಂದೆ ಅಲ್ಲಿರುವುದಿಲ್ಲ. ಮನಸ್ಸು ಅಲ್ಲಿ ಒಳಗೆ ಸಾಗಿದೆ ಮತ್ತು ಚೈತ್ಯಸತ್ತೆ ಹಿಂದೆ ಬಹಳ ದೂರ ಹೋಗಿದೆ ಎಂಬುದರ ಬಗ್ಗೆ ನೀವು ನಿಶ್ಚಿತತೆ ಹೊಂದಿದವ–ರಾಗಿರಬಹುದು.

ತಿಳಿದುಕೊಳ್ಳಲು ಸಾಕಷ್ಟು ಅಭಿವೃದ್ಧಿ ಹೊಂದಿರದ ಮಗುವಿನ ಮೇಲೆ ಸರಳವಾಗಿ ರಕ್ಷಣೆಯ, ಇಲ್ಲವೆ ಮಮತೆಯ ಇಲ್ಲವೆ ಸಾಂತ್ವನದ ಕಂಪನವೊಂದು ಹಾದು ಹೋಗುವಂತೆ ಮಾಡಿದರೆ ಅವನು ಪ್ರತಿಸ್ಪಂದಿಸುವುದನ್ನು ನೋಡುತ್ತೀರಿ. ಆದರೆ ಉದಾಹರಣೆಗೆ ಸಾಮಾನ್ಯ ತಂದೆ–ತಾಯಿಗಳಿರುವ, ಶಾಲೆಗೆ ಹೋಗುತ್ತಿರುವ ಸರಿಯಾಗಿ ಬೆಳೆಸಿಕೊಂಡು ಬಂದಿರದ ಹದಿನಾಲ್ಕು ವರ್ಷದ ಬಾಲಕನತ್ತ ಗಮನಿಸೋಣ, ಅವನ ಮನಸ್ಸು ಬಹಳಷ್ಟು ಮುಂಭಾಗದಲ್ಲಿರುತ್ತದೆ,

ಅವನಲ್ಲಿ ಕಠಿಣವಾದ ಏನೋ ಒಂದಿರುತ್ತದೆ, ಚೈತ್ಯಸತ್ತೆ ಹಿಂದೆ ಹೋಗಿಬಿಟ್ಟಿರುತ್ತದೆ. ಇಂತಹ ಬಾಲಕರು ಅಂತಹ ಕಂಪನಕ್ಕೆ ಪ್ರತಿಸ್ಪಂದಿಸುವುದಿಲ್ಲ. ಅಂತಹರನ್ನು ಕಟ್ಟಿಗೆಯಿಂದ ಇಲ್ಲವೆ ಪ್ಲಾಸ್ಟರನಿಂದ ಮಾಡಲಾಗಿರುತ್ತದೆ ಎಂದು ಹೇಳಬಹುದು.

**CWM, 4/26–27** **– ಶ್ರೀಮಾತೆ**

*

**ಪ್ರಶ್ನೆ:** *ಶ್ರೀಮಾತೆಯವರೆ, "ಮುಕ್ತ ಪ್ರಗತಿ" ಎಂಬುದರ ಸಾರಭೂತವಾದ ಅರ್ಥಕ್ಕೆ ನೀವು ದಯವಿಟ್ಟು ಕೆಲವೇ ಶಬ್ದಗಳಲ್ಲಿ ವ್ಯಾಖ್ಯೆ ನೀಡುವಿರಾ?*

**ಶ್ರೀಮಾತೆ:** ಆತ್ಮದಿಂದ ಮಾರ್ಗದರ್ಶನ ಪಡೆದ ಪ್ರಗತಿ, ರೂಢಿಗಳ, ಸಂಪ್ರದಾಯಗಳ, ಇಲ್ಲವೆ ಪೂರ್ವಕಲ್ಪಿತ ವಿಚಾರಗಳ ಅಧೀನಕ್ಕೊಳ–ಪಟ್ಟುದಾದುದಲ್ಲ.

*

ಶಾಲೆಗೆ ಹೋಗುವುದು ಒಂದು ತಯಾರು ಮಾಡಿಕೊಳ್ಳುವುದಕ್ಕಾಗಿ ಇರುತ್ತದೆ, ಅಲ್ಲಿ ವಿದ್ಯಾರ್ಥಿಗಳನ್ನು ಯೋಚಿಸಲು, ಅಭ್ಯಾಸ ಮಾಡಲು, ಪ್ರಗತಿ ಸಾಧಿಸಲು ಸಮರ್ಥರಾಗುವಂತೆ ಮಾಡಲಾಗುತ್ತದೆ, ಅವರಿಗೆ ಸಾಧ್ಯವಾದರೆ ಬುದ್ಧಿವಂತರಾಗುತ್ತಾರೆ– ಅದೆಲ್ಲವನ್ನೂ ಇಡೀ ಜೀವನಾವಧಿಯ ಕೈಕೊಳ್ಳಲೇಬೇಕು, ಕೇವಲ ಶಾಲೆಯಲ್ಲಷ್ಟೇ ಅಲ್ಲ.

**CWM, 12/171, 177** **– ಶ್ರೀಮಾತೆ**

*

**ದಿನಂಪ್ರತಿಯ ಜೀವನದ ಶಾಲೆ**

ಪ್ರತಿದಿನದ, ಪ್ರತಿಕ್ಷಣದ ಜೀವನ ಎಲ್ಲ ಶಾಲೆಗಳಿಗಿಂತ ಅತ್ಯಂತ ಒಳ್ಳೆಯದು, ಅದು ವೈವಿಧ್ಯಮಯವಾಗಿರುತ್ತದೆ, ಸಂಕೀರ್ಣವಾಗಿರುತ್ತದೆ, ಅನಿರೀಕ್ಷಿತ ಅನುಭವಗಳಿಂದ, ಪರಿಹರಿಸಬೇಕಾದ ಸಮಸ್ಯೆಗಳಿಂದ, ಸ್ಪಷ್ಟ ಹಾಗೂ ಗಮನಾರ್ಹ ಮತ್ತು ಸ್ಪಷ್ಟ ಪರಿಣಾಮಗಳಿಂದ ತುಂಬಿಕೊಂಡಿರುತ್ತದೆ. ಮಕ್ಕಳು ಕೇಳುವ ಹಲವಾರು ಪ್ರಶ್ನೆಗಳಿಗೆ ನೀವು ಬುದ್ಧಿಮತ್ತೆಯಿಂದ, ಸ್ಪಷ್ಟತೆಯಿಂದ ಉತ್ತರ

ನೀಡಿದರೆ ಅವರಲ್ಲಿ ಆರೋಗ್ಯದಾಯಕ ಕುತೂಹಲ ಮೇಲೆದ್ದು ಬರುವಂತೆ ಮಾಡುವುದು ಸುಲಭವಾಗಿರುತ್ತದೆ. ಒಬ್ಬನಿಗೆ ನೀಡಿದ ಸ್ವಾರಸ್ಯಕರ ಉತ್ತರ ಕೂಡಲೆ ಇತರರನ್ನು ಅದರ ಸಾಲಿನಲ್ಲಿ ತರುತ್ತದೆ ಮತ್ತು ಹಾಗಾಗಿ ಲಕ್ಷ್ಯಗೊಡುತ್ತಿರುವ ಮಗು ಸಾಮಾನ್ಯವಾಗಿ ಶಾಲೆಯಲ್ಲಿ ಕಲಿತುಕೊಳ್ಳುವುದಕ್ಕಿಂತ ಹೆಚ್ಚಿನದನ್ನು ಪ್ರಯತ್ನವಿಲ್ಲದೆ ಕಲಿತುಕೊಳ್ಳುತ್ತದೆ. ಕಾಳಜಿಯಿಂದ ಹಾಗೂ ಒಳನೋಟದಿಂದ ಆಯ್ದುಕೊಳ್ಳುವುದರ ಮೂಲಕ ನೀವು ಬೋಧಕವಾಗಿರುವ ಹಾಗೂ ಆಕರ್ಷಕವಾಗಿರುವ ಓದುವ–ವಿಷಯವನ್ನು ಓದಿ ಸಂತೋಷಪಡುವುದನ್ನು ಕಲಿಸಿಕೊಡಬೇಕು. ಅವನ ಕಲ್ಪನಾಶಕ್ತಿಯನ್ನು ಎಚ್ಚರಿಸುವ ಹಾಗೂ ಅದರಿಂದ ಸಂತೋಷ ತಂದುಕೊಡುವ ಯಾವುದನ್ನೂ ಕುರಿತು ಹೆದರಿಕೊಳ್ಳಬಾರದು, ಕಲ್ಪನಾಶಕ್ತಿ ಸೃಷ್ಟ್ಯಾತ್ಮಕ ಮಾನಸಿಕ ಕಾರ್ಯ ವಿಧಾನವನ್ನು ಅಭಿವೃದ್ಧಿಗೊಳಿಸುತ್ತದೆ ಮತ್ತು ಅದರ ಮೂಲಕ ಅಭ್ಯಾಸ ಜೀವಂತವಾಗುತ್ತದೆ, ಮನಸ್ಸು ಸಂತೋಷದಲ್ಲಿ ಅಭಿವೃದ್ಧಿ ಹೊಂದುತ್ತದೆ.

ಅವನ (ಮಗುವಿನ) ನಮ್ಯತೆ ಹಾಗೂ ಗ್ರಹಿಸುವಿಕೆ ಇವುಗಳನ್ನು ಹೆಚ್ಚಿಸುವು–ದಕ್ಕಾಗಿ ಮನುಷ್ಯ ಅವನು ವಿವಿಧ ವಿಷಯಗಳನ್ನು ಅಭ್ಯಾಸ ಮಾಡುವಂತೆ ನೋಡಿಕೊಳ್ಳಬೇಕಲ್ಲದೆ, ಅದಕ್ಕೂ ಹೆಚ್ಚಾಗಿ ಒಂದೇ ವಿಷಯವನ್ನು ಅನೇಕ ರೀತಿಗಳಲ್ಲಿ ಸಮೀಪಿಸಬೇಕು, ಅದರಿಂದಾಗಿ ಮಗು ಅದೇ ಬೌದ್ಧಿಕ ಸಮಸ್ಯೆಯನ್ನು ಎದುರಿಸಲು, ಪರಿಗಣಿಸಲು ಹಾಗೂ ಅದಕ್ಕೆ ಪರಿಹಾರ ಕಂಡುಕೊಳ್ಳಲು ಅನೇಕ ರೀತಿಗಳಿವೆ ಎಂಬುದನ್ನು ವ್ಯಾವಹಾರಿಕವಾಗಿ ತಿಳಿದುಕೊಳ್ಳುತ್ತಾನೆ. ಇದು ಅವನ ಮಿದುಳಿನ ಎಲ್ಲ ಗಡಸುತನವನ್ನು ತೆಗೆದು ಹಾಕುತ್ತದೆ ಮತ್ತು ಅದೇ ಕಾಲಕ್ಕೆ ಅವನು ಯೋಚಿಸುವುದನ್ನು ಹೆಚ್ಚು ಸಮೃದ್ಧ ಹಾಗೂ ನಮ್ಯವಾದದ್ದನ್ನಾಗಿ ಮಾಡುತ್ತದೆ ಮತ್ತು ಹೆಚ್ಚು ಸಂಕೀರ್ಣ ಹಾಗೂ ವ್ಯಾಪಕ ಸಮನ್ವಯ ಮಾಡಲು ತಯಾರು ಮಾಡುತ್ತದೆ. ಈ ರೀತಿಯಲ್ಲಿ ಮಗು ಮಾನಸಿಕವಾಗಿ ಕಲಿತುಕೊಳ್ಳುವಿಕೆಯ ಅತ್ಯಂತ ಸಾಪೇಕ್ಷತೆಯ ಅರ್ಥದೊಂದಿಗೆ ಪೂರ್ತಿ ವ್ಯಾಪನೆಗೊಳಗಾಗುತ್ತದೆ ಮತ್ತು, ಸ್ವಲ್ಪ ಸ್ವಲ್ಪವಾಗಿ ಹೆಚ್ಚು ನಿಜವಾದ ಜ್ಞಾನದ ಮೂಲಕ್ಕಾಗಿ ಒಂದು ಅಭೀಪ್ಸೆ ಅವನನ್ನು ಎಚ್ಚರಗೊಳಿಸುತ್ತದೆ.

**CWM, 12/26–27** **– ಶ್ರೀಮಾತೆ**

*

## ಶಿಕ್ಷಣ ಕುರಿತು ಸೂತ್ರಗಳು

ನಾನು ಎಲ್ಲ ಮಕ್ಕಳೊಡನೆ ಒಂದೇ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ, ಅದು ಒಂದು ಬಗೆಯ ಏಕಪ್ರಕಾರದ ಸ್ತರವಾಗುವಂತೆ ಮಾಡುತ್ತದೆ. ಹಿಂದುಳಿದು–ಕೊಳ್ಳುವಂತಹರಿಗೆ ಅನುಕೂಲಕರವಾಗುತ್ತದೆ, ಸಾಮಾನ್ಯ ಎತ್ತರವನ್ನು ಮೀರಿ ಹೋಗುವಂತಹರಿಗೆ ಹಾನಿಕಾರಕವಾಗುತ್ತದೆ.

ಕಾರ್ಯ ಮಾಡಬೇಕು ಹಾಗೂ ಕಲಿಯಬೇಕು ಎಂದು ಬಯಸುವವರಿಗೆ ಪ್ರೋತ್ಸಾಹ ನೀಡಬೇಕು, ಆದರೆ ಅಭ್ಯಾಸವನ್ನು ಇಷ್ಟಪಡದವರ ಚೈತನ್ಯವನ್ನು ಬೇರೆ ಹೊರದಾರಿಯತ್ತ ತಿರುಗಿಸಬೇಕು.

**CWM, 17/306** **– ಶ್ರೀಮಾತೆ**

*

ಮನುಷ್ಯ ಮಗುವಿಗೆ ಕಲಿಸಿಕೊಡುವುದಕ್ಕೆ ತಾನೇ ಸ್ವತಃ ಉದಾಹರಣೆ–ಯಾಗಿರದಿದ್ದರೆ ಅದರ ಬಳಿ ಒಳ್ಳೆಯ ಮಾತುಗಳನ್ನಾಡುವುದು, ಜಾಣತನದ ಉಪದೇಶ ಮಾಡುವುದು ಯಾವ ಪರಿಣಾಮವನ್ನುಂಟು ಮಾಡುವುದಿಲ್ಲ. ನಿಷ್ಕಾಪಟ್ಯ, ಪ್ರಾಮಾಣಿಕತೆ, ನೇರನಡೆ, ಧೈರ್ಯ, ನಿರಾಸಕ್ತಿ, ಸ್ವಾರ್ಥರಹಿತತೆ, ತಾಳ್ಮೆ, ಸಹನೆ, ಪಟ್ಟುಹಿಡಿಯುವಿಕೆ, ಶಾಂತಿ, ಸ್ಥಿರತೆ, ಸ್ವ–ನಿಯಂತ್ರಣ ಇವೆಲ್ಲ ವಿಷಯಗಳನ್ನು ಸುಂದರ ಭಾಷಣಗಳಿಗಿಂತ ಹೆಚ್ಚಾಗಿ ಅನಂತಪಟ್ಟು ಒಳ್ಳೆಯ ರೀತಿಯಲ್ಲಿ ಉದಾಹರಣೆಯ ಮೂಲಕ ಕಲಿಸಿಕೊಡಬಹುದು.

**CWM, 12/10** **– ಶ್ರೀಮಾತೆ**

*

ಮಗುವಿಗೆ ಎಂದಿಗೂ ಬೈಯಬಾರದು. ನಾನು ಪಾಲಕರನ್ನು ಕುರಿತು ಅನಿಷ್ಟ ರೀತಿಯಲ್ಲಿ ಮಾತನಾಡುತ್ತೇನೆ ಎಂದು ನನ್ನನ್ನು ದೂಷಿಸಲಾಗುತ್ತದೆ. ಆದರೆ ಅವರು ಕಾರ್ಯನಿರತರಾದಾಗ ಅವರನ್ನು ನೋಡಿದ್ದೇನೆ ಮತ್ತು ಶೇಕಡಾ ತೊಂಬತ್ತರಷ್ಟು ಪಾಲಕರು ಮಗು ಸ್ವಯಂಪ್ರೇರಣೆಯಿಂದ ತಪ್ಪೊಂದನ್ನು ಒಪ್ಪಿಕೊಳ್ಳಲು ಬಂದಾಗ ಅದನ್ನು ಗದರಿಸುತ್ತಾರೆ: “ನೀನು ತುಂಟ ಮಗು, ದೂರ ಹೋಗಿಬಿಡು, ನಾನು ಕಾರ್ಯದಲ್ಲಿ ತೊಡಗಿಕೊಂಡಿದ್ದೇನೆ”– ಅದರ ಬದಲಾಗಿ

ಅವರು ಮಗು ಹೇಳುವುದನ್ನು ತಾಳ್ಮೆಯಿಂದ ಕೇಳಬೇಕು ಮತ್ತು ಅದರ ದೋಷ ಎಲ್ಲಿದೆ ಎಂಬುದನ್ನು ತಿಳಿಸಿ ಹೇಳಬೆಕು, ಅವನು ಹೇಗೆ ಕೈಕೊಳ್ಳಬೇಕಾಗಿತ್ತು ಎಂಬುದರ ಬಗ್ಗೆಯೂ ಕೂಡ ಹೇಳಬೇಕು ಮತ್ತು ಒಳ್ಳೆಯ ಉದ್ದೇಶಗಳ–ನ್ನಿಟ್ಟುಕೊಂಡು ಬಂದಿದ್ದ ಮಗು ಬಹಳ ನೊಂದುಕೊಂಡು "ನನ್ನನ್ನು ಹೀಗೇಕೆ ನಡೆಸಿಕೊಳ್ಳಲಾಗುತ್ತದೆ" ಎಂಬ ಭಾವನೆಯೊಂದಿಗೆ ದೂರ ಹೋಗುತ್ತದೆ. ನಂತರ ಆ ಮಗು ತನ್ನ ಪಾಲಕರು ಪರಿಪೂರ್ಣರಾಗಿಲ್ಲ ಎಂಬುದನ್ನು ಕಂಡುಕೊಳ್ಳುತ್ತದೆ ಮತ್ತು ಅವರು ತಪ್ಪಾದ ರೀತಿಯಲ್ಲಿದ್ದಾರೆ ಎಂಬುದನ್ನು ನೋಡುತ್ತದೆ ಮತ್ತು ತನಗೇ "ಅವನು ನನ್ನನ್ನೇಕೆ ಬೈಯುತ್ತಾನೆ, ಅವನೂ ನನ್ನ ಹಾಗೆಯೇ ಇದ್ದಾನೆ" ಎಂದು ಹೇಳಿಕೊಳ್ಳುತ್ತದೆ.

**CWM, 4/28** **– ಶ್ರೀಮಾತೆ**

*

ಮಕ್ಕಳ ಶಿಕ್ಷಣ ಪ್ರೀತಿಯಿರುವ ಹಾಗೂ ದಯಾಪರತೆ ಇರುವ ವಾತಾವರಣದಲ್ಲಿ ನಡೆಯಬೇಕು.

*

**ಹಿಂಸೆ ಎಂದೆಂದಿಗೂ ಬೇಡ**

ಶಾಲೆಗೆ ಮಕ್ಕಳು ಸಂತೋಷದಿಂದ ಹೋಗಬೇಕು, ಸಂತೋಷದಿಂದ ಕಲಿಯಬೇಕು ಯಾವಾಗಲೂ ಸೌಮ್ಯ ದಯಾಪರತೆ ಇರಬೇಕು ಮತ್ತು ಮಗು ಹೊಂದಿರಬೇಕಾದ ಸದ್ಗುಣಗಳಿಗೆ ಶಿಕ್ಷಕ ಜೀವಂತ ಉದಾಹರಣೆಯಾಗಿರಬೇಕು. ಮತ್ತು ಶಿಕ್ಷಕ ಅವರ ಅತ್ಯಂತ ಒಳ್ಳೆಯ ಮಿತ್ರನಾಗಿರಬೇಕು, ಅವರು ದೊರಕಿಸಬೇಕಾದ ಗುಣಲಕ್ಷಣಗಳಿಗೆ ಉದಾಹರಣೆ ಕೊಡುವವನಾಗಿರಬೇಕು.

**CWM, 12/194** **– ಶ್ರೀಮಾತೆ**

*

ಸ್ವಾತಂತ್ರ್ಯವನ್ನು ಕುರಿತು ನಾನು ಹೇಳುತ್ತಿರುವುದು ಆತ್ಮದ ಸಂಕಲ್ಪವನ್ನು ಅನುಸರಿಸಲು ಅವಶ್ಯವಾದ ಸ್ವಾತಂತ್ರ್ಯ, ಮಾನಸಿಕ ಹಾಗೂ ಪ್ರಾಣಿಕಗಳ ಭ್ರಾಂತಿ ಹಾಗೂ ಹುಚ್ಚಾಟಗಳನ್ನು ಅನುಸರಿಸುವ ಸ್ವಾತಂತ್ರ್ಯವಲ್ಲ. ನಿಮ್ನತರ ಅಜ್ಞಾನಿ

ಸತ್ತೆಯ ಎಲ್ಲ ದೌರ್ಬಲ್ಯಗಳನ್ನು ಹಾಗೂ ಆಸೆಗಳನ್ನು ಮೀರಿ ಹೋಗುವ ಪ್ರವೃತ್ತಿಯುಳ್ಳ ಸರಳ ಸತ್ಯದ ಸ್ವಾತಂತ್ರ್ಯ ಕುರಿತು ನಾನು ಮಾತನಾಡುತ್ತಿದ್ದೇನೆ. ಮನುಷ್ಯ ತನ್ನ ಅತ್ಯುಚ್ಚ, ಅತ್ಯಂತ ಉದಾತ್ತ ಹಾಗೂ ಅತ್ಯಂತ ದೈವೀ ಅಭೀಪ್ಸೆಗೆ ಯಾವ ಕಾದಿರಿಸಿಕೊಳ್ಳುವಿಕೆ ಇಲ್ಲದೆ ತನ್ನನ್ನು ಮುಡುಪಾಗಿರಿಸಿಕೊಳ್ಳುವಿಕೆಯ ಸ್ವಾತಂತ್ರ್ಯ ಕುರಿತು ಹೇಳುತ್ತಿದ್ದೇನೆ.

ನಿಮ್ಮಲ್ಲಿ ಯಾರು ಆ ಮಾರ್ಗವನ್ನು ನಿಷ್ಕಪಟತನದಿಂದ ಅನುಸರಿಸುತ್ತಿರುವಿರಿ? ತೀರ್ಮಾನ ಕೊಡುವುದು ಸುಲಭ, ಅರ್ಥ ಮಾಡಿಕೊಳ್ಳಲು ಅದು ಕಠಿಣವಾದದ್ದು ಮತ್ತು ಸಿದ್ಧಿಸಿಕೊಳ್ಳುವುದು ಇನ್ನೂ ಹೆಚ್ಚು ಕಠಿಣವಾದದ್ದು.

**CWM, 12/391** **– ಶ್ರೀಮಾತೆ**

*

ಎರಡು ಕಾರ್ಯಗಳನ್ನು ಕೈಕೊಳ್ಳುವುದು ಅವಶ್ಯವಾಗಿದೆ:

ಅ) ಪರಿಣಾಮಗಳೇನೇ ಇರಲಿ ಸುಳ್ಳು ಹೇಳಬಾರದು

ಬ) ಹಿಂಸೆ, ಉದ್ವೇಗ ಹಾಗೂ ಸಿಟ್ಟು ಇವುಗಳನ್ನು ನಿಯಂತ್ರಣದಲ್ಲಿಟ್ಟು–ಕೊಳ್ಳಬೇಕು.

ಇವೆರಡೂ ಕಾರ್ಯಗಳನ್ನು ಕೈಕೊಳ್ಳಬಹುದು, ಅವುಗಳನ್ನು ಅತಿಮಾನವತೆಯತ್ತ ಕರೆದೊಯ್ಯಬಹುದು. ಸಂಪ್ರದಾಯಗಳನ್ನು ಹಾಗೂ ಕಟ್ಟುನಿಟ್ಟುಗಳನ್ನು ಮನುಷ್ಯ ಮುರಿದು ಹಾಕಿದರೆ ಅವನು ಸರ್ವಸಾಧಾರಣ ಮನುಕುಲದಿಂದ ಮುಕ್ತನಾಗಿರುತ್ತಾನೆಂಬ ವಿಚಾರವಿದೆ. ಆದರೆ ಇದು ತಪ್ಪಾದದ್ದು. “ಅತಿಮಾನವ” ಎಂದು ಕರೆಯಬಹುದಾದುದಕ್ಕೆ ಅವೆರಡೂ ವಿಷಯಗಳನ್ನು ಸಿದ್ಧಿಸಿಕೊಳ್ಳಲು ಶಕ್ತನಾಗಬೇಕು: ಸುಳ್ಳು ಹೇಳದೆ ಇರುವುದು ಮತ್ತು ತನ್ನ ಮೇಲೆ ನಿಯಂತ್ರಣ ಹೊಂದಿರುವುದು. ಭಗವಂತನಿಗೆ ಸಂಪೂರ್ಣವಾಗಿ ಅರ್ಪಿಸಿಕೊಳ್ಳುವುದು ಕೊನೆಯ ಷರತ್ತು, ಆದರೆ ಇವೆರಡು ಸಿದ್ಧಿಸಿಕೊಳ್ಳಬೇಕಾದ ಮೊದಲ ಎರಡು ವಿಷಯಗಳಾಗಿರುತ್ತವೆ.

*

ಮಗುವಿಗೆ ಕೊಡಬಹುದಾದ ಅತ್ಯಂತ ಮೌಲಿಕ ಕೊಡುಗೆ ಎಂದರೆ ಎಲ್ಲೆಡೆಯಲ್ಲಿಯೂ, ಯಾವಾಗಲೂ ಕಲಿತುಕೊಳ್ಳುವುದನ್ನು ಪ್ರೀತಿಸುವುದಾಗಿದೆ.

*

ತನ್ನನ್ನು ತಿಳಿದುಕೊಳ್ಳುವುದನ್ನು ಹಾಗೂ ತನ್ನ ಮೇಲೆ ಪ್ರಭುತ್ವ ಹೊಂದಿರುವುದನ್ನು ಕಲಿತುಕೊಂಡಿರುವುದು ಪ್ರತಿಯೊಬ್ಬ ಜೀವಂತ ಸತ್ತೆಗೆ ಅಮೂಲ್ಯ ಸಂಪತ್ತಾಗಿರುತ್ತದೆ. ತನ್ನನ್ನು ತಾನು ತಿಳಿದುಕೊಂಡಿರುವುದರ ಅರ್ಥ ಅವನು ತನ್ನ ಕ್ರಿಯೆಗಳ ಪ್ರತಿಕ್ರಿಯೆಗಳ ಉದ್ದೇಶವನ್ನು, ತನ್ನಲ್ಲಿ ಸಂಭವಿಸುತ್ತಿರುವ ಎಲ್ಲದರ ಏಕೆ ಮತ್ತು ಹೇಗೆ ಎಂಬುದನ್ನು ತಿಳಿದುಕೊಳ್ಳುವುದಾಗಿದೆ. ತನ್ನ ಮೇಲೆ ಪ್ರಭುತ್ವ ಪಡೆಯುವುದರ ಅರ್ಥ ಮನುಷ್ಯ ತಾನು ಕೈಕೊಳ್ಳಬೇಕು ಎಂದು ನಿರ್ಧರಿಸಿದ್ದನ್ನು ಕೈಕೊಳ್ಳುವುದಾಗಿದೆ, ಅದನ್ನಲ್ಲದೆ ಬೇರೆ ಏನನ್ನೋ ಅಲ್ಲ, ಪ್ರೇರಣೆಗಳಿಗೆ, ಆಸೆಗಳಿಗೆ ಹಾಗೂ ಭ್ರಮೆಗಳಿಗೆ ಕಿವಿಗೊಡದೆ ಇರುವುದಾಗಿದೆ.

ಮಗುವಿಗೆ ನೈತಿಕ ನಿಯಮವೊಂದನ್ನು ಕೊಡುವುದು, ಸ್ಪಷ್ಟವಾಗಿ ಆದರ್ಶದ ವಿಷಯವಲ್ಲ. ಆದರೆ ಅದನ್ನು ಮಾಡದೆ ಇರುವುದು ಕಠಿಣವಾದದ್ದು. ಆದರೆ ಅವನು ಬೆಳೆದ ಹಾಗೆ ಎಲ್ಲ ನೈತಿಕ ಹಾಗೂ ಸಾಮಾಜಿಕ ನಿಯಮಗಳ ಸಾಪೇಕ್ಷತೆಯನ್ನು ಅವನಿಗೆ ಕಲಿಸಿಕೊಡಬಹುದು, ಅದರಿಂದಾಗಿ ಅವನು ತನ್ನಲ್ಲಿ ಒಂದು ಉಚ್ಚತರ ಹಾಗೂ ಹೆಚ್ಚು ಸತ್ಯವಾದ ನಿಯಮವನ್ನು ಕಂಡುಕೊಳ್ಳಬಹುದು. ಆದರೆ ಇಲ್ಲಿ ಮನುಷ್ಯ ಜಾಗರೂಕತೆಯಿಂದ ಮುಂದುವರಿಯಬೇಕು ಮತ್ತು ಹೆಚ್ಚು ಸತ್ಯವಾದ ನಿಯಮದ ಶೋಧ ಮಾಡುವುದರ ತೊಂದರೆಯ ಮೇಲೆ ಒತ್ತುಕೊಡಬೇಕು. ಮಾನವರ ನಿಯಮಗಳನ್ನು ತಿರಸ್ಕರಿಸುವ, ತಮ್ಮ ಸ್ವಾತಂತ್ರ್ಯವನ್ನು ಮತ್ತು "ತಮ್ಮದೇ ಜೀವನವನ್ನು ಜೀವಿಸುವ" ನಿರ್ಧಾರ ಕುರಿತು ಸಾರಿ ಹೇಳುವ ಬಹಳಷ್ಟು ಜನರು ಅತ್ಯಂತ ಸರ್ವಸಾಮಾನ್ಯ ಪ್ರಾಣಿಕ ಚಲನೆಗಳಿಗೆ ವಿಧೇಯರಾಗುವುದರ ಮೂಲಕ ಹಾಗೆ ಮಾಡುತ್ತಾರೆ, ಆ ಚಲನೆಗಳನ್ನು ಅವರು ಮುಸುಕಿನಲ್ಲಿರಿಸುತ್ತಾರೆ, ತಮ್ಮ ಕಣ್ಣುಗಳಿಗಾಗಿ ಅಲ್ಲದಿದ್ದರೂ ಕನಿಷ್ಠಪಕ್ಷ ಇತರರ ಕಣ್ಣುಗಳಿಗೆ ಹಾಗೆ ಕಾಣುವಂತೆ ಮಾಡುತ್ತಾರೆ. ನೈತಿಕತೆಗೆ ಅವರು ಒದೆ ಕೊಡುತ್ತಾರೆ, ಸರಳವಾಗಿ ಏಕೆಂದರೆ ಅದು ಅವರ ಹುಟ್ಟುಗುಣಗಳ ತೃಪ್ತಿಗೆ ಅಡ್ಡ ಬರುವಂತಿರುತ್ತದೆ.

ಸಾಮಾಜಿಕ ಹಾಗೂ ನೈತಿಕ ನಿಯಮಗಳ ಮೇಲ್ಗಡೆಗಿರುವ ಆಸನವನ್ನು ಅಲಂಕರಿಸದೆ ಇದ್ದವನಿಗೆ ಆ ನಿಯಮಗಳನ್ನು ಕುರಿತು ತೀರ್ಮಾನ ಕೊಡುವ ಅಧಿಕಾರವಿರುವುದಿಲ್ಲ, ಮನುಷ್ಯ ಅವುಗಳ ಸ್ಥಾನದಲ್ಲಿ ಹೆಚ್ಚು ಉನ್ನತವಾದ ಏನೋ ಒಂದನ್ನು ಇರಿಸಲು ಶಕ್ತನಾಗುವವರೆಗೆ ಅವುಗಳನ್ನು ಬಿಟ್ಟುಕೊಡಬಾರದು. ಅದು ಅಷ್ಟು ಸುಲಭವಾದ ಕಾರ್ಯವಲ್ಲ.

ಸಂದರ್ಭ ಯಾವುದೇ ಇರಲಿ, ಮಗುವೊಬ್ಬನಿಗೆ ಕೊಡಬಹುದಾದ ಅತ್ಯಂತ ಒಳ್ಳೆಯ ಕೊಡುಗೆ ಎಂದರೆ ತನ್ನನ್ನೇ ತಾನು ತಿಳಿದುಕೊಳ್ಳುವುದನ್ನು ತನ್ನ ಮೇಲೆಯೇ ಪ್ರಭುತ್ವ ಪಡೆಯುವುದನ್ನು ಕಲಿಸಿಕೊಡುವುದಾಗಿದೆ.

**CWM, 12/166** **– ಶ್ರೀಮಾತೆ**

*



*Thy smile within my heart*
*makes all my strength.*

- Sri Aurobindo

**RNI No. 22511/1971**
No. of Pages **64 + 4 (Cov. Page)**
KAR Reg No : RNP/KA/BGS/368/2018-2020
Date of Publication on 7th of Every Month
Permitted to Post 10th of Every Month. Reg. Valid till : 31-12-2020
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ಅತಿಥಿ ಗೃಹ ಸೌಲಭ್ಯವಿರುತ್ತದೆ. ಶ್ರೀಮಾತಾರವಿಂದರ ಭಕ್ತರು, ಗುರು-ಬಂಧುಗಳು, ಸದಸ್ಯರು ಮತ್ತು ಕೇಂದ್ರ ಹಾಗೂ ಶಾಖೆಗಳ ಪದಾಧಿಕಾರಿಗಳಿಗೆ ಸೌಲಭ್ಯದಲ್ಲಿ ರಿಯಾಯತಿ ಪಡೆಯಬೇಕಾದಲ್ಲಿ ಮುಂಚಿತವಾಗಿ ತಿಳಿಸುವುದು. ಸದಸ್ಯರು ಚಾಲ್ತಿಯಲ್ಲಿರುವ ತಮ್ಮ ಸದಸ್ಯತ್ವದ ಗುರುತಿನ ಚೀಟಿಯನ್ನು ಹೊಂದಿರಬೇಕಾಗುತ್ತದೆ.

**ಸಂಪರ್ಕಿಸಬೇಕಾದ ವಿಳಾಸ:**

ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ, ಬೆಂಗಳೂರು - 560 078.
ದೂರವಾಣಿ: 080 - 22339882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.